

ಮೈಸೂರು ಮಿತ್ರ

ಮೈಸೂರು-ಮಂಡ್ಯ-ಚಾಮರಾಜನಗರ-ಕೊಡಗು-ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ನವೆಂಬರ್ 12 ಭಾನುವಾರ 2023

ಸಂಪುಟ: 44 | ಸಂಚಿಕೆ: 206 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ- ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.co


₹4



ಲಿಂಗಾಯತ-ಒಕ್ಕಲಿಗ ಕಾಂಬಿನೇಷನ್‌ನಲ್ಲಿ ಲೋಕಸಭಾ ಚುನಾವಣೆ ಗೆಲ್ಲುವ

ಬಿಜೆಪಿ ವರಿಷ್ಠರ ಮಾಸ್ಟರ್ ಪ್ಲಾನ್

■ ಹಿಂದುಳಿದ ವರ್ಗಗಳ ಆಯೋಗದ ವರದಿಗೆ ಪ್ರಬಲ ಸಮುದಾಯಗಳ ಪ್ರತ್ಯಸ್ತ್ರ ಬಳಕೆ ■ ಬಿಎಸ್‌ವೈ-ಹೆಚ್‌ಡಿಕೆ ಜಂಟಿ ಪ್ರಚಾರದಿಂದ ಬಂಪರ್ ನಿರೀಕ್ಷೆ



ಬೆಂಗಳೂರು, ನ.11(ಕೆಎಂಶಿ)-ಲಿಂಗಾಯತ ಹಾಗೂ ಒಕ್ಕಲಿಗ ಸಮುದಾಯವನ್ನು ಮುಂದಿಟ್ಟು ಕೊಂಡು ಲೋಕಸಭಾ ಚುನಾವಣೆ ಎದುರಿಸುವ ಉದ್ದೇಶದಿಂದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಪುತ್ರ ವಿಜಯೇಂದ್ರ ಅವರಿಗೆ ರಾಜ್ಯಾಧ್ಯಕ್ಷ ಪಟ್ಟವನ್ನು ಬಿಜೆಪಿ ವರಿಷ್ಠರು ನೀಡಿದ್ದಾರೆ. ಒಕ್ಕಲಿಗ ಸಮುದಾಯದ ಜೆಡಿಎಸ್ ರಾಜ್ಯಾಧ್ಯಕ್ಷ, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಎನ್‌ಡಿಎ ಕೂಟ ಸೇರಿರುವುದರಿಂದ ಯಡಿಯೂರಪ್ಪ ಮತ್ತು ಕುಮಾರಸ್ವಾಮಿ ಜಂಟಿಯಾಗಿ ಪ್ರಚಾರ ಮಾಡಿದಲ್ಲಿ ಲೋಕಸಭಾ ಚುನಾವಣೆಯಲ್ಲಿ 20ಕ್ಕೂ ಹೆಚ್ಚು ಸ್ಥಾನಗಳನ್ನು ಗಳಿಸಬಹುದು ಎಂಬ ಲೆಕ್ಕಾಚಾರ ಬಿಜೆಪಿ ವರಿಷ್ಠರದ್ದಾಗಿದೆ.


ಪಕ್ಷದಲ್ಲಿ ಒಂದು ವರ್ಗ ಎಷ್ಟೇ ವಿರೋಧ ಮಾಡಿದರೂ ತಮ್ಮಲ್ಲಿರುವ ಅಸಮಾಧಾನವನ್ನು ಬದಿಗಿಟ್ಟು ಸಂಖ್ಯಾಬಲ ದೃಷ್ಟಿಯಿಂದ ಯಡಿಯೂರಪ್ಪ ಅವರ ಪುತ್ರರಿಗೆ ಈ ಸ್ಥಾನ ಕಲ್ಪಿಸಿದ್ದಾರೆ.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಅಹಿಂದ ಓಲೈಕೆಗೆ ಹೆಚ್ಚು ಒತ್ತು ನೀಡಿದ್ದಲ್ಲದೆ, ಹಿಂದುಳಿದ ವರ್ಗಗಳ ಆಯೋಗದ ವರದಿಯನ್ನು ಸ್ವೀಕರಿಸುವುದಾಗಿ ನೀಡಿರುವ ಹೇಳಿಕೆ ಲಿಂಗಾಯತ ಮತ್ತು ಒಕ್ಕಲಿಗ ಸಮುದಾಯಗಳ ಕೆಂಗಣ್ಣಿಗೆ ಗುರಿಯಾಗಿದೆ.

ಆಯೋಗದ ವರದಿಯನ್ನೇ ಕರ್ನಾಟಕದ ಮಟ್ಟಿಗೆ ಲೋಕಸಭಾ ಚುನಾವಣಾ ಅಸ್ತ್ರವಾಗಿ ಬಳಸಲು ನಿರ್ಧರಿಸಿರುವ ಬಿಜೆಪಿ ವರಿಷ್ಠರು, ಇದೇ ಸಂದರ್ಭದಲ್ಲಿ ಮುಂದುವರೆದ ಎರಡು ಸಮುದಾಯಗಳನ್ನು ಒಂದೇ ವೇದಿಕೆಗೆ ತರುವ ಉದ್ದೇಶದಿಂದ ವಿಜಯೇಂದ್ರ ಅವರನ್ನು ಸಾರಥಿಯನ್ನಾಗಿ ▶ 9ನೇ ಪುಟಕ್ಕೆ

ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನಕ್ಕೆ ನಾನೇನು ದೆಹಲಿಯಲ್ಲಿ ಲಾಬಿ ಮಾಡಿಲ್ಲ!

- ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಸ್ಪಷ್ಟನೆ
- ಬೇಕಿದ್ದರೆ ನೀವೇ ಕೇಳಿ ನೋಡಿ; ಮಾಧ್ಯಮದವರಿಗೆ ಪ್ರಶ್ನೆ



ಬೆಂಗಳೂರು, ನ.11(ಕೆಎಂಶಿ)-ಪುತ್ರ ವಿಜಯೇಂದ್ರ ಅವರಿಗೆ ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನ ನೀಡುವಂತೆ ನಾನೇನು ದೆಹಲಿಯಲ್ಲಿ ಲಾಬಿ ಮಾಡಿಲ್ಲ ಎಂದು ಸ್ಪಷ್ಟಪಡಿಸಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು, ಈ ಸ್ಥಾನ ದಕ್ಕುತ್ತದೆ ಎಂಬ ನಿರೀಕ್ಷೆಯೂ ಇರಲಿಲ್ಲ ಎಂದಿದ್ದಾರೆ.

ಲೋಕಸಭಾ ಚುನಾವಣಾ ಹೊಸ್ತಿಲಲ್ಲಿ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಷಾ, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಸಕಾಲದಲ್ಲಿ ಒಳ್ಳೆಯ ನಿರ್ಧಾರ ಮಾಡಿದ್ದಾರೆ ಎಂದು ಶ್ಲಾಘಿಸಿದರು ▶ 9ನೇ ಪುಟಕ್ಕೆ

ನ.15ರಂದು ಬಿ.ವೈ.ವಿಜಯೇಂದ್ರ ಅಧಿಕಾರ ಸ್ವೀಕಾರ

ಬೆಂಗಳೂರು, ನ. 11- ಬಿಜೆಪಿಯ ನೂತನ ರಾಜ್ಯಾಧ್ಯಕ್ಷರಾಗಿ ನೇಮಕಗೊಂಡಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪುತ್ರ ಬಿ.ವೈ.ವಿಜಯೇಂದ್ರ ನವೆಂಬರ್ 15ರಂದು ಪದಗ್ರಹಣ ಮಾಡಲಿದ್ದಾರೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಅಂದು ಮಧ್ಯಾಹ್ನ 1 ಗಂಟೆಗೆ ಬೆಂಗಳೂರು ಅರಮನೆ ಮೈದಾನದಲ್ಲಿ ಬೃಹತ್ ಸಮಾವೇಶ ಆಯೋಜಿಸಿ, ಈ ಸಮಾವೇಶದಲ್ಲಿ ಲಕ್ಷಾಂತರ ಕಾರ್ಯಕರ್ತರ ಸಮ್ಮುಖದಲ್ಲಿ ವಿಜಯೇಂದ್ರ ಅವರು ನಿರ್ಗಮಿತ ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲ್ ಅವರಿಂದ ಅಧಿಕಾರ ಸ್ವೀಕರಿಸಲಿದ್ದಾರೆ. ವಿಜಯೇಂದ್ರ ಪದಗ್ರಹಣ ಸಮಾವೇಶಕ್ಕೆ ಪಕ್ಷದ ರಾಜ್ಯ ನಾಯಕರು ಮಾತ್ರವಲ್ಲದೇ ರಾಷ್ಟ್ರೀಯ ನಾಯಕರೂ ಕೂಡ ಆಗಮಿಸಲಿದ್ದಾರೆ. ವಿಜಯೇಂದ್ರ ಪದಗ್ರಹಣ ಸಮಾವೇಶವು ಶಕ್ತಿ ಪ್ರದರ್ಶನವಾಗಿರುತ್ತದೆ ಎಂದು ಹೇಳಲಾಗಿದೆ. ವಿಜಯೇಂದ್ರ ಅವರ ಪದಗ್ರಹಣ ಸಮಾವೇಶಕ್ಕೆ ಆಗಮಿಸಲಿರುವ ಕೇಂದ್ರ ನಾಯಕರು ಅಂದು ಬೆಂಗಳೂರಿನಲ್ಲೇ ▶ 9ನೇ ಪುಟಕ್ಕೆ

ನಕಲಿ ಮರಣ ಪ್ರಮಾಣ ಪತ್ರ, ವಂಶವೃಕ್ಷ ಸೃಷ್ಟಿಸಿ ವಾರಸುದಾರರಲ್ಲದವರಿಗೆ ಆಸ್ತಿ ಖಾತೆ

ತಿ.ನರಸೀಪುರದ ಹಿಂದಿನ ಆರ್‌ಐ, ಗ್ರಾಮ ಆಡಳಿತಾಧಿಕಾರಿಗಳಿಬ್ಬರ ಅಮಾನತು

ಆರ್‌ಟಿಐ ಕಾರ್ಯಕರ್ತ ಬಿ.ಎನ್.ನಾಗೇಂದ್ರ ದೂರಿನನ್ವಯ ಮೈಸೂರು ಉಪವಿಭಾಗಾಧಿಕಾರಿ ಕೆ.ಆರ್.ರಕ್ಷಿತ್ ವರದಿ ಮೇರೆಗೆ ಮೈಸೂರು ಜಿಲ್ಲಾಧಿಕಾರಿ ಕೆ.ವಿ.ರಾಜೇಂದ್ರ ದಿಟ್ಟ ಕ್ರಮ


ತಿ.ನರಸೀಪುರ ತಾಲೂಕು ಕಚೇರಿ


ಡಾ.ಕೆ.ವಿ.ರಾಜೇಂದ್ರ
ಮೈಸೂರು ಜಿಲ್ಲಾಧಿಕಾರಿ


ಕೆ.ಆರ್.ರಕ್ಷಿತ್
ಮೈಸೂರು ಉಪವಿಭಾಗಾಧಿಕಾರಿ

■ ಎಸ್.ಟಿ.ರವಿಕುಮಾರ್


ಅಮಾನತುಗೊಂಡ ಕೆ.ದೇವಣ್ಣ

ಮೈಸೂರು, ನ. 11- ಬದುಕಿರುವ ವ್ಯಕ್ತಿಗಳ ನಕಲಿ ಮರಣ ಪ್ರಮಾಣ ಪತ್ರ ಹಾಗೂ ವಂಶವೃಕ್ಷ ತಯಾರಿಸಿ ವಾರಸುದಾರರಲ್ಲದ ವ್ಯಕ್ತಿಗಳಿಗೆ ಅಕ್ರಮವಾಗಿ ಜಮೀನಿನ ಖಾತೆ ಮಾಡಿಕೊಟ್ಟಿದ್ದ ಮೂವರು ಅಧಿಕಾರಿಗಳನ್ನು ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸೇವೆಯಿಂದ ಅಮಾನತು ಗೊಳಿಸಿದ್ದಾರೆ. ತಿ.ನರಸೀಪುರ ತಾಲೂಕು ಕಚೇರಿಯ ಕಸಬಾ ಹೋಬಳಿ ಹಿಂದಿನ ರಾಜಸ್ವ ನಿರೀಕ್ಷಕ (ಹಾಲಿ ತಿ.ನರಸೀಪುರ ತಾಲೂಕು ಕಚೇರಿ ಆಹಾರ ನಿರೀಕ್ಷಕ) ಕೆ.ದೇವಣ್ಣ, ಭೈರಾಪುರ ವೃತ್ತದ ಹಿಂದಿನ ಗ್ರಾಮ ಆಡಳಿತಾಧಿಕಾರಿ (ಹಾಲಿ ಜಯಪುರ ಹೋಬಳಿ ಜಯಪುರ ವೃತ್ತ) ಪ್ರದೀಪ್ ಸಿಂಗ್ ಹಾಗೂ ತಿ.ನರಸೀಪುರ ತಾಲೂಕು ಕಚೇರಿ, ಭೂಮಿ ಕೇಂದ್ರದ ಗ್ರಾಮ ಆಡಳಿತಾಧಿಕಾರಿ ಶ್ರೀಮತಿ ಹಂಸಲೇಖ ಅಕ್ರಮ ವೆಸಗಿದ ಪರಿಣಾಮ ಅಮಾನತುಗೊಂಡ ಅಧಿಕಾರಿಗಳು. ತಿ.ನರಸೀಪುರ ತಾಲೂಕು, ಕಸಬಾ ಹೋಬಳಿ, ತಿರುಮಕೂಡಲು ಗ್ರಾಮದ ಸರ್ವೇ ನಂಬರ್ 55/2ರಲ್ಲಿ 22 ಗುಂಟೆ ಮತ್ತು 55/6ರಲ್ಲಿ 8 ಗುಂಟೆ ಜಮೀನನ್ನು ಅಕ್ರಮವಾಗಿ ದಾಖಲೆಗಳನ್ನು ಸೃಷ್ಟಿಸಿ ವಾರಸುದಾರರಲ್ಲದ ವ್ಯಕ್ತಿಗಳ ಹೆಸರಿಗೆ ಖಾತೆ ಮಾಡಿಕೊಟ್ಟು ಭಾರಿ ಪ್ರಮಾಣದ ಕಿಕ್‌ಬ್ಯಾಕ್ ಪಡೆದಿದ್ದಾರೆ ಎಂದು ಮೈಸೂರಿನ ಆರ್‌ಟಿಐ ▶ 9ನೇ ಪುಟಕ್ಕೆ

ಗಜ ಪ್ರಸವ ಆಗಿದೆ; ಇನ್ನು ಗಜ ಮೋಕ್ಷ ಮಾಡಲಿ...!

ಬಿಜೆಪಿ ರಾಜ್ಯಾಧ್ಯಕ್ಷರು, ವಿಪಕ್ಷ ನಾಯಕನ ಆಯ್ಕೆ ಸಂಬಂಧ ಸಂಸದ ಶ್ರೀನಿವಾಸ ಪ್ರಸಾದ್ ಪ್ರತಿಕ್ರಿಯೆ



ಮೈಸೂರು, ನ. 11- ರಾಜ್ಯಾಧ್ಯಕ್ಷರ ಆಯ್ಕೆ ಮೂಲಕ ಬಿಜೆಪಿ ಹೈಕಮಾಂಡ್ ಕೊನೆಗೂ ಗಜಪ್ರಸವ ಮಾಡಿದೆ. ಪ್ರತಿಪಕ್ಷದ ನಾಯಕನ ಆಯ್ಕೆಯನ್ನೂ ಮಾಡಿ ಗಜಮೋಕ್ಷ ಮಾಡಲಿ ಎಂದು ಚಾಮರಾಜನಗರ ಸಂಸದ ಶ್ರೀನಿವಾಸ್ ಪ್ರಸಾದ್ ಹೇಳಿದರು. ನಗರದಲ್ಲಿ ಶನಿವಾರ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ವಿಜಯೇಂದ್ರ ಅವರ ಮುಂದೆ ಬೆಟ್ಟದಷ್ಟು ಸವಾಲುಗಳಿವೆ. ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳು ಬಿರುಸಿನಿಂದ ಓಡಾಡುತ್ತಿವೆ. ಅದನ್ನು ತಡೆದು ಪಕ್ಷ ಸಂಘಟನೆ ಮಾಡಬೇಕಾಗಿದೆ ಎಂದರು. ವಿಜಯೇಂದ್ರ ಆಯ್ಕೆ ವಿಚಾರದಲ್ಲಿ ಕುಟುಂಬ ರಾಜಕಾರಣದ ಪ್ರಶ್ನೆ ಇಲ್ಲ. ದೇವೇಗೌಡರು, ಸಿದ್ದರಾಮಯ್ಯ ಎಲ್ಲರೂ ಕುಟುಂಬ ರಾಜಕಾರಣ ಮಾಡಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಎಲ್ಲರೂ ರಾಜಕಾರಣ ಮಾಡುತ್ತಾರೆ ಎಂದು ಹೇಳುವ ಮೂಲಕ ವಿಜಯೇಂದ್ರ ಆಯ್ಕೆಯನ್ನು ಸಮರ್ಥಿಸಿಕೊಂಡರು. ಲೋಕಸಭಾ ಚುನಾವಣೆಗೆ ವಿಜಯೇಂದ್ರ ಆಯ್ಕೆ ಅನುಕೂಲವಾಗುತ್ತದೆ ಎಂದು ಈಗಲೇ ಹೇಳಲು ಸಾಧ್ಯವಿಲ್ಲ ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಮಾರ್ಚ್ 17ಕ್ಕೆ ತಾವು ಚುನಾವಣಾ ರಾಜಕಾರಣಕ್ಕೆ ಬಂದು 50 ವರ್ಷವಾಗಲಿದ್ದು, ಅದೇ ದಿನ ಬೃಹತ್ ಕಾರ್ಯಕ್ರಮ ಆಯೋಜಿಸಿ ರಾಜಕೀಯ ನಿವೃತ್ತಿ ಘೋಷಣೆ ಮಾಡುವುದಾಗಿ ತಿಳಿಸಿದ ಅವರು, ನಂತರ ಎಂದಿಗೂ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುವುದಿಲ್ಲ. ರಾಜಕೀಯ ನಿವೃತ್ತಿ ಬಳಿಕ ಯಾವುದೇ ಪಕ್ಷದ ಪರವಾಗಿ ಪ್ರಚಾರ ಮಾಡುವುದಿಲ್ಲ. ಯಾವ ಪಕ್ಷಕ್ಕೂ ಸಲಹೆ ಸೂಚನೆಗಳನ್ನು ನೀಡುವುದಿಲ್ಲ. ಎಲ್ಲಾ ರಾಜಕೀಯ ಚಟುವಟಿಕೆಗಳಿಂದಲೂ ಸಂಪೂರ್ಣವಾಗಿ ದೂರ ಉಳಿಯುತ್ತೇನೆ ಎಂದು ಶ್ರೀನಿವಾಸಪ್ರಸಾದ್ ಹೇಳಿದರು.

ಕೆಬಿಜಿಯವರ ಛೂಮಂತ್ರ.. ಛೂಮಂತ್ರ...



ಸ್ಮೃತಿಪಟಲದಿಂದ ಮರೆಯಾದ ದೇವಮಾನವನನ್ನು ನೆನೆದು...
■ ಪುಟ-4



ಬಿ.ವೈ.ವಿಜಯೇಂದ್ರ ಬಿಜೆಪಿ ರಾಜ್ಯಾಧ್ಯಕ್ಷರಾಗಿದ್ದು ಜೆಡಿಎಸ್-ಬಿಜೆಪಿ ಮೈತ್ರಿಗೆ ಮತ್ತಷ್ಟು ಬಲ ಬಂತು

ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರಾದ ಶಾಸಕ ಜಿ.ಟಿ.ದೇವೇಗೌಡರ ಅಭಿಪ್ರಾಯ

- ■ ಬಿಜೆಪಿ ವರಿಷ್ಠರಲ್ಲಿ ಜೆಡಿಎಸ್ ಷರತ್ತು ಹಾಕಿಲ್ಲ
- ■ ಕಾಂಗ್ರೆಸ್ ಸರ್ಕಾರ ಪತನ ಜನರ ಮನದಾಸೆ
- ■ ಹಾಸನಾಂಬೆ ಮುಂದೆ ಪಕ್ಷ ಕಟ್ಟುವ ಪ್ರತಿಜ್ಞೆ
- ■ ಕುಮಾರಸ್ವಾಮಿ ಮುಖ್ಯಮಂತ್ರಿ ಮಾಡುವ ಗುರಿ



ಮೈಸೂರು, ನ.11(ಬಿಎಲ್‌ಯು)- ಬಿಜೆಪಿ ರಾಜ್ಯಾಧ್ಯಕ್ಷರಾಗಿ ಬಿ.ವೈ.ವಿಜಯೇಂದ್ರ ನೇಮಕಗೊಂಡಿರುವುದು ಜೆಡಿಎಸ್ ಹಾಗೂ ಬಿಜೆಪಿ ಮೈತ್ರಿಗೆ ಮತ್ತಷ್ಟು ಬಲ ಬಂದಿದೆ ಎಂದು ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ಶಾಸಕರೂ ಆದ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡರು ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಜೆಡಿಎಸ್ ರಾಜ್ಯಾಧ್ಯಕ್ಷರಾಗಿ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷರಾಗಿ ವಿಜಯೇಂದ್ರ ಒಟ್ಟಾಗಿ ಹೋರಾಟ ಮಾಡಿದರೆ ಕಾಂಗ್ರೆಸ್ ಅನ್ನು ಸುಲಭವಾಗಿ ಮಣಿಸಬಹುದು ಎಂದು ಹೇಳಿದರು. ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಮೂಲೆಗುಂಪಾಗಿದ್ದಾರೆ ಎಂಬ ಕಾರಣಕ್ಕೆ ಬಿಜೆಪಿಗೆ ಹಿನ್ನಡೆಯಾಗಿತ್ತು. ಆದರೆ ಈಗ ವಿಜಯೇಂದ್ರ ಬಿಜೆಪಿ ಸಾರಥಿಯಾಗಿದ್ದು, ಯುವ ನಾಯಕರಾದ ಅವರಿಗೆ ಸಮುದಾಯದ ಬೆಂಬಲವಿದೆ. ಇದನ್ನೆಲ್ಲಾ ಯೋಚನೆ ಮಾಡಿಯೇ ಬಿಜೆಪಿ ವರಿಷ್ಠರು ವಿಜಯೇಂದ್ರ ಅವರಿಗೆ ಪಕ್ಷದ ಉನ್ನತ ಹುದ್ದೆ ನೀಡಿದ್ದಾರೆ ಎಂದು ಜಿ.ಟಿ.ದೇವೇಗೌಡರು ತಿಳಿಸಿದರು. ಯಡಿಯೂರಪ್ಪ ಸಿಎಂ ಆದ ಮೇಲೆ ವೀರಶೈವರು ಮಾತ್ರವಲ್ಲದೆ ಎಲ್ಲಾ ▶ 9ನೇ ಪುಟಕ್ಕೆ



ನಂಜನಗೂಡು ಬಳಿಯ ಸೌತ್ ಇಂಡಿಯಾ ಪೇಪರ್ ಮಿಲ್‌ನಲ್ಲಿ ಭಾರಿ ಅಗ್ನಿ ಅವಘಡ




ಪೇಪರ್, ಯಂತ್ರೋಪಕರಣ ಸೇರಿ ಕೋಟ್ಯಾಂತರ ಮೌಲ್ಯದ ಸಾಮಗ್ರಿಗಳು ಅಗ್ನಿಗಾಹುತಿ

- ಮುಂಜಾನೆ ಕಾರ್ಖಾನೆಯಲ್ಲಿ ಅಗ್ನಿ ರುದ್ರ ನರ್ತನ
- ಬೆಂಕಿ ನಂದಿಸಲು ಅಗ್ನಿಶಾಮಕ ದಳ ಹರಸಾಹಸ
- 15 ಗಂಟೆಗಳ ಕಾರ್ಯಾಚರಣೆಯಿಂದ ಜ್ವಾಲೆ ಹತೋಟಿಗೆ
- ಘಟನೆಗೆ ನಿಖರ ಕಾರಣ ಇನ್ನು ಅಸ್ಪಷ್ಟ; ಪರಿಶೀಲನೆ

ನಂಜನಗೂಡು, ನ.11(ಬಿಎಲ್‌ಯು)- ನಂಜನಗೂಡು ಹೊರವಲಯದ ಕೈಗಾರಿಕಾ ಪ್ರದೇಶದಲ್ಲಿರುವ ಹೆಸರಾಂತ ಸೌತ್ ಇಂಡಿಯಾ ಪೇಪರ್ ಮಿಲ್‌ನಲ್ಲಿ ಆಕಸ್ಮಿಕ ಅಗ್ನಿ ಅವಘಡ ಸಂಭವಿಸಿ ಭಾರಿ ಪ್ರಮಾಣದ ಪೇಪರ್, ಯಂತ್ರೋಪಕರಣ ಸೇರಿದಂತೆ ಕೋಟ್ಯಾಂತರ ಮೌಲ್ಯದ ಸಾಮಗ್ರಿಗಳು ಬೆಂಕಿಗಾಹುತಿಯಾಗಿವೆ.





ನಂಜನಗೂಡಿನ ಚಿಕ್ಕಯ್ಯನಛತ್ರದ ಬಳಿ ಇರುವ ಈ ಸೌತ್ ಇಂಡಿಯಾ ಪೇಪರ್ ಮಿಲ್ ದಕ್ಷಿಣ ಭಾರತದ ಅತ್ಯಂತ ಹಳೆಯ ಹಾಗೂ ಹೆಸರುವಾಸಿ ಕಾರ್ಖಾನೆಯಾಗಿದೆ. ಈಗ ಇದಕ್ಕೆ ಅಗ್ನಿಯ ವಕ್ರದೃಷ್ಟಿ ಬಿದ್ದಿದೆ. ಇಂದು ಮುಂಜಾನೆ ಸುಮಾರು 3 ಗಂಟೆಯಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಸಿಬ್ಬಂದಿ ತಕ್ಷಣವೇ ಈ ವಿಚಾರವನ್ನು ಅಗ್ನಿಶಾಮಕ ದಳದವರಿಗೆ ಮುಟ್ಟಿಸಿದ್ದಾರೆ. ನಂಜನಗೂಡಿನ ಅಗ್ನಿಶಾಮಕ ಕೇಂದ್ರದ ಎರಡು ವಾಹನಗಳು ಕಾರ್ಖಾನೆಗೆ ಬರುವ ವೇಳೆಗೆ ಬೆಂಕಿಯ ಕೆನ್ನಾಲಿಗೆ ವ್ಯಾಪಕವಾಗಿ ಆವರಿಸಿಕೊಂಡಿದೆ.

ತಮ್ಮ ಎರಡೇ ವಾಹನದಿಂದ ಬೆಂಕಿ ನಂದಿಸಲು ಸಾಧ್ಯವಿಲ್ಲ ಎಂಬುದು ಮನವರಿಕೆಯಾಗಿ, ಮೈಸೂರು ಸೇರಿದಂತೆ ಇತರೆಡೆಯ ಅಗ್ನಿಶಾಮಕ ಕೇಂದ್ರದ ಸಿಬ್ಬಂದಿಗೂ ಕರೆ ಮಾಡಿದರು. ತರುವಾಯ ಮೈಸೂರು, ▶ 6ನೇ ಪುಟಕ್ಕೆ




ನ.19ಕ್ಕೆ ಮೈಸೂರಲ್ಲಿ ಉದ್ಯೋಗ ಮೇಳ



ಮೈಸೂರು,ನ.11(ಜಿಎ)–ಒಕ್ಕಲಿಗ ಯುವ ಬ್ರಿಗೇಡ್ ಹಾಗೂ ಎನ್‌ಆರ್‌ಐ ಒಕ್ಕಲಿಗರ ಬ್ರಿಗೇಡ್‌ನಿಂದ ನ.19ರಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೂ ಹೆಬ್ಬಾಳದ ಲಕ್ಷ್ಮೀಕಾಂತ ದೇವಸ್ಥಾನದ ಆವರಣ ದಲ್ಲಿರುವ ಬಿಜಿಎಸ್ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಸಭಾ ಭವನದಲ್ಲಿ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು ಬ್ರಿಗೇಡ್‌ನ ಸಂಸ್ಥಾಪಕ ಅಧ್ಯಕ್ಷ ನಂಜೇಗೌಡ ನಂಜುಂಡ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು 60ಕ್ಕೂ ಹೆಚ್ಚು ಕಂಪನಿಗಳು ಮೇಳದಲ್ಲಿ ಭಾಗವಹಿಸಲಿದ್ದು, ಯಾವುದೇ ಸಮುದಾಯದ ನಿರುದ್ಯೋಗ ಯುವಕ, ಯುವತಿಯರು ಭಾಗವಹಿಸಬಹುದಾಗಿದೆ. ಸಂಸ್ಥೆಯೂ ಪ್ರತಿ ವರ್ಷ 2 ಸಾವಿರ ಮಂದಿಗೆ ಉದ್ಯೋಗ ಕೊಡಿಸಬೇಕೆಂಬ ಗುರಿ ಹೊಂದಿದೆ 150ಕ್ಕೂ ಹೆಚ್ಚು ಮಕ್ಕಳಿಗೆ ಶಿಕ್ಷಣ ಕೊಡಿಸುವ ಧ್ಯೇಯ ನಮ್ಮದಾಗಿದೆ. ಮೇಳಕ್ಕೆ ಬರುವವರು ತಮ್ಮ ಸ್ವ ವಿವರಗಳೊಂದಿಗೆ ಆಗಮಿಸಬೇಕು ಎಂದರು. ಉದ್ಯೋಗ ಮೇಳಕ್ಕೆ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ರಾಮಕೃಷ್ಣ ಆಶ್ರಮದ ಶ್ರೀ ಮುಕ್ತಿದಾನಂದ ಸ್ವಾಮೀಜಿ ಸಾನ್ನಿಧ್ಯ ಹಾಗೂ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ ಅಧ್ಯಕ್ಷ ಎಚ್.ಸಿ.ಕಿಶೋರ್ ಚಂದ್ರ ಅಧ್ಯಕ್ಷತೆ ವಹಿಸುವರು. ಬೆಂಗಳೂರಿನ ಕಿದ್ವಾಯಿ ಮೆಮೋರಿಯಲ್ ಇನ್ಸ್ಟಿಟ್ಯೂಟ್ ಆಫ್ ಆಂಕೋಲಾಜಿಯ ಮಾಜಿ ನಿರ್ದೇಶಕ ಡಾ.ಸಿ.ರಾಮಚಂದ್ರ ಚಾಲನೆ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದ ಮುಖ್ಯ ಸಲಹೆಗಾರ ಅಭಿಜಿತ್ ಇನ್ನಿತರ ಗಣ್ಯರು ಭಾಗವಹಿಸುವರು. ಹೆಚ್ಚಿನ ಮಾಹಿತಿಗೆ ಮೊ.9686564192, 9886943810, 86605 69173 ಸಂಪರ್ಕಿಸಬಹುದು ಎಂದು ವಿವರಿಸಿದರು. ಬ್ರಿಗೇಡ್‌ನ ಕಾರ್ಯದರ್ಶಿ ರಾಮಕೃಷ್ಣೇಗೌಡ, ಉಪನ್ಯಾಸಕ ಡಾ.ಪ್ರದೀಪ್ ಕುಮಾರ್, ರವಿಚಂದ್ರ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಪೇಪರ್ ಸುಬ್ಬಣ್ಣ ಇನ್ನಿಲ್ಲ



ಮೈಸೂರು,ನ.11(ಆರ್‌ಕೆ)–ಆತ್ಮೀಯರು, ಮಾಧ್ಯಮ ಬಳಗದಲ್ಲಿ 'ಪೇಪರ್ ಸುಬ್ಬಣ್ಣ' ಎಂದೇ ಕರೆಯಲ್ಪಡುತ್ತಿದ್ದ ಎಂ.ಆರ್.ಸುಬ್ರಹ್ಮಣ್ಯ(87) ಅವರು ಇಂದು ಮುಂಜಾನೆ ಮೈಸೂರಿನ ಚೆಲುವಾಂಬ ಅಗ್ರಹಾರದ ತಮ್ಮ ನಿವಾಸದಲ್ಲಿ ನಿಧನರಾದರು.

ಅವರು ಪುತ್ರಿ ಎಂ.ಎಸ್.ನಾಗಶ್ರೀ, ಪುತ್ರ ಎಂ.ಎಸ್.ನಾಗೇಂದ್ರ, ಅಪಾರ ಬಂಧು ಬಳಗ ಹಾಗೂ ಸ್ನೇಹಿತರನ್ನು ಅಗಲಿದ್ದಾರೆ. ಪತ್ನಿ ಕಮಲಮ್ಮ ಅವರು 15 ವರ್ಷಗಳ ಹಿಂದೆ ನಿಧನರಾಗಿದ್ದರು. ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಚಿತಾಗಾರದಲ್ಲಿ ಇಂದು ಮಧ್ಯಾಹ್ನ ಸುಬ್ಬಣ್ಣ ಅವರ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕನ್ನಡ, ಹಿಂದಿ, ಇಂಗ್ಲಿಷ್, ತಮಿಳು, ತೆಲುಗು, ರಾಜಸ್ಥಾನಿ, ಮಲೆಯಾಳಂ ಸೇರಿದಂತೆ ಎಲ್ಲಾ ಭಾಷೆಯ ಪತ್ರಿಕೆಗಳನ್ನು ಕಳೆದ 60 ವರ್ಷಗಳಿಂದ ಮೈಸೂರಿನ ಲ್ಯಾನ್ಸ್‌ಡೌನ್ ಬಿಲ್ಡಿಂಗ್‌ನಲ್ಲಿ ಮಾರಾಟ ಮಾಡುತ್ತಿದ್ದ ಸುಬ್ಬಣ್ಣ ಅವರು, ಕಳೆದ 6 ತಿಂಗಳ ಹಿಂದಿನವರೆಗೂ ಸೈಕಲ್ ತುಳಿದುಕೊಂಡೇ ವೃತ್ತ ಪತ್ರಿಕೆಗಳನ್ನು ಹಂಚುತ್ತಿದ್ದರಿಂದ ಅವರು ಪೇಪರ್ ಸುಬ್ಬಣ್ಣ ಎಂದೇ ಖ್ಯಾತಿಯಾಗಿದ್ದರು.

ಪತ್ರಿಕೆಗಳ ವಿತರಣೆ ವೃತ್ತಿಯಲ್ಲಿ ಸುದೀರ್ಘ ಸೇವೆ ಸಲ್ಲಿಸಿದ್ದ ಸುಬ್ಬಣ್ಣ ಅವರಿಗೆ ಮೈಸೂರು ಜಿಲ್ಲಾ ಪತ್ರಕರ್ತರ ಸಂಘವು 2023ನೇ ಸಾಲಿನ ಪ್ರಶಸ್ತಿಗೆ ಆಯ್ಕೆ ಮಾಡಿತ್ತು. ಆದರೆ ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾಗಿದ್ದ ಅವರು ಪ್ರಶಸ್ತಿ ಸ್ವೀಕಾರ ಸಮಾರಂಭದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗಿರಲಿಲ್ಲ.

ಶಾಸಕ ಟಿ.ಎಸ್. ಶ್ರೀವತ್ಸ, ಮೇಯರ್ ಶಿವಕುಮಾರ್, ಹಿರಿಯ ರಾಜಕಾರಣಿಗಳು, ಪತ್ರಿಕಾ ವಿತರಕರು, ಪತ್ರಕರ್ತರು ಇಂದು ಬೆಳಗ್ಗೆ ಸುಬ್ಬಣ್ಣ ಅವರ ಪಾರ್ಥೀವ ಶರೀರದ ಅಂತಿಮ ದರ್ಶನ ಪಡೆದು, ಸಂತಾಪ ಸೂಚಿಸಿದರು.

ಪೇಪರ್ ಸುಬ್ಬಣ್ಣ ಅವರ ನಿಧನಕ್ಕೆ ಮೈಸೂರು ಜಿಲ್ಲಾ ನ್ಯೂಸ್‌ಪೇಪರ್ಸ್ ಡಿಸ್ಟ್ರಿಬ್ಯೂಟರ್ಸ್ ಅಸೋಸಿಯೇಷನ್ ಅಧ್ಯಕ್ಷ ಬಿ.ಸುರೇಶ್, ಪ್ರಧಾನ ಕಾರ್ಯದರ್ಶಿ ಎನ್.ಕೆ. ಸುಂದರ್, ನ್ಯೂಸ್‌ಪೇಪರ್ಸ್ ಏಜೆಂಟ್ಸ್ ಅಸೋಸಿಯೇಷನ್ ಅಧ್ಯಕ್ಷ ಸುರೇಶ, ಪ್ರಧಾನ ಕಾರ್ಯದರ್ಶಿ ರವಿ, ನ್ಯೂಸ್ ಪೇಪರ್ಸ್ ಡಿಸ್ಟ್ರಿಬ್ಯೂಟರ್ಸ್ ವೆಲ್‌ಫೇರ್ ಅಸೋಸಿಯೇಷನ್ ಅಧ್ಯಕ್ಷ ಹೋಮದೇವ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ, ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ತೀವ್ರ ಸಂತಾಪ ಸೂಚಿಸಿದ್ದಾರೆ.

ತನ್ನ ವೃತ್ತಿಯಲ್ಲಿ ಹೆಜ್ಜೆ ಗುರುತು ಮೂಡಿಸಿದ್ದ ಪೇಪರ್ ಸುಬ್ಬಣ್ಣ



ಮೈಸೂರು, ನ. 11(ಆರ್‌ಕೆ)– ವೃತ್ತ ಪತ್ರಿಕೆಗಳ ಮಾರಾಟ ಮತ್ತು ಹಂಚಿಕೆ ವೃತ್ತಿಯಲ್ಲಿ ಸುಮಾರು 6 ದಶಕಗಳ ಕಾಲ ಸೇವೆ ಸಲ್ಲಿಸಿದ್ದ ಪೇಪರ್ ಸುಬ್ಬಣ್ಣ ಸಾಂಸ್ಕೃತಿಕ ನಗರಿಯಲ್ಲಿ ತಮ್ಮದೇ ಹೆಜ್ಜೆ ಗುರುತು ಮೂಡಿಸಿದ್ದಾರೆ.

ತಮ್ಮ ಇಳಿ ವಯಸ್ಸಿನಲ್ಲೂ ಸೈಕಲ್ ತುಳಿದು ಎಲ್ಲಾ ಭಾಷೆಗಳ ವೃತ್ತ ಪತ್ರಿಕೆಗಳನ್ನು ವಿತರಿಸುತ್ತಿದ್ದರಿಂದಲೇ ಎಂ.ಆರ್. ಸುಬ್ರಹ್ಮಣ್ಯರನ್ನು, ಎಲ್ಲರೂ 'ಪೇಪರ್ ಸುಬ್ಬಣ್ಣ' ಎಂದೇ ಪ್ರೀತಿಯಿಂದ ಕರೆಯುತ್ತಿದ್ದರು. ಮೈಸೂರಿನಲ್ಲೇ ಜನಿಸಿದ ಸುಬ್ಬಣ್ಣ, ದಳವಾಯಿ ಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ಪಾಸು ಮಾಡಿದ ಬಳಿಕ ವೃತ್ತ ಪತ್ರಿಕೆ ಮಾರಾಟ ವೃತ್ತಿ ಆರಂಭಿಸಿ ಮೈಸೂರಿನ ಪತ್ರಿಕೋದ್ಯಮ ಕ್ಷೇತ್ರದಲ್ಲಿ 60 ವರ್ಷಗಳ ಕಾಲ ಅವಿರತ ಸೇವೆ ಸಲ್ಲಿಸಿದರು.


1963ರಲ್ಲಿ 'ಚಿತ್ರಾಲಯ' ಎಂಬ ಸಿನಿಮಾ ರಂಗದ ಟ್ಯಾಬ್ಲಾಯ್ಡ್ ಆರಂಭವಾದಾಗ ಅವರು ಪತ್ರಿಕಾ ವಿತರಣೆ ಏಜೆನ್ಸಿ ಪಡೆದು ಎಲ್ಲಾ ಭಾಷೆಗಳ ನಿಯತಕಾಲಿಕಗಳನ್ನು ಮಾರಾಟ ಮಾಡಲಾರಂಭಿಸಿ, ವಿವಿಧ ಮಾಸಪತ್ರಿಕೆಗಳು ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದ ಪುಸ್ತಕಗಳನ್ನೂ ಮಾರಾಟ ಮಾಡುತ್ತಿದ್ದರು.

ನಂತರ ಫಿಲಂ ಪ್ರೇಮಿಯರ ಅಸೋಸಿಯೇಷನ್ ಎಂಬ ಸಂಸ್ಥೆ ಸ್ಥಾಪಿಸಿದ್ದ ಸುಬ್ಬಣ್ಣ, ಸ್ನೇಹಿತರ ಸಹಕಾರದಿಂದ ಪತ್ರಿಕೋದ್ಯಮದ ಬೆಳವಣಿಗೆಗೆ ಹಲವು ಕಾರ್ಯಕ್ರಮ ಮಾಡಿದ್ದರು. ಲ್ಯಾನ್ಸ್‌ಡೌನ್ ಕಟ್ಟಡದ ಒಂದು ಭಾಗ ಕುಸಿದ ಬಳಿಕ ಸುಬ್ಬಣ್ಣ ಜಗನ್ಮೋಹನ ಅರಮನೆ ರಸ್ತೆಯ ದಿ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಬಳಿ ನ್ಯೂಸ್ ಪೇಪರ್ಸ್, ಮಾಸಪತ್ರಿಕೆಗಳನ್ನು ಫುಟ್‌ಪಾತ್ ಮೇಲಿರಿಸಿಕೊಂಡು ಮಾರಲಾಂಭಿಸಿದ್ದರು.

'ಸಾಹಿತ್ಯ ಗಂಗೋತ್ರಿ' ಬ್ಯಾನರ್ ಅಡಿ ಹಲವು ಕಾದಂಬರಿ ಪ್ರಕಟಿಸಿದ್ದ ಅವರು, ಕನ್ನಡ ಪುಸ್ತಕ ಓದುವ ಬಗ್ಗೆ ಜನರಲ್ಲಿ ಅರಿವು ಮೂಡಿಸುತ್ತಿದ್ದರು. ಕನ್ನಡ ಚಳವಳಿಗೆ ಧುಮುಕಿ ಇತರ ಭಾಷೆಗಳಿಗೆ ಕನ್ನಡ ಚಿತ್ರಗಳು ಡಬ್ಬಿಂಗ್ ಆಗುವುದರ ವಿರುದ್ಧ ಹೋರಾಡುತ್ತಿದ್ದರು.

ಅವರ ಕನ್ನಡಾಭಿಮಾನ, ಸಾಹಿತ್ಯಾಸಕ್ತಿಯನ್ನು ಪರಿಗಣಿಸಿ 1992ರಲ್ಲಿ ದಸರಾ ವಸ್ತುಪ್ರದರ್ಶನ ಸಮಿತಿಯು ಸುಬ್ಬಣ್ಣರನ್ನು ಗೌರವಿಸಿತಲ್ಲದೆ, ಅಂಬರೀಷ್ ಅಭಿಮಾನಿಗಳ ಸಂಘವು 1995ರಲ್ಲಿ ಅಂಬರೀಷ್ ಪ್ರಶಸ್ತಿ ನೀಡಿ ಗೌರವಿಸಿತ್ತು. ಅಲ್ಲದೆ ಕೆ.ಆರ್. ನಗರ ತಾಲೂಕು ಸಾಹಿತಿಗಳು ಸುಬ್ಬಣ್ಣ ಅವರನ್ನು 2006ರಲ್ಲಿ ಸನ್ಮಾನಿಸಿದ್ದನ್ನು, ಇಲ್ಲಿ ಸ್ಮರಿಸಬಹುದು.

ಎನ್.ಮೀನಾಕ್ಷಮ್ಮ ನಿಧನ



ಮೈಸೂರು, ನ. 11– ಮೈಸೂರಿನ ಕುವೆಂಪುನಗರ ನಿವಾಸಿ ಎನ್. ಮೀನಾಕ್ಷಮ್ಮ(86) ಅವರು ಇಂದು ನಿಧನರಾದರು. ಮೃತರು ಪುತ್ರಿ ಹಾಗೂ ಅಪಾರ ಬಂಧು ವರ್ಗ ಅಗಲಿದ್ದು, ಅಂತ್ಯಕ್ರಿಯೆ ನಾಳೆ (ಭಾನುವಾರ) ಬೆಳಗ್ಗೆ 8 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀ ರಾಮಕೃಷ್ಣ ವಿದ್ಯಾಶಾಲೆಯಲ್ಲಿ ಅರ್ಥಪೂರ್ಣ, ಅದ್ದೂರಿ ರಾಜ್ಯೋತ್ಸವ



ಮೈಸೂರು ಯಾದವಗಿರಿಯಲ್ಲಿರುವ ಶ್ರೀರಾಮಕೃಷ್ಣ ವಿದ್ಯಾಶಾಲೆಯಲ್ಲಿ ನಡೆದ ಕನ್ನಡ ರಾಜ್ಯೋತ್ಸವವನ್ನು ಸಾಹಿತಿ ಶ್ರೀಮತಿ ತಾರಿಣಿ ಚಿದಾನಂದಗೌಡ ಹಾಗೂ ಡಾ.ಕೆ.ಚಿದಾನಂದಗೌಡ ದಂಪತಿ ಉದ್ಘಾಟಿಸಿದರು. ವಿದ್ಯಾಶಾಲೆ ಮುಖ್ಯಸ್ಥರಾದ ಸ್ವಾಮಿ ಯುಕ್ತೇಶಾನಂದಜೀ ಮಹಾರಾಜ್ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

ಮೈಸೂರು, ನ.11(ಎಸ್‌ಬಿಡಿ)– ಮೈಸೂರಿನ ಯಾದವಗಿರಿಯಲ್ಲಿರುವ ಶ್ರೀರಾಮಕೃಷ್ಣ ವಿದ್ಯಾಶಾಲೆಯಲ್ಲಿ 68ನೇ ಕನ್ನಡ ರಾಜ್ಯೋತ್ಸವವನ್ನು ಇತ್ತೀಚೆಗೆ ವಿಜೃಂಭಣೆಯಿಂದ ಆಚರಿಸಲಾಯಿತು.

ಶಾಲೆಯ ಆವರಣದಲ್ಲಿ ಕನ್ನಡ ಬಾವುಟ, ಐತಿಹಾಸಿಕ ಪ್ರೇಕ್ಷಣೀಯ ತಾಣಗಳ ಚಿತ್ರಗಳು ರಾರಾಜಿಸಿದವು. ಗ್ರಂಥಾಲಯದಲ್ಲಿ ನಾಡಿನ ಮಹಾನ್ ಸಾಹಿತಿಗಳ ಚಿತ್ರಗಳು, ಪ್ರಸಿದ್ಧ ಕೃತಿಗಳನ್ನು ಅಚ್ಚುಕಟ್ಟಾಗಿ ಜೋಡಿಸಿದ್ದು ಅತ್ಯಾಕರ್ಷಕವಾಗಿತ್ತು. ಒಟ್ಟಾರೆ ಇಡೀ ಶಾಲೆಯಲ್ಲಿ ಕನ್ನಡದ ಕಂಪು ಪಸರಿಸಿತ್ತು. ವಿದ್ಯಾರ್ಥಿಗಳು, ಶಿಕ್ಷಕ ವೃಂದ ಕನ್ನಡ ಹಬ್ಬದ ಸಡಗರದಲ್ಲಿ ಮಿಂದೆದ್ದರು.

ಕರ್ನಾಟಕ ಭೂಪಟದಲ್ಲಿ ಹಸನ್ಮುಖಿಯಾದ ಕನ್ನಡಾಂಬೆ ಜೊತೆಗೆ ಸಾಹಿತ್ಯ, ಸಂಗೀತ, ನೃತ್ಯ, ನಾಟಕ, ಶಿಕ್ಷಣ, ವಿಜ್ಞಾನ ಇನ್ನಿತರ ಎಲ್ಲಾ ಕ್ಷೇತ್ರಗಳಲ್ಲೂ ಸಾಧನೆ ಮೆರೆದಿರುವ ನಾಡಿನ ಮಹನೀಯರ ಚಿತ್ರಗಳನ್ನೊಳಗೊಂಡ ವಿಶೇಷ ವೇದಿಕೆಯಲ್ಲಿ ರಾಷ್ಟ್ರಕವಿ ಕುವೆಂಪು ಅವರ ಪುತ್ರಿ, ಸಾಹಿತಿ ಶ್ರೀಮತಿ ತಾರಿಣಿ ಚಿದಾನಂದ ಗೌಡ ಹಾಗೂ ಕುವೆಂಪು ವಿವಿ ವಿಶ್ರಾಂತ ಕುಲಪತಿ ಡಾ.ಕೆ.ಚಿದಾನಂದಗೌಡ ದಂಪತಿ, ಶ್ರೀರಾಮಕೃಷ್ಣ ವಿದ್ಯಾಶಾಲೆ ಮುಖ್ಯಸ್ಥರಾದ (ಕರೆಸ್ಪಾಂಡೆಂಟ್) ಸ್ವಾಮಿ ಯುಕ್ತೇಶಾನಂದಜೀ ಮಹಾರಾಜ್ ಅವರೊಂದಿಗೆ ದೀಪ ಬೆಳಗುವ ಮೂಲಕ ರಾಜ್ಯೋತ್ಸವಕ್ಕೆ ಚಾಲನೆ ನೀಡಿದರು.



ವಿದ್ಯಾರ್ಥಿಗಳು ಪ್ರದರ್ಶಿಸಿದ ಆಕರ್ಷಕ ಜಾನಪದ ನೃತ್ಯ ಪ್ರದರ್ಶನ.

ಬಳಿಕ ಶ್ರೀಮತಿ ತಾರಿಣಿ ಚಿದಾನಂದ ಅವರು, ಕನ್ನಡ ರಾಜ್ಯದ ಉದಯ, ರಾಜ್ಯೋತ್ಸವದ ಹಿನ್ನಲೆ, ಪ್ರಸ್ತುತ ಕನ್ನಡ ಕಲಿಯಲು ವಿದ್ಯಾರ್ಥಿಗಳಿಗಿರಬೇಕಾದ ಆಸಕ್ತಿ ಹಾಗೂ ಅಗತ್ಯತೆ ಬಗ್ಗೆ ಅರ್ಥಪೂರ್ಣವಾಗಿ ತಿಳಿಸಿದರು. ಡಾ.ಕೆ.ಚಿದಾನಂದಗೌಡರು ಕನ್ನಡ ಭಾಷೆಯ ಉಗಮ, ಭಾಷೆಯ ಶ್ರೇಷ್ಠತೆ, ಮಹತ್ವ ಹಾಗೂ ಕನ್ನಡ ಕಲಿಕೆಯ ಉದ್ದೇಶವನ್ನು ಹಲವು ಉದಾಹರಣೆಗಳೊಂದಿಗೆ ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿಕೊಟ್ಟರು.

ವಿದ್ಯಾಶಾಲೆ ಮುಖ್ಯಸ್ಥರಾದ ಸ್ವಾಮಿ ಯುಕ್ತೇಶಾನಂದಜೀ ಮಹಾರಾಜ್ ಅವರು ಅಧ್ಯಕ್ಷೀಯ ಭಾಷಣದಲ್ಲಿ, ಕನ್ನಡ ಭಾಷೆಯ ಹಿನ್ನಲೆ, ಕನ್ನಡದ ಜೊತೆಗೆ ಇತರೆ ಭಾಷೆಗಳನ್ನು ಕಲಿಯಬೇಕಾದ ಅಗತ್ಯತೆ, ಆ ಮೂಲಕ ಕನ್ನಡವನ್ನು ಪಸರಿಸಲು ಲಭ್ಯವಾಗುವ ಅವಕಾಶಗಳು, ಶ್ರೀರಾಮಕೃಷ್ಣ ವಿದ್ಯಾಶಾಲೆಯ ಕನ್ನಡದ ಸೇವೆ ಬಗ್ಗೆ ವಿವರಿಸಿದರು. ಇದೇ ಸಂದರ್ಭದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಕನ್ನಡ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಕನ್ನಡ ರಾಜ್ಯೋತ್ಸವದ ಅಂಗವಾಗಿ ನಡೆಸಲಾಗಿದ್ದ ಸ್ವರಚಿತ ಕವನ, ಕಥಾಸ್ಪರ್ಧೆ ಹಾಗೂ ಕನ್ನಡ ರಸಪ್ರಶ್ನೆ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿ, ಪ್ರೋತ್ಸಾಹಿಸಲಾಯಿತು.

ಆದಿಕವಿ ಪಂಪನ ಪದ್ಯವನ್ನು ಶಾಲೆಯ ವಿದ್ಯಾರ್ಥಿಗಳಿಬ್ಬರು ರಾಗ ಬದ್ಧವಾಗಿ ಹಾಡಿ, ಅರ್ಥ ವಿವರಣೆ ನೀಡಿದರು. ಕನ್ನಡ ಭಾಷೆಯ ಸೊಬಗು ಸಾರುವ ವಿದ್ಯಾರ್ಥಿಗಳ ಸಮೂಹ ಗಾಯನ ಮನಸೂರೆಗೊಂಡಿತು.

ಶ್ರೀರಾಮಕೃಷ್ಣ ವಿದ್ಯಾಶಾಲೆಗೆ ಭೇಟಿ ನೀಡಿದ್ದ ಕನ್ನಡದ ಸಾಹಿತಿಗಳ ವಿವರ, ಶಾಲೆಯ ಶಿಕ್ಷಕರ ಕನ್ನಡದ ಕೆಲಸಗಳನ್ನು ಕನ್ನಡ ಶಿಕ್ಷಕ ಎಸ್.ಚಂದ್ರಶೇಖರ್ ತಿಳಿಸಿಕೊಟ್ಟರು. ಶಿಕ್ಷಕರಾದ ವಿದ್ವಾನ್ ಚಂದ್ರಶೇಖರ್ ಅವರ ಸ್ವರಚಿತ ಕವನವನ್ನು ಶಾಲೆಯ ಪ್ರಾಂಶುಪಾಲರಾದ ಎಸ್. ಬಾಲಾಜಿ ಅವರ ನೇತೃತ್ವದಲ್ಲಿ ಶಿಕ್ಷಕರು ಸುಮಧುರವಾಗಿ ಹಾಡಿ ಮೆಚ್ಚುಗೆ ಪಡೆದರು. ವಿದ್ಯಾರ್ಥಿಗಳು ಜನಪದ ನೃತ್ಯ ಹಾಗೂ ಕನ್ನಡ ಹಾಡುಗಳ ವಾದ್ಯ ಗೋಷ್ಠಿ ಪ್ರಸ್ತುತಪಡಿಸಿದರು.

ಕನ್ನಡ ಉಪ ನ್ಯಾಸಕ ಜೆ.ಬಿ.ಹಾಲೇಶ್ ಅವರ ನಿರ್ದೇಶನದಲ್ಲಿ ವಿದ್ಯಾರ್ಥಿಗಳು ಪ್ರದರ್ಶಿಸಿದ 'ಶ್ರೀರಾಮಕೃಷ್ಣರ ಬಯಲಲ್ಲಿ ಕುವೆಂಪು' ಕಿರುನಾಟಕ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಕಾರ್ಯಕ್ರಮದ ಕೊನೆಯಲ್ಲಿ ಎಲ್ಲರಿಗೂ ಸಿಹಿ ಹಂಚುವ ಮೂಲಕ ಕನ್ನಡ ಭಾಷೆಯನ್ನು ಬಳಸುವ ಮೂಲಕ ಗೌರವಿಸುವಂತೆ ಮನವಿ ಮಾಡಲಾಯಿತು. ಶಾಲೆಯಲ್ಲಿ ಸುಮಾರು 35 ವರ್ಷ ಕನ್ನಡ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ಇತ್ತೀಚೆಗೆ ನಿವೃತ್ತರಾದ ಎಸ್.ಎಸ್.ರಮೇಶ್, ಶಿಕ್ಷಕರು, ಉಪನ್ಯಾಸಕರು, ಬೋಧಕೇತರ ಸಿಬ್ಬಂದಿಗಳು, ವಿದ್ಯಾರ್ಥಿಗಳು, ಪೋಷಕರು ಕನ್ನಡ ಹಬ್ಬದಲ್ಲಿ ಪಾಲ್ಗೊಂಡು ಸಂಭ್ರಮಿಸಿದರು.



ಬಿಜೆಪಿ ನೂತನ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಬೆಂಗಳೂರಿನ ಧವಳಗಿರಿ ನಿವಾಸದಲ್ಲಿ ಭೇಟಿ ಮಾಡಿದ ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಅಭಿನಂದಿಸಿದರು. ಮೈಮುಲ್ ಮಾಜಿ ನಿರ್ದೇಶಕ ಎಸ್.ಸಿ.ಅಶೋಕ್, ಮುಡಾ ಮಾಜಿ ಸದಸ್ಯೆ ಲಕ್ಷ್ಮೀದೇವಿ, ಮುಖಂಡರಾದ ಫಣೀಶ್, ಶಂಕರ್‌ರಾವ್, ಪಂಚಾಕ್ಷರಿ ವಿನಯ್ ಇನ್ನಿತರರಿದ್ದರು.

ಪಿಎಸ್‌ಐ ಅಕ್ರಮ: ಕೋರ್ಟ್ ಆದೇಶ ಕೈ ಸೇರಿದ ಬಳಿಕ ಕ್ರಮ



ಬೆಂಗಳೂರು, ನ.11– ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಹುದ್ದೆಗಳ ನೇಮಕಾತಿಗೆ ಮರು ಪರೀಕ್ಷೆ ನಡೆಸುವಂತೆ ಹೈಕೋರ್ಟ್ ತೀರ್ಪು ನೀಡಿದೆ. ಆದೇಶದ ಕೈ ಸೇರಿದ ಬಳಿಕ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಗೃಹ ಸಚಿವ ಜಿ.ಪರಮೇಶ್ವರ ತಿಳಿಸಿದರು. ಸುದ್ದಿಗಾರರ ಜೊತೆ ಮಾತನಾಡಿದ ಅವರು, ಕೋರ್ಟ್ ಆದೇಶವನ್ನು ನಾನು ನೋಡಿಲ್ಲ. ಅಡ್ವೋಕೇಟ್ ಜನರಲ್ ಜೊತೆ ಮಾತನಾಡಿದ್ದೇನೆ ಎಂದರು. ಸ್ವತಂತ್ರ ಸಂಸ್ಥೆಯಿಂದ ಆದಷ್ಟು ಬೇಗ ಪರೀಕ್ಷೆ ನಡೆಸುವಂತೆ ಕೋರ್ಟ್ ಹೇಳಿದೆ. ನಮಗೆ ಓದಲು ಸಮಯ ನೀಡುವಂತೆ ಅಭ್ಯರ್ಥಿಗಳು ಮನವಿ ಮಾಡಿದ್ದಾರೆ. ಅವರ ಮನವಿಯನ್ನು ಪರಿಗಣಿಸುತ್ತೇವೆ ಎಂದರು.

ಪಿಎಸ್‌ಐ ನೇಮಕಾತಿ ಬಳಿಕ ತರಬೇತಿ ಮುಗಿಯಲು ಒಂದು ವರ್ಷಬೇಕು. ಹೀಗಾಗಿ, ಸುಮಾರು 600 ಎಎಸ್‌ಐಗಳಿಗೆ ನಿಯಮ 32ರಡಿ ಪಿಎಸ್‌ಐ ಹುದ್ದೆಗೆ ಬಡ್ತಿ ನೀಡಿದ್ದೇವೆ. ನೇಮಕಾತಿ ಪ್ರಕ್ರಿಯೆ ನಡೆದಿದ್ದ 545 ಪಿಎಸ್‌ಐ ಹುದ್ದೆಗಳ ಜೊತೆಗೆ ಇನ್ನೂ 400 ಹುದ್ದೆಗಳು ಖಾಲಿ ಇವೆ. ಈ ಎಲ್ಲ ಹುದ್ದೆಗಳಿಗೆ ಒಟ್ಟಿಗೆ ಪರೀಕ್ಷೆ ಮಾಡಬೇಕೇ ಪ್ರತ್ಯೇಕವಾಗಿ ಮಾಡಬೇಕೇ ಎಂಬ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ ಎಂದರು. ಕೆಇಎ ಪರೀಕ್ಷಾ ಅಕ್ರಮದ ಪ್ರಮುಖ ಆರೋಪಿ ಆರ್.ಡಿ.ಪಾಟೀಲನ ಮೇಲೆ ಪಿಎಸ್‌ಐ ಹಗರಣವೂ ಸೇರಿ ಐದಾರು ಪ್ರಕರಣಗಳು ದಾಖಲಾಗಿವೆ. ಕೆಇಎ ಪರೀಕ್ಷಾ ಅಕ್ರಮದ ತನಿಖೆ ಸಿಐಡಿಗೆ ನಡೆಸಲಿದೆ ಎಂದರು.

ಒಳ್ಳೊಳ್ಳೆ ಸ್ಥಾನಕ್ಕೆ ಹೋಗಿರುವವರೆಲ್ಲ ಸರ್ಕಾರಿ ಶಾಲೆಯಲ್ಲಿ ಓದಿದವರೇ

● ಸಂಸದ ಪ್ರತಾಪ್ ಸಿಂಹ ಅಭಿಮತ ● ಮಂಚೇಗೌಡನಕೊಪ್ಪಲು ಸರ್ಕಾರಿ ಶಾಲೆಗೆ ರಜತ ಮಹೋತ್ಸವ ಸಂಭ್ರಮ



ಮೈಸೂರು,ನ.11–ಸರ್ಕಾರಿ ಶಾಲೆಯಲ್ಲಿ ಓದಿದವರಿಗೆ ಜ್ಞಾನ ಕಡಿಮೆ ಎಂಬ ತಪ್ಪು ಕಲ್ಪನೆ ತೊರೆದು ಚೆನ್ನಾಗಿ ವಿದ್ಯಾಭ್ಯಾಸ ಮಾಡಬೇಕೆಂದು ಸಂಸದ ಪ್ರತಾಪ್ ಸಿಂಹ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಮೈಸೂರಿನ ಮಂಚೇಗೌಡನ ಕೊಪ್ಪಲಿನಲ್ಲಿರುವ ಸರ್ಕಾರಿ ಪ್ರೌಢಶಾಲೆಯ (ಕರ್ನಾಟಕ ಪಬ್ಲಿಕ್ ಶಾಲೆ) 25ನೇ ವರ್ಷದ ರಜತ ಮಹೋತ್ಸವ ಕಾರ್ಯಕ್ರಮವನ್ನು ಶಾಸಕ ಕೆ.ಹರೀಶ್‌ಗೌಡ ಅವರೊಂದಿಗೆ ಉದ್ಘಾಟಿಸಿ ಸಂಸದರು ಮಾತನಾಡಿದರು.

ಸರ್ಕಾರಿ ಶಾಲೆಯಲ್ಲಿ ಓದಿದ ವಿಶ್ವೇಶ್ವರಯ್ಯನವರೇ ಮಹಾನ್ ವ್ಯಕ್ತಿ ಆದರು, ಅಬ್ದುಲ್ ಕಲಾಂ ಅವರು ರಾಷ್ಟ್ರಪತಿಯಾದರು, ಮೋದಿಜೀ ಅವರು ದೇಶದ ಪ್ರಧಾನಿಯಾಗಿದ್ದಾರೆ. ಒಳ್ಳೆ ಒಳ್ಳೆ ಸ್ಥಾನಕ್ಕೆ ಹೋಗಿರುವವರೆಲ್ಲರೂ ಸಾಮಾನ್ಯ ಸರ್ಕಾರಿ ಶಾಲೆಯಲ್ಲಿ ಓದಿದವರಾಗಿದ್ದಾರೆ ಎಂಬುದನ್ನು ಮರೆಯಬಾರದು ಎಂದರು.

ಕೆಲವು ಪ್ರತಿಷ್ಠಿತ ಖಾಸಗಿ ಶಾಲಾ ಕಾಲೇಜುಗಳಲ್ಲಿ ಓದಿದವರು ಮಿಸ್ ವರ್ಲ್ಡ್, ಮಿಸ್ ಯೂನಿವರ್ಸ್ ಆಗಿರಬಹುದು, ಆದರೆ ಒಳ್ಳೆ, ಒಳ್ಳೆ ಸ್ಥಾನಕ್ಕೆ ಹೋಗಿರುವವರೆಲ್ಲ ಸರ್ಕಾರಿ, ಸಾಮಾನ್ಯ ಶಾಲೆಯಲ್ಲಿ ಓದಿದವರು ಎಂದು ಹೇಳಿದರು.

ನಾನು ಕೂಡ ಸರ್ಕಾರಿ ಶಾಲೆಯಲ್ಲಿ ಓದಿದ್ದೇನೆ, ಪ್ರಾಥಮಿಕ ಶಾಲೆ, ಪ್ರೌಢ ಶಾಲೆ, ಮಾಸ್ಟರ್ ಡಿಗ್ರಿವರೆಗೂ ನಾನು ಸರ್ಕಾರಿ ಶಾಲೆಯಲ್ಲಿ ಓದಿ ಈ ಸ್ಥಾನಕ್ಕೆ ಬಂದವನು. ಸರ್ಕಾರಿ ಶಾಲೆಯಲ್ಲಿ ಓದಿದ್ದರ ಬಗ್ಗೆ ಹೆಮ್ಮೆ ಇರಬೇಕು ಎಂದರು.


ಸರ್ಕಾರಿ ಶಾಲೆಯಲ್ಲಿ ಓದಿದರೆ ಜ್ಞಾನದ ಪ್ರಮಾಣ ಕಡಿಮೆಯಾಗುತ್ತದೆ ಎಂದು ತಪ್ಪಾಗಿ ಭಾವಿಸಬೇಡಿ. ಆದರೆ ಗಮನ ವಿಟ್ಟು ಶ್ರದ್ಧೆಯಿಂದ ಓದೋದನ್ನು ರೂಢಿಸಿಕೊಳ್ಳಿ ಎಂದು ಪ್ರತಾಪ್ ಸಿಂಹ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಶಾಸಕ ಹರೀಶ್‌ಗೌಡ ಮಾತನಾಡಿ, ಈ ಶಾಲೆ ತುಂಬಾ ಸುಸಜ್ಜಿತವಾಗಿದೆ. ಮಂಚೇಗೌಡನಕೊಪ್ಪಲಿನ ಜನತೆ ಈ ಶಾಲೆ ಬಗ್ಗೆ ಬಹಳ ಪ್ರೀತಿ ಇಟ್ಟುಕೊಂಡಿದ್ದಾರೆ. ಒಳ್ಳೆಯ ಟೀಚರ್‌ಗಳು, ಲೆಕ್ಚರರ್‌ಗಳು ಇಲ್ಲಿದ್ದಾರೆ. ನನಗೆ ಈ ಶಾಲೆಯ ಬಗ್ಗೆ ವಿಶೇಷ ಪ್ರೀತಿ ಇದೆ ಎಂದು ತಿಳಿಸಿದರು.

ಈ ಶಾಲೆಗೆ ನಾನು ಹಾಗೂ ಸಂಸದರು ಅಗತ್ಯ ಸೌಕರ್ಯ ಕಲ್ಪಿಸುತ್ತೇವೆ ಎಂದು ಹರೀಶ್‌ಗೌಡರು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ನಗರಪಾಲಿಕೆ ಸದಸ್ಯೆ ಪ್ರೇಮ ಶಂಕರೇಗೌಡ, ಮಾಜಿ ಉಪ ಮಹಾಪೌರ ಮಹದೇವಪ್ಪ, ನಗರಪಾಲಿಕೆ ಮಾಜಿ ಸದಸ್ಯ ಶಿವಣ್ಣ, ಮಂಚೇಗೌಡನಕೊಪ್ಪಲು ರವಿ, ಡೆಲ್ಲಿ ರವಿ, ಶಾಲೆಯ ಮುಖ್ಯ ಮುಖ್ಯೋಪಾಧ್ಯಾಯರಾದ ಶುಭ, ಶಾಲಾ ಪೋಷಕರು, ಶಾಲಾ ಅಭಿವೃದ್ಧಿ ಮೇಲುಸ್ತುವಾರಿ ಸಮಿತಿ ಮತ್ತು ಹಿರಿಯ ವಿದ್ಯಾರ್ಥಿ ವೃಂದ ಮತ್ತಿತರರು ಹಾಜರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

12.11.2023 ಭಾನುವಾರ, ಮಳೆ ನಕ್ಷತ್ರ: ವಿಶಾಖ, 07.11.2023ರಿಂದ 19.11.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಕೃಷ್ಣ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಸ್ವಾತಿ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ

■ **ಕರುನಾಡು ಸೇವಾ ಟ್ರಸ್ಟ್ :** ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರಿಗೆ ಸಿದ್ದಗಂಗಾ ಸೇವಾರತ್ನ ಪ್ರಶಸ್ತಿ ಪ್ರದಾನ, ಸಾನ್ನಿಧ್ಯ : ವಂಗೀಪುರ ಮಠದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಅಧ್ಯಕ್ಷತೆ : ನಳಂದ ಬೌದ್ಧ ವಿಶ್ವವಿದ್ಯಾನಿಲಯದ ಪ್ರಧಾನ ಕಾರ್ಯದರ್ಶಿ ಶ್ರೀ ಬಂತೆ ಬೋದಿದತ್ತ ತೇರಾ, ಮುಖ್ಯ ಅತಿಥಿಗಳು : ಸಮಾಜ ಸೇವಕ ನಾಗೇಂದ್ರ, ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್.ರಾಜು, ಸ್ಥಳ: ರೀಬಾರ್ನ್ ಫೌಂಡೇಷನ್ ಸಭಾಂಗಣ, ಕೆ.ಜಿ. ಕೊಪ್ಪಲು, ಬೆಳಗ್ಗೆ 10ಕ್ಕೆ.


■ **ಕೊಡವ ಸಮಾಜ ಕಲ್ಚರಲ್ ಮತ್ತು ಸ್ಪೋರ್ಟ್ಸ್ ಕ್ಲಬ್:** 19ನೇ ವಾರ್ಷಿಕ ಸರ್ವ ಸದಸ್ಯರ ಸಭೆ, ಸಾಂಸ್ಕೃತಿಕ ದಿನ ಮತ್ತು ಸನ್ಮಾನ ಸಮಾರಂಭ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಕುಟ್ಟಿಮಾಡ ಡಿ.ಮುತ್ತಪ್ಪ, ಸನ್ಮಾನಿತರು: ವೀರಾಜಪೇಟೆ ಶಾಸಕರು ಹಾಗೂ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರಾದ ಅಜ್ಜಿಕುಟ್ಟೀರ ಎಸ್.ಪೊನ್ನಣ್ಣ ಮತ್ತು 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರು ಹಾಗೂ ಮೈಸೂರು ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪುರಸ್ಕೃತರಾದ ಡಾ.ಕೆ.ಬಿ.ಗಣಪತಿ, ಸ್ಥಳ: ವಿಜಯನಗರ 1ನೇ ಹಂತದಲ್ಲಿರುವ ಕೊಡವ ಸಮಾಜದ ಮೊದಲನೇ ಮಹಡಿಯಲ್ಲಿರುವ ಗುರುಮನೆ, ಬೆಳಗ್ಗೆ 10ಕ್ಕೆ.

■ **ಸಂವಹನ ಪ್ರಕಾಶಕರು, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ :** ಡಾ. ಚಂದ್ರಶೇಖರಯ್ಯ ಅವರ ವ್ಯೋಮ ಮೂರುತಿ ಅಲ್ಲಮ ಮತ್ತು ಜಗದ ನಂಟ ಪುಸ್ತಕಗಳ ಬಿಡುಗಡೆ ಸಮಾರಂಭ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ : ಹಿರಿಯ ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್, ಮುಖ್ಯ ಅತಿಥಿಗಳು : ವಿಧಾನ ಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಪುಸ್ತಕಗಳ ಲೋಕಾರ್ಪಣೆ : ಶ್ರೀ ಕುಂದೂರು ಮಠದ ಅಧ್ಯಕ್ಷ ಡಾ. ಶರತ್‌ಚಂದ್ರ ಸ್ವಾಮೀಜಿ, ಪುಸ್ತಕಗಳ ಕುರಿತು : ಕನ್ನಡ ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ. ನಂದೀಶ್ ಹಂಚೆ, ಮಹಾರಾಣಿ ಮಹಿಳಾ ಕಲಾ ಕಾಲೇಜು ಪ್ರಾಂಶುಪಾಲ ಡಾ. ಬಿ.ವಿ. ವಸಂತಕುಮಾರ್, ಉಪಸ್ಥಿತರು : ವಿಶ್ರಾಂತ ಪ್ರಾಧ್ಯಾಪಕ ಡಾ. ಚಂದ್ರಶೇಖರಯ್ಯ, ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್, ಸ್ಥಳ: ಶ್ರೀ ಶಿವರಾತ್ರಿ ರಾಜೇಂದ್ರ ಭವನ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಬೆಳಗ್ಗೆ 11ಕ್ಕೆ

■ **ಶ್ರೀ ನೀಲಕಂಠಸ್ವಾಮಿ ಮಠ :** ನೂತನವಾಗಿ ನಿರ್ಮಿಸಿರುವ 'ಶ್ರೀ ನೀಲಕಂಠಸ್ವಾಮಿ ಮಠದ ಮುಖ್ಯ ದ್ವಾರ ಉದ್ಘಾಟನೆ, ಶ್ರೀ ಮಠದ ಮುಂಭಾಗದ ರಸ್ತೆಗೆ ಶ್ರೀ ನೀಲಕಂಠಸ್ವಾಮಿ ರಸ್ತೆ ನಾಮಫಲಕ ಉದ್ಘಾಟನೆ ಮತ್ತು 'ಐತಿಹಾಸಿಕ ಐಸಿರಿ ಶ್ರೀ ನೀಲಕಂಠಸ್ವಾಮಿ ಮಠ ಗ್ರಂಥ ಲೋಕಾರ್ಪಣೆ ಸಮಾರಂಭ, ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರಿಂದ ಶ್ರೀ ನೀಲಕಂಠಸ್ವಾಮಿ ಮಠದ ಮುಖ್ಯ ದ್ವಾರ ಉದ್ಘಾಟನೆ, ಉಪಸ್ಥಿತರು : ಶ್ರೀ ಯೋಗಾನರಸಿಂಹ ಸ್ವಾಮಿ ದೇವಸ್ಥಾನದ ಸಂಸ್ಥಾಪಕರಾದ ಡಾ. ಭಾಷ್ಯಂ ಸ್ವಾಮೀಜಿ, ಶಾಸಕ ಟಿ.ಎಸ್. ಶ್ರೀವತ್ಸ, ಮೇಯರ್ ಶಿವಕುಮಾರ್, ಪಾಲಿಕೆ ಸದಸ್ಯ ಬಿ.ವಿ. ಮಂಜುನಾಥ್, ಸ್ಥಳ: ಶ್ರೀ ನೀಲಕಂಠಸ್ವಾಮಿ ಮಠ, ಖಿಲ್ಲೆ ಮೊಹಲ್ಲಾ, ಸಂಜೆ 4ಕ್ಕೆ.

■ **ರಂಗಾಯಣ :** ಭಾರತೀಯ ರಂಗ ಶಿಕ್ಷಣ ಕೇಂದ್ರದ ಕಲಾವಿದರಿಂದ ವೆನಿಸ್ಸಿನ ವ್ಯಾಪಾರ ನಾಟಕ ಪ್ರದರ್ಶನ, ನಿರ್ದೇಶನ : ಅಮಿತ್ ಜೆ. ರೆಡ್ಡಿ, ಸಂಗೀತ : ರವಿ ಮೂರೂರು, ಬೆಳಕು ವಿನ್ಯಾಸ : ಮಹೇಶ್ ಕಲ್ಲತ್ತಿ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಸೈಬರ್ ಮಿತ್ರ–ಸೈಬರ್ ಸುರಕ್ಷಿ: ವಾರದ ಮಾತು, ಪ್ರಸ್ತುತಿ–ಸತೀಶ್ ವಿ.ಪ್ರಾಯೋಜಕರು cybermitra.in ಮೈಸೂರು, 6.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರ ಕುಮಾರ್, 6.45 ಕಲ್ಯಾಣ ಕರೆದಿದೆ ಕಲ್ಯಾಣ–ಪ್ರಾಯೋಜಿತ ಕಾರ್ಯಕ್ರಮ, 6.50 ರೈತರಿಗೆ ಸಲಹೆ, 9.40 ನಮ್ಮ ಆರೋಗ್ಯ "ಅಭ್ಯಂಗದ ಮಹತ್ವ" ಕುರಿತು ಡಾ.ವೆಂಕಟ ಕೃಷ್ಣ ಕೂಡಲಿ ವಿ. ಅವ ರೊಂದಿಗೆ ಮಾತುಕತೆ, 10.00 ಕೇಳಿಗಿಳಿಗಳೇ –ಕಥೆ ಕೇಳು ಪುಟ್ಟಾ–ಬಲಿ ಚಕ್ರವರ್ತಿ ಕಥೆ ಹೇಳುತ್ತಾರೆ ಬಿ.ಜಿ. ಕವಿತಾ, 10.30 ಮಕ್ಕಳ ಮಂಟಪ–ಮಳವಳ್ಳಿಯ ಸರ್ಕಾರಿ ಹಿರಿಯ ಪ್ರಾಥ್ಯಮಿಕ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ. **ಮಧ್ಯಾಹ್ನ:** 12.30 ದೇವರನಾಮ–ರೂಪದ್ ಮತ್ತು ದೀಪ, ಪರಮೇಶ್ವರ ಹೆಗಡೆ, 12.45 ಜನಪದ ಸಂಗೀತ, 1.30 ಭಾರತ ಹಾಗೂ ನೆದರ್‌ಲ್ಯಾಂಡ್ ತಂಡಗಳ ನಡುವೆ ಬೆಂಗಳೂರಿನಲ್ಲಿ ನಡೆಯಲಿರುವ ಏಕದಿನ ವಿಶ್ವಕಪ್ ಕ್ರಿಕೆಟ್ ಪಂದ್ಯದ ವೀಕ್ಷಕ ವಿವರಣೆ

ಪಟಾಕಿ ಕಡಿಮೆ ಸಿಡಿಸಿ; ಸುರಕ್ಷಿತ, ಸಮೃದ್ಧ ದೀಪಾವಳಿಗೆ ಶಾಸಕ ಜಿ.ಟಿ.ದೇವೇಗೌಡರ ಕರೆ



ಮೈಸೂರು, ನ.11(ಎಸ್‌ಪಿಎನ್)– ಯುವಕರು ಪಟಾಕಿ ಸಿಡಿಸುವುದನ್ನು ಕಡಿಮೆ ಮಾಡಿ, ಹಣತೆಗಳನ್ನು ಹಚ್ಚಿ ದೀಪಾವಳಿಯನ್ನು ಪ್ರತಿಯೊಬ್ಬರು ಸಂಭ್ರಮದಿಂದ ಆಚರಿಸಬೇಕು ಎಂದು ಶಾಸಕ ಜಿ.ಟಿ.ದೇವೇಗೌಡ ಅವರು ಸಲಹೆ ನೀಡಿದರು.

ಮೈಸೂರು ಶ್ರೀರಾಂಪುರ ಪಟ್ಟಣ ಪಂಚಾಯ್ತಿ ವ್ಯಾಪ್ತಿಯ ಮೂಕಾಂಬಿಕ ಸಮೃದ್ಧಿ ಬಡಾವಣೆಯಲ್ಲಿ ಸ್ವಚ್ಛ ದೀಪಾವಳಿ, ಶುಭ ದೀಪಾವಳಿ, ಜಲ ದೀಪಾವಳಿ ಕಾರ್ಯಕ್ರಮ ಹಾಗೂ ರಸ್ತೆ ಅಭಿವೃದ್ಧಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಶಾಸಕರು, ಎಲ್ಲರ ಜೀವನದಲ್ಲೂ ಈ ದೀಪಾವಳಿ ಒಳಿತನ್ನು ತರಲಿ, ಬಾಳಿನ ಕತ್ತಲು, ಎಲ್ಲರ ಮನಸ್ಸಿನಲ್ಲೂ ಸಂತಸ ತರಲಿ ಎಂದು ಜಿಟಿಡಿ ಶುಭ ಹಾರೈಸಿದರು.

ಈಗಿನ ಮಕ್ಕಳಿಗೆ ಪಟಾಕಿ ಸಿಡಿಸುವುದು ಎಂದರೆ ಸಂತೋಷ. ಆದರೆ ಪಟಾಕಿಗಳನ್ನು ಸಿಡಿಸಬೇಕಾದರೆ ಎಚ್ಚರಿಕೆ ಇರಬೇಕು. ದೊಡ್ಡವರ ಸಮ್ಮುಖದಲ್ಲಿ ಪಟಾಕಿಗಳನ್ನು ಸಿಡಿಸಬೇಕು. ಕಡಿಮೆ ಶಬ್ದ ಬರುವ ಪಟಾಕಿಗಳನ್ನು ಸಿಡಿಸಿ, ಹೆಚ್ಚಿನ ಪ್ರಮಾಣದ ಹಣತೆಗಳನ್ನು ಹಚ್ಚಬೇಕು. ಬೆಳಕು ಯಾವಾಗಲೂ ಶುಭ ಸಂಕೇತ. ಈ ದೀಪದ ಜ್ಯೋತಿಯು ದೇಶಕ್ಕೆ, ರಾಜಕ್ಕೆ ಒಳಿತು ಮಾಡಲಿ ಎಂದು ಪ್ರತಿಯೊಬ್ಬರು ಪ್ರಾರ್ಥಿಸುವಂತೆ ಜಿ.ಟಿ.ದೇವೇಗೌಡರು ಮನವಿ ಮಾಡಿದರು.

ಶ್ರೀರಾಂಪುರ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಶ್ರೀಧರ್ ಮಾತನಾಡಿ, ಪಟ್ಟಣ ಪಂಚಾಯಿತಿ ವತಿಯಿಂದ ಸ್ವಚ್ಛ ದೀಪಾವಳಿಯ ಜಾಗೃತಿ ಅಭಿಯಾನ ಮಾಡುತ್ತಿದ್ದೇವೆ. ಈ ಅಭಿಯಾನಕ್ಕೆ ಇಲ್ಲಿನ ಸಾರ್ವಜನಿಕರು ಕೈಜೋಡಿಸಬೇಕು. ಪರಿಸರಕ್ಕೆ ಹಾನಿಯಾಗುವಂತಹ ಪಟಾಕಿ ಹೊಡೆಯುವುದರಿಂದ ಪರಿಸರಕ್ಕೆ ಹಾನಿಯಾಗುತ್ತದೆ. ಆದರೆ ದೀಪಾವಳಿ ಎಂದರೆ ಅದು ಬೆಳಕಿನ ಸಂಭ್ರಮ, ಅಂತಹ ಸಂಭ್ರಮಕ್ಕಾಗಿ ಹಸಿರು ಪಟಾಕಿಗಳು ಬಂದಿದ್ದು, ಯುವಕರು, ಪರಿಸರ, ಸ್ವಚ್ಛತೆಗೆ ಹೆಚ್ಚಿನ ಕಾಳಜಿ ತೋರಬೇಕು ಎಂದರು.

ಪಟಾಕಿಗಳನ್ನು ಸಿಡಿಸಿದ ನಂತರ ತ್ಯಾಜ್ಯವನ್ನು ಒಂದೆಡೆ ಸಂಗ್ರಹಿಸಿಟ್ಟು, ಸ್ವಚ್ಛತಾ ವಾಹನ ಬಂದಾಗ ಅದಕ್ಕೆ ಹಾಕಬೇಕು. ಅಲ್ಲದೆ, ಪಟಾಕಿಯ ಮದ್ದುಗಳು ವಿಷಪೂರಿತವಾಗಿದ್ದು ಹಸು-ಕರು ಸೇರಿದಂತೆ ಯಾವುದೇ ಪ್ರಾಣಿಪಕ್ಷಿಗಳು ಸೇವಿಸಿದರೆ ಪ್ರಾಣಹಾನಿ ಆಗುತ್ತದೆ. ಸಾರ್ವಜನಿಕರು ಸ್ವಚ್ಛ ದೀಪಾವಳಿ, ಹಸಿರು ದೀಪಾವಳಿಯನ್ನು ಆಚರಿಸಿ ಪಟ್ಟಣ ಪಂಚಾಯ್ತಿಯೊಂದಿಗೆ ಸಹಕರಿಸುವಂತೆ ಮನವಿ ಮಾಡಿದರು.

ಮೂಕಾಂಬಿಕಾ ಸಮೃದ್ಧಿ ಬಡಾವಣೆ ನಿವಾಸಿಗಳ ಹಿತರಕ್ಷಣಾ ಸಮಿತಿ ಅಧ್ಯಕ್ಷ ಕೆ.ಆರ್.ಗಣೇಶ್, ಈ ವೇಳೆ ಮೂಕಾಂಬಿಕಾ ಸಮೃದ್ಧಿ ಬಡಾವಣೆಯ ನಿವಾಸಿಗಳ ಹಿತರಕ್ಷಣಾ ಸಮಿತಿಯ ಉಪಾಧ್ಯಕ್ಷರಾದ ರಾಮಕೃಷ್ಣ, ಪ್ರಧಾನ ಕಾರ್ಯದರ್ಶಿ ಪುನೀತ್, ಕಾರ್ಯದರ್ಶಿ ನಾಗಭೂಷಣ, ಜಂಟಿ ಕಾರ್ಯದರ್ಶಿ ಪಾರ್ಶ್ವನಾಥ್, ನಿರ್ದೇಶಕರಾದ ಮಹೇಶಪ್ಪ, ಪೃಥು ಪಿ ಅದ್ವೈತ್, ಬಡಾವಣೆಯ ನಿವಾಸಿಗಳು, ಪ.ಪಂ. ಇಂಜಿನಿಯರ್ ಶಿವಕುಮಾರ್, ಆರೋಗ್ಯ ಅಧಿಕಾರಿ ಪರಮೇಶ್ವರ್, ಸಮುದಾಯ ಅಧಿಕಾರಿ ಶ್ರೀನಿವಾಸ್, ಮಹಿಳಾ ಮುಖಂಡರಾದ ಕಮಲಾ ನಟರಾಜ್, ಸರಸ್ವತಿ, ಪೂಜಾ ಪುನೀತ್, ಉಮಾ ಪುಟ್ಟರಾಜು, ಶೈಲ, ನಿರ್ಮಲ ಸೇರಿದಂತೆ ಇತರರು ಹಾಜರಿದ್ದರು.

ಡಿಸೆಂಬರ್ ಒಳಗೆ ಇ–ಆಫೀಸ್ ತಂತ್ರಾಂಶ ಅಳವಡಿಕೆ

ಅಧಿಕಾರಿಗಳಿಗೆ ಸಚಿವ ಕೃಷ್ಣಭೈರೇಗೌಡ ಗಡುವು



ಬೆಂಗಳೂರು, ನ.11– ಡಿಸೆಂಬರ್ ಒಳಗೆ ಕಂದಾಯ ಇಲಾಖೆಗೆ ಸಂಬಂಧಿಸಿದ ಎಲ್ಲ ಕಡತಗಳನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡುವಂತೆ ಅಧಿಕಾರಿಗಳಿಗೆ ಕಂದಾಯ ಸಚಿವ ಕೃಷ್ಣಭೈರೇಗೌಡ ಸೂಚನೆ ನೀಡಿದ್ದಾರೆ. ಕಂದಾಯ ಇಲಾಖೆ ನಾಲ್ಕೂ ವಿಭಾಗದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಸಚಿವರು, ಡಿಸೆಂಬರ್ ಒಳಗೆ ಕಂದಾಯ ಇಲಾಖೆಗ ಸಂಬಂಧಿಸಿದ ಎಲ್ಲಾ ಕಡತಗಳನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಬೇಕು. ಈ ಪ್ರಕ್ರಿಯೆಗೆ ಸಹಾಯ ಮಾಡಲು ಇಲಾಖೆಯು ಎಲ್ಲಾ ತಾಲೂಕುಗಳಲ್ಲಿ ಇ–ಕಚೇರಿಗಳನ್ನು ಪ್ರಾರಂಭಿಸಲಾಗಿದೆ. ಇದರ ಮೂಲಕ ಪ್ರತಿ ಹಂತದಲ್ಲೂ ಬಾಕಿ ಇರುವ ಕಡತಗಳನ್ನು ಪರಿಶೀಲಿಸಬಹುದು. ಸಮಯಕ್ಕೆ ಸರಿಯಾಗಿ ಕಡತಗಳನ್ನು ತೆರವುಗೊಳಿಸದಿದ್ದರೆ ಅಧಿಕಾರಿಗಳಿಗೆ ನೋಟಿಸ್ ಕೂಡ ನೀಡಬಹುದು. ಪಾರದರ್ಶಕತೆ ಕಾಪಾಡುವ ಸಲುವಾಗಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಡಿಸೆಂಬರ್ ಒಳಗೆ ಇ–ಆಫೀಸ್ ತಂತ್ರಾಂಶ ಅಳವಡಿಸಿಕೊಳ್ಳಬೇಕೆಂದು ಸೂಚಿಸಿದರು.

ನಿಯಮದ ಪ್ರಕಾರ, ತಹಶೀಲ್ದಾರ್‌ಗಳ ಮುಂದೆ ಕಂದಾಯ ಇಲಾಖೆಗೆ ಸಂಬಂಧಿಸಿದ ಪ್ರಕರಣಗಳನ್ನು 90 ದಿನಗಳಲ್ಲಿ ತೆರವುಗೊಳಿಸಬೇಕು. ಆದರೆ, ಐದು ವರ್ಷಗಳಿಂದ ಹಲವು ಪ್ರಕರಣಗಳು ಬಾಕಿ ಉಳಿದಿವೆ. ತಹಶೀಲ್ದಾರ್, ಎಸಿ ಸೇರಿದಂತೆ ಕಂದಾಯ ನ್ಯಾಯಾಲಯಗಳಲ್ಲಿ ಸಾವಿರಾರು ಪ್ರಕರಣಗಳು ಬಾಕಿ ಇವೆ. ಜನವರಿಯೊಳಗೆ ಪ್ರಕರಣಗಳನ್ನು ಇತ್ಯರ್ಥಪಡಿಸಬೇಕು. ಇಲ್ಲದಿದ್ದರೆ, ನಿಯಮ ಉಲ್ಲಂಘಿಸಿದವರಿಗೆ ನೋಟಿಸ್ ಜಾರಿ ಮಾಡಲಾಗುವುದು ಎಂದು ಹೇಳಿದರು.



ಬೆಂಗಳೂರಿನ ಧವಳಗಿರಿ ನಿವಾಸದಲ್ಲಿ ಬಿಜೆಪಿ ನೂತನ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಮೈಸೂರಿನ ಖ್ಯಾತ ವಕೀಲರೂ ಆದ ಬಿಜೆಪಿ ಹಿರಿಯ ಮುಖಂಡ ಎಸ್.ಅರುಣ್‌ಕುಮಾರ್ ಆತ್ಮೀಯವಾಗಿ ಅಭಿನಂದಿಸಿದರು.

ಅರ್ಜಿ ಆಹ್ವಾನ

ಮೈಸೂರು,ನ.11–ಬೋಗಾದಿ ಪಟ್ಟಣ ಪಂಚಾಯಿತಿ ವತಿಯಿಂದ ಪಂಚಾಯಿತಿ ವ್ಯಾಪ್ತಿಯಲ್ಲಿ ವಾಸಿಸುವ ಪ.ಜಾತಿ ಮತ್ತು ಪ.ಪಂಗಡ ಹಾಗೂ ಹಿಂದುಳಿದ ವರ್ಗದವರಿಗೆ ಶೇ.5ರ ಯೋಜನೆ ಅನುದಾನದಲ್ಲಿ ಹಮ್ಮಿಕೊಂಡಿರುವ ವೈಯಕ್ತಿಕ ಕಾರ್ಯಕ್ರಮಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಲಘುವಾಹನ ಚಾಲನ ತರಬೇತಿ, ರಾಷ್ಟ್ರೀಯ–ಅಂತಾರಾಷ್ಟ್ರೀಯ ಕ್ರೀಡೆಯಲ್ಲಿ ವಿಜೇತರಾದ ವಿಶೇಷಚೇತನರಿಗೆ ಪ್ರೋತ್ಸಾಹಧನ, ವಿಶೇಷ ಚೇತರನ್ನು ಜವಾಬ್ದಾರಿಯಿಂದ ಪೋಷಿಸುವವರಿಗೆ ಪೋಷಣಾ ಭತ್ಯೆ ನೀಡಲಾಗುವುದು. ಅರ್ಹ ಫಲಾನುಭವಿಗಳು ಕಚೇರಿಯಿಂದ ಅರ್ಜಿ ಪಡೆದು ಸೂಕ್ತ ದಾಖಲೆಗಳೊಡನೆ ನ.18 ಸಂಜೆ 5ರೊಳಗೆ ಸಲ್ಲಿಸಬಹುದು.

ಡೇ–ನಲ್ಮ್ ಯೋಜನೆಗಳಿಗೆ ಮಂಗಳಮುಖಿಯರ ನೋಂದಣಿ



ಮೈಸೂರು, ನ.11(ಎಂಕೆ)– ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ, ಮೈಸೂರು ನಗರ ಪಾಲಿಕೆ ಡೇ–ನಲ್ಮ್ ವಿಭಾಗ, ಗಾರ್ಡ್ ಸಂಸ್ಥೆ, ಜಿಲ್ಲಾ ಏಡ್ಸ್ ಪ್ರತಿಬಂಧಕ ನಿಯಂತ್ರಣ ಘಟಕದ ವತಿಯಿಂದ ಮಂಗಳಮುಖಿಯರನ್ನು ಪಿಎಂ ಸ್ವ–ನಿಧಿ(ಪ್ರಧಾನ ಮಂತ್ರಿ ಬೀದಿಬದಿ ವ್ಯಾಪಾರಿಗಳ ಆತ್ಮ ನಿರ್ಭರ ನಿಧಿ) ಹಾಗೂ ಡೇ–ನಲ್ಮ್ ಯೋಜನೆಗಳಿಗೆ ನೊಂದಾಯಿಸುವ ಕಾರ್ಯಕ್ರಮ ನಡೆಯಿತು.

ಮೈಸೂರಿನ ವಿದ್ಯಾಶಂಕರನಗರದ ಜೆಎಸ್‌ಎಸ್ ಬಡಾವಣೆಯಲ್ಲಿ ಹಮ್ಮಿಕೊಂಡಿದ್ದ ನೋಂದಾವಣಿ ಕಾರ್ಯಕ್ರಮವನ್ನು ಉದ್ಘಾಟಿಸಿದ ಮಾಜಿ ಸಚಿವರೂ ಪಿಎಂ ಸ್ವ–ನಿಧಿ ರಾಜ್ಯ ಸಂಚಾಲಕ ಎಸ್.ಎ.ರಾಮದಾಸ್, ನೋಂದಣಿ ಪತ್ರಗಳನ್ನು ವಿತರಣೆ ಮಾಡಿದರು.

ಬಳಿಕ ಮಾತನಾಡಿದ ಅವರು, ಕೋವಿಡ್–19 ಸಂದರ್ಭದಲ್ಲಿ ಜಾರಿಗೆ ತಂದ ಪಿಎಂ ಸ್ವ–ನಿಧಿ ಯೋಜನೆ ತಳ ಸಮುದಾಯದವರ ಆರ್ಥಿಕ ಸ್ವಾವಲಂಬನೆಯಲ್ಲದೆ ಮಂಗಳಮುಖಿಯರ ಉತ್ತಮ ಜೀವನ ನಿರ್ವಹಿಸಲು ಸಹಕಾರಿಯಾಗಲಿದೆ. ಪಿಎಂ ಸ್ವ–ನಿಧಿ ಯೋಜನೆ ಮೂಲಕ ಕೇಂದ್ರ ಸರ್ಕಾರದ ಪ್ರಮುಖ 8 ಯೋಜನೆಗಳನ್ನು ಸದ್ಬಳಕೆ ಮಾಡಿಕೊಳ್ಳಬಹುದು ಎಂದು ತಿಳಿಸಿದರು.

ಪಿಎಂ ಸ್ವ–ನಿಧಿ ಯೋಜನೆ ನೋಂದಣಿಯಲ್ಲಿ ದೇಶದಲ್ಲಿಯೇ ಮೈಸೂರು ಮೊದಲ ಸ್ಥಾನದಲ್ಲಿದ್ದು, ಇತರೆ ನಗರಗಳಿಗೆ ಮಾದರಿಯಾಗಿದೆ. ಮುಂದಿನ ದಿನಗಳಲ್ಲಿ ರಾಜ್ಯದ ಎಲ್ಲಾ ರಾಜ್ಯಗಳಿಗೂ ವಿಸ್ತರಣೆ ಮಾಡಲಾಗುವುದು. ರಾಜ್ಯದಲ್ಲೆಡೆ ಈ ಯೋಜನೆ ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ನಗರಪಾಲಿಕೆ ಡೇ–ನಲ್ಮ್ ವಿಭಾಗದ ಅಭಿಯಾನ ವ್ಯವಸ್ಥಾಪಕ ಡಾ.ಜೆ.ಎಸ್.ಭೈರಲಿಂಗಯ್ಯ ಮಾತನಾಡಿ, ಡೇ–ನಲ್ಮ್ ಅಭಿಯಾನದಡಿ ಮಂಗಳಮುಖಿಯರು, ಸ್ವ–ಸಹಾಯ ಸಂಘಗಳು ಹಾಗೂ ಪ್ರದೇಶ ಮಟ್ಟದ ಒಕ್ಕೂಟಗಳನ್ನು ರಚಿಸಿ, ಅಲ್ಲಿನ ಸದಸ್ಯರುಗಳು ಸ್ವಯಂ ಉದ್ಯೋಗ ಮಾಡಲು ಪಿಎಂ ಸ್ವ–ನಿಧಿ ಯೋಜನೆ ಮೂಲಕ ಸಾಲ–ಸೌಲಭ್ಯ ಕಲ್ಪಿಸಿಕೊಡಲಾಗುವುದು ಎಂದು ಹೇಳಿದರು. ಗಾರ್ಡ್ ಸಂಸ್ಥೆಯ ಡಾ.ದಿವಾಕರ್ ಶೆಟ್ಟಿ, ನಗರಪಾಲಿಕೆ ಡೇ–ನಲ್ಮ್ ವಿಭಾಗದ ಸಿಬ್ಬಂದಿ ಉಪಸ್ಥಿತರಿದ್ದರು.



ಮೈಸೂರಿನ ಜಯಲಕ್ಷ್ಮೀಪುರಂ ರಾಘವೇಂದ್ರಸ್ವಾಮಿ ಮಠದ ಹಿಂಭಾಗದಲ್ಲಿರುವ ವಾಟರ್ ಟ್ಯಾಂಕ್ ಅನ್ನು ಚಾಮರಾಜ ಶಾಸಕ ಕೆ.ಹರೀಶ್‌ಗೌಡ ಉದ್ಘಾಟಿಸಿದರು. ಈ ವೇಳೆ ಕಾರ್ಪೋರೇಟರ್ ಭಾಗ್ಯ ಮಹದೇಶ್, ಮಾಜಿ ಕಾರ್ಪೋರೇಟರ್ ಸಿ.ಮಹದೇಶ್, ಮೈಸೂರ್ ಸಿಟಿ ಕೋ–ಆಪರೇಟಿವ್ ಬ್ಯಾಂಕ್‌ನ ಮಾಜಿ ಅಧ್ಯಕ್ಷ ಯೋಗೀಶ್, ಕಾಂಗ್ರೆಸ್ ಮುಖಂಡ ರವಿ (ಡೆಲ್ಲಿ), ನಗರಪಾಲಿಕೆ ಆಯುಕ್ತ ಅಶಾದ್ ಉರ್ ರಹಮಾನ್ ಇನ್ನಿತರರು ಉಪಸ್ಥಿತರಿದ್ದರು.

ನಿಧನ

ಸರಸ್ವತಿ



ಮೈಸೂರು, ನ.11–ಮೈಸೂರಿನ ಪ್ರತಿಷ್ಠಿತ ಶಾಲೆಗಳಲ್ಲಿ ಒಂದಾದ ಸಿಎಫ್‌ಟಿಆರ್‌ಐ ಶಾಲೆಯ ನಿವೃತ್ತ ಪ್ರಾಂಶುಪಾಲರಾದ ಶ್ರೀಮತಿ ಸರಸ್ವತಿ ಬಾಯಿ (70) ಅವರು ಶನಿವಾರ ಸಂಜೆ ಹೃದಯಾಘಾತದಿಂದ ನಿಧನರಾದರು. ಗೋಕುಲಂ ನಿವಾಸಿಗಳಾದ ದಿವಂಗತರು ಪತಿ ಸೇರಿದಂತೆ ಅಪಾರ ಬಂಧು–ಬಳಗ ಮತ್ತು ವಿದ್ಯಾರ್ಥಿಗಳನ್ನು ಅಗಲಿದ್ದಾರೆ. ಭಾನುವಾರ (ನ.12) ಮಧ್ಯಾಹ್ನ ಗೋಕುಲಂನ ಚಿರಶಾಂತಿ ಧಾಮದಲ್ಲಿ ಅಂತ್ಯ ಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿಶೇಷಚೇತನರ ಶುಲ್ಕ ಮರುಪಾವತಿಗೆ ಅರ್ಜಿ ಆಹ್ವಾನ

ಮೈಸೂರು, ನ. 11– 2023–24ನೇ ಸಾಲಿನ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ಉನ್ನತ ಶಿಕ್ಷಣ ಹಾಗೂ ತಾಂತ್ರಿಕ ಶಿಕ್ಷಣ ಪಡೆಯುತ್ತಿರುವ ವಿಕಲಚೇತನರಿಗೆ ಶುಲ್ಕ ಮರುಪಾವತಿ ಯೋಜನೆಯಡಿ ಅರ್ಜಿ ಆಹ್ವಾನಿಸಲಾಗಿದೆ. ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿಯಿಂದ ಅರ್ಜಿ ಪಡೆದು ಅಗತ್ಯ ದಾಖಲಾತಿಗಳೊಂದಿಗೆ ನ.29ರೊಳಗಾಗಿ ಸಲ್ಲಿಸಬೇಕು. ಮಾಹಿತಿಗೆ ದೂ.ಸಂ:0821–2490333 ಸಂಪರ್ಕಿಸಬಹುದು. ಹೆಚ್.ಡಿ.ಕೋಟೆ–ಮಹದೇವಯ್ಯ (9611519719), ಸರಗೂರು–ಜವರಾಜು (7090994492), ಹುಣಸೂರು–ದೇವರಾಜು (9739644342), ಕೆ.ಆರ್‌ನಗರ– ಹೇಮಂತ ಕುಮಾರ್(9480253203) ಮೈಸೂರು ತಾಲೂಕು–ಎಂ.ಆರ್.ಸ್ವಾಮಿ (6360483829), ನಂಜನಗೂಡು ರಂಗಸ್ವಾಮಿ (8951113120) ಪಿರಿಯಾಪಟ್ಟಣ–ಎಲ್.ಲಕ್ಷ್ಮಿ (7204151852), ತಿ.ನರಸೀಪುರ–ಬಿ.ಆರ್.ವೀಣಾ (8050829685) ಅವರನ್ನು ಸಂಪರ್ಕಿಸಬಹುದು.

ಇಂದು 19ನೇ ವಾರ್ಷಿಕ ಸರ್ವ ಸದಸ್ಯರ ಸಭೆ; ಸನ್ಮಾನ ಸಮಾರಂಭ

ಮೈಸೂರು,ನ.11–ಮೈಸೂರಿನ ಕೊಡವ ಸಮಾಜ ಕಲ್ಚರಲ್ ಮತ್ತು ಸ್ಪೋರ್ಟ್ಸ್ ಕ್ಲಬ್‌ನ 19ನೇ ವಾರ್ಷಿಕ ಸರ್ವ ಸದಸ್ಯರ ಸಭೆ, ಸಾಂಸ್ಕೃತಿಕ ದಿನ ಮತ್ತು ಸನ್ಮಾನ ಸಮಾರಂಭವನ್ನು ನಾಳೆ (ನ.12) ಬೆಳಗ್ಗೆ 10 ಗಂಟೆಗೆ ವಿಜಯನಗರ ಮೊದಲ ಹಂತದಲ್ಲಿರುವ ಕೊಡವ ಸಮಾಜದ ಮೊದಲನೇ ಮಹಡಿಯ ಗುರುಮನೆಯಲ್ಲಿ ಏರ್ಪಡಿಸಲಾಗಿದೆ. ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಕುಟ್ಟಿಮಾಡ ಡಿ.ಮುತ್ತಪ್ಪ ವಹಿಸುವರು. ಇದೇ ವೇಳೆ ವೀರಾಜಪೇಟೆ ಶಾಸಕರು ಹಾಗೂ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರಾದ ಅಜ್ಜಿಕುಟ್ಟೀರ ಎಸ್.ಪೊನ್ನಣ್ಣ ಮತ್ತು ಮೈಸೂರು ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪುರಸ್ಕೃತರಾದ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರು' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರನ್ನು ಸನ್ಮಾನಿಸಲಾಗುವುದು ಎಂದು ಸಂಘದ ಕಾರ್ಯದರ್ಶಿ ಮೇಚಂಡ ಎಸ್.ಬೋಪಣ್ಣ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.











ನಕ್ಕರೆ ಅದೇ ಸ್ವರ್ಗ

ನೆರೆಯಾತ : "ಏನ್ರೀ, ಮನೆಗೆಲಸದಲ್ಲಿ ನಿಮ್ಮ ಹೆಂಡತಿಗೆ ಸಹಾಯ ಮಾಡುತ್ತೀರಾ ಹೇಗೆ?"

ಅವರು : "ಹೌದ್ರಿ ಬಟ್ಟೆ ಒಗೆಯುವಾಗ ಹೆಂಡತಿಗೆ ಸಹಾಯ ಮಾಡುತ್ತೇನೆ, ಅದರಿಂದ ನನಗೆ ಎಳ್ಳಷ್ಟು ಬೇಸರವಿಲ್ಲ, ಅವಳೂ ಕೂಡ ನಾನು ಅಡುಗೆ ಮಾಡುವಾಗ ನನಗೆ ಸಹಾಯ ಮಾಡ್ತಾಳೆ"

ಮೈಸೂರು ಮಿತ್ರ

ಭಾನುವಾರ, 12 ನವೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಮುಗಿಲಿಗೆ ಯಾವ ಅಪೇಕ್ಷೆಯೂ ಇಲ್ಲ, ಯಾರದೇ ದಾಕ್ಷಿಣ್ಯ ಇಲ್ಲ. ಯಾವುದೇ ಪ್ರೀತಿಯ ಹಂಗಿಲ್ಲ. ಜೊತೆಗಾರನೆಂಬ ಭಾವನೆಯೂ ಇಲ್ಲ. ಆದರೂ ಮುಗಿಲು ತನ್ನದೇ ಆದ ದೊಡ್ಡಸ್ತಿಕೆಯಿಂದ ಜನಗಳ ಬೇಗುದಿಯನ್ನು ಹೋಗಲಾಡಿಸುತ್ತದೆ. –ಭಾಮಿನೀ ವಿಲಾಸ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಾತು ಚಿಕ್ಕದಾಗಿರಲಿ, ಕೆಲಸ ಚೊಕ್ಕವಾಗಿರಲಿ

ನಿಮ್ಮ ಪತ್ರಗಳು

ಕಾಡು ಪ್ರಾಣಿಗಳ ಹಾವಳಿ ತಪ್ಪಿಸಿ

ಮಾನ್ಯರೆ,

ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಕಾಡಿನಂಚಿನ ಗ್ರಾಮಗಳಲ್ಲಿ ಕಾಡುಪ್ರಾಣಿಗಳಾದ ಆನೆ, ಚಿರತೆ ಮತ್ತು ಹುಲಿಗಳಿಂದ ಮನುಷ್ಯರ ಮೇಲೆ ಆಕ್ರಮಣಗಳಾಗುತ್ತಿದ್ದು, ಪ್ರಾಣಹಾನಿ ಕೂಡ ಆಗುತ್ತಿರುವುದರ ಬಗ್ಗೆ ವರದಿಯಾಗುತ್ತಿದೆ. ಆಗ ಸರ್ಕಾರದಿಂದ ಒಂದಷ್ಟು ಹಣ ಸಂದಾಯ ಮಾಡಿ ತನ್ನ ಜವಾಬ್ದಾರಿ ಮುಗಿಯಿತೆಂದು ಸುಮ್ಮನಾಗಿ ಬಿಡುತ್ತದೆ. ಆದರೆ, ಕಾಡು ಪ್ರಾಣಿಗಳು ನಾಡಿಗೆ ಏಕೆ ಬರುತ್ತಿವೆ ಎಂಬುದರ ಬಗ್ಗೆ ಯೋಚಿಸಲು ಹೋಗುವುದಿಲ್ಲ. ಇದು ದುರಂತ. ಆದರೆ ಸ್ಥಳೀಯ ಜನರ ಅನುಭವದ ಪ್ರಕಾರ, ಹಿಂದೆ ಕಾಡಿನ ಕಾನೂನನ್ನು ಉಲ್ಲಂಘಿಸಿ ಜನ, ದಂತಕ್ಕಾಗಿ ಆನೆಗಳನ್ನು, ಮಾಂಸ ಮತ್ತು ಚರ್ಮಕ್ಕಾಗಿ ಚಿರತೆ, ಹುಲಿ ಮುಂತಾದ ಕಾಡು ಪ್ರಾಣಿಗಳನ್ನು ಬೇಟೆಯಾಡುತ್ತಿದ್ದುದರಿಂದ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿತ್ತು. ಉಳಿದ ಪ್ರಾಣಿಗಳು ತಮ್ಮ ಆಹಾರವನ್ನು ಕಾಡಿನಲ್ಲಿಯೇ ಅರಸಿ ತಿನ್ನುತ್ತಿದ್ದರಿಂದ ನಾಡಿಗೆ ಬರುವ ಪ್ರಮೇಯ ಕಡಿಮೆ ಇತ್ತು. ಆದರೆ ಇಂದು ಆ ಪರಿಸ್ಥಿತಿ ಇಲ್ಲ. ಕಾರಣ ಸರ್ಕಾರ ಬೇಟೆಗಾರರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳುತ್ತಿದೆಯಲ್ಲದೆ, ಕಾಡಿನ ಒಳಗೆ ಅರಣ್ಯದ ಸಿಬ್ಬಂದಿಗಳ ಸತತ ಪೆಟ್ರೋಲಿಂಗ್ ಮತ್ತು ತೀವ್ರ ನಿಗಾದಿಂದಾಗಿ ಕಳ್ಳ ಬೇಟೆಗಾರರಿಗೆ ತೀವ್ರ ಹಿನ್ನಡೆಯಾಗಿದೆ. ಹಾಗಾಗಿ ಕಾಡುಪ್ರಾಣಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದೆ. ಕಾಡಿನಲ್ಲಿ ಆಹಾರದ ಕೊರತೆ ಜಾಸ್ತಿಯಾಗಿ ನಾಡಿನತ್ತ ನುಗ್ಗಿ ಜನ, ಜಾನುವಾರು, ಬಲಿ ತೆಗೆದುಕೊಳ್ಳುತ್ತಿವೆ. ಇತ್ತೀಚಿನ ಒಂದು ವರದಿ ಪ್ರಕಾರ ನಾಗರಹೊಳೆ, ಬಂಡೀಪುರ ಅಭಯಾರಣ್ಯದಲ್ಲಿ, ದೇಶದ ಇತರೆ ಕಾಡುಗಳಿಗೆ ಹೋಲಿಸಿದರೆ, ಹುಲಿಗಳ ಸಂಖ್ಯೆಯಲ್ಲಿ ಮೊದಲ ಸ್ಥಾನದಲ್ಲಿದೆ ಎಂದು ವರದಿ ಹೇಳುತ್ತದೆ. ಹುಲಿಗಳು ಕಾಡಿನಲ್ಲಿ ತಮ್ಮ ಗಡಿಯನ್ನು ಗುರುತಿಸಿ ಕೊಳ್ಳುವುದರಿಂದ, ಇತರೆ ಹುಲಿಗಳು ಆ ಗಡಿ ಭಾಗವನ್ನು ಬಿಟ್ಟು ಬೇರೆಯ ಕಡೆ ವಾಸಮಾಡಬೇಕಾಗುವುರಿಂದ, ಸ್ಥಳವನ್ನು ಹುಡುಕುತ್ತಾ ನಾಡಿಗೆ ಬಂದಾಗ ಆಕ್ರಮಣ ಮಾಡಿ, ಜನ ಜಾನುವಾರುಗಳನ್ನು ಬಲಿ ತೆಗೆದುಕೊಳ್ಳುತ್ತಿವೆ.

ಈ ಹಿಂದೆ ಕಾಡಿನ ಪ್ರಮಾಣ ಎಷ್ಟಿತ್ತೋ ಅಷ್ಟೇ ಇದೆ. ಹಾಗಾಗಿ, ಅಷ್ಟರಲ್ಲೇ ಈ ಕಾಡುಪ್ರಾಣಿಗಳು ವಾಸಿಸಬೇಕು. ಆದರೆ ಅವುಗಳ ಸಂಖ್ಯೆ ದಿನೇ ದಿನೆ ಜಾಸ್ತಿಯಾಗುತ್ತಿದೆ. ಹಾಗಾಗಿ ಸರ್ಕಾರ ಈಗಿನಿಂದಲೇ ಇದರ ಬಗ್ಗೆ ತಜ್ಞರ ಸಲಹೆ ಪಡೆದು ಸೂಕ್ತ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ, ಮುಂದಿನ ದಿನಗಳಲ್ಲಿ ತೀವ್ರ ಬೆಳೆಹಾನಿ, ಜನ ಜಾನುವಾರುಗಳ ಹಾನಿಯಾಗಬಹುದು ಎಂದು ಸ್ಥಳೀಯ ನಾಗರೀಕರ ಅನಿಸಿಕೆ ಮತ್ತು ಅನುಭವದ ಮಾತು.

–ಬ್ಯಾಂಕ್ ಶಿವಕುಮಾರ್, ಜೆ.ಪಿ.ನಗರ, ಮೈಸೂರು.

ಇಂತಹ ಕರಾಳ ಕೃತ್ಯಗಳು ಮರುಕಳಿಸದಿರಲಿ

ಮಾನ್ಯರೆ,

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಗಣಿ ಮತ್ತು ಭೂವಿಜ್ಞಾನಿ ಪ್ರತಿಮಾ ಅವರ ಬರ್ಬರ ಹತ್ಯೆ ತೀವ್ರ ಖಂಡನೀಯ. ಕೊಲೆಯನ್ನು ಅವರ ವಾಹನ ಚಾಲಕ (ಮಾಜಿ) ಕಿರಣ್ ಎಂಬ ಯುವಕ ತನ್ನನ್ನು ಕೆಲಸದಿಂದ ತೆಗೆದರು ಎಂಬ ಕೋಪದಿಂದ ಮಾಡಿದ್ದಾನೆಂದು ಹೇಳಲಾಗಿದ್ದು ಆರೋಪಿಯನ್ನು ಈಗಾಗಲೇ ಬಂಧಿಸಿರುವ ಪೊಲೀಸರು ನ್ಯಾಯಾಲಯಕ್ಕೆ ಹಾಜರುಪಡಿಸಿ, ಆತನನ್ನು ಈ ತಿಂಗಳ 15 ರವರೆಗೆ ಪೊಲೀಸ್ ಕಸ್ಟಡಿಗೆ ಪಡೆದಿದ್ದಾರೆ. ಪ್ರತಿಮಾ ಓರ್ವ ದಕ್ಷ ಅಧಿಕಾರಿಯಾಗಿದ್ದರು ಹಾಗೂ ತಮ್ಮ ಇಲಾಖೆಯಲ್ಲಿ ಒಳ್ಳೆಯ ಹೆಸರು ಗಳಿಸಿದ್ದರು. ವೈಯಕ್ತಿಕ ದ್ವೇಷ ಓರ್ವ ದಕ್ಷ ಮಹಿಳಾ ಅಧಿಕಾರಿಯನ್ನು ಬಲಿ ತೆಗೆದುಕೊಂಡಿದೆ. ಆರೋಪಿಗೆ ಅತ್ಯುಗ್ರವಾದ ಶಿಕ್ಷೆ ವಿಧಿಸಿ, ಭವಿಷ್ಯದಲ್ಲಿ ಇಂತಹ ಕರಾಳ ಕೃತ್ಯಗಳು ಮರುಕಳಿಸದಂತೆ ನ್ಯಾಯಾಲಯ ನೋಡಿಕೊಳ್ಳಬೇಕು. ಮಹಿಳಾ ಅಧಿಕಾರಿಗಳು ಇಂದು ತೀವ್ರ ರೀತಿಯ ಒತ್ತಡದಿಂದ ಕೆಲಸ ಮಾಡುತ್ತಿದ್ದು, ಅನೇಕ ವೇಳೆ ರಾಜಕೀಯ ಒತ್ತಡ ಕೂಡ ಅವರ ಮೇಲಿರುತ್ತದೆ. ಕೆಲಸದ ಸ್ಥಳದಲ್ಲಿ ಹಾಗೂ ಅವರ ನಿವಾಸದಲ್ಲಿ ಅವರಿಗೆ ಸೂಕ್ತ ಭದ್ರತೆ ಒದಗಿಸಲು ರಾಜ್ಯ ಸರ್ಕಾರ ಶೀಘ್ರ ಕ್ರಮ ಕೈಗೊಳ್ಳಬೇಕು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು


ದೀಪ ಬೆಳಗಲಿ, ಪಟಾಕಿ ಅಳಿಯಲಿ

ಮಾನ್ಯರೆ,

ಹಿಂದೂ ಧರ್ಮದ ಸಂಸ್ಕೃತಿ, ಪರಂಪರೆಯನ್ನು ಬಿಂಬಿಸುವ ಭಾರತೀಯರಿಗೆ ಸಂಭ್ರಮ, ಸಡಗರದ ದೀಪಾವಳಿ ಹಬ್ಬ ಸಮೀಪಿಸುತ್ತಿದ್ದು, ಅದರಲ್ಲೂ ವಿಶೇಷವಾಗಿ ಮಕ್ಕಳು ಬಹಳ ಕಾತುರದಿಂದ ಕಾಯುತ್ತಿರುವ ನೆಚ್ಚಿನ ಸಂತಸದ ಹಬ್ಬವಾಗಿದೆ. ಈ ಹಬ್ಬದ ದಿನದಂದು ಹೊಸ ಹೊಸ ಉಡುಗೆಗಳನ್ನು ತೊಟ್ಟು ಸಿಹಿ ತಿನಿಸುಗಳನ್ನು ಹಂಚಿ ಶುಭಾಶಯಗಳನ್ನು ಕೋರುತ್ತಾ ಸಂತಸ ಪಡುವ ಹಬ್ಬ. ಜೊತೆಗೆ ಪಟಾಕಿ ಎಂಬ ಶಬ್ದದ ಹಬ್ಬ, ಆದರೆ ನಿಮ್ಮ ಸಂತಸದಿಂದ ಪರಿಸರಕ್ಕೆ ಹಾನಿಯಾಗುತ್ತಿದೆ. ಪಟಾಕಿಯಿಂದ ಉಂಟಾಗುವ ಅತಿಯಾದ ಹೊಗೆ ಮತ್ತು ಶಬ್ದದಿಂದ ಪ್ರಾಣಿ, ಪಕ್ಷಿಗಳು ಭಯಭೀತವಾಗಿ ಪಟಾಕಿಯತ್ತ ಸುಳಿಯದೆ ಬೇರೆ ಕಡೆ ವಲಸೆ ಹೋಗಿ ತುಂಬಾ ಸಂಕಷ್ಟಗಳನ್ನು ಎದುರಿಸಬೇಕಾಗುತ್ತದೆ. ಪಟಾಕಿಗಳಿಂದ ಅನೇಕ ಮಕ್ಕಳು ಜೀವನ ಪೂರ್ತಿ ಅಂಧತ್ವ ಮತ್ತು ಕಿವುಡುತನವನ್ನು ಎದುರಿಸಬೇಕಾಗುತ್ತದೆ, ಇನ್ನೊಂದಷ್ಟು ಜನರು ಗಂಭೀರವಾಗಿ ಸುಟ್ಟ ಗಾಯಗಳಿಂದ ನರಳುತ್ತಾರೆ. ಹಿರಿಯರಿಗೆ ಕರ್ಕಶ ಶಬ್ದ ಮತ್ತು ದಟ್ಟವಾದ ರಾಸಾಯನಿಕಯುಕ್ತ ಹೊಗೆಯಿಂದ ಉಸಿರಾಟದ ತೊಂದರೆ ಉಂಟಾಗುತ್ತದೆ, ಹೃದಯ ಸಂಬಂಧಿ ಮತ್ತು ಅಸ್ತಮಾದಂತಹ ಕಾಯಿಲೆಗಳಿರುವ ಜನರಿಗೆ ತುಂಬಾ ಆತಂಕ ಮತ್ತು ಭಯದ ವಾತಾವರಣ ಉಂಟುಮಾಡುತ್ತದೆ. ಆಸ್ಪತ್ರೆಗಳಲ್ಲಿರುವ ರೋಗಿಗಳಿಗೆ ಶಾಂತಿಭಂಗವಾಗುತ್ತದೆ.

ಪಟಾಕಿಗಳಲ್ಲಿ ಬಳಸುವ ವಿಷಕಾರಿ ರಾಸಾಯನಿಕ ವಸ್ತುಗಳಾದ ಲಿಥಿಯಂ, ಆರ್ಸೆನಿಕ್, ಅಲ್ಯೂಮಿನಿಯಂ, ಪೊಟಾಷ್ಯಿಯಂ ನೈಟ್ರೇಟ್, ಸೀಸದ ವಸ್ತುಗಳು ಪರಿಸರ ಮತ್ತು ಅಸಂಖ್ಯಾತ ಜನರ ಆರೋಗ್ಯದ ಮೇಲೆ ತುಂಬಾ ದುಷ್ಪರಿಣಾಮಗಳು ಬೀರುತ್ತದೆ. ದೀಪಾವಳಿಯಲ್ಲಿ ಪಟಾಕಿ ಹಚ್ಚುವುದಕ್ಕೆ ಯಾವುದೇ ಶಾಸ್ತ್ರಾಧಾರವಿಲ್ಲ, ಇದೊಂದು ತಪ್ಪು ಕಲ್ಪನೆ. ಸಾರ್ವಜನಿಕರು ಮತ್ತು ಮಕ್ಕಳ ಮನಸ್ಸಿನಲ್ಲಿ ಆಳವಾಗಿ ಬೇರೂರಿದೆ, ಇದರಿಂದ ಇಂದಿನ ಜನರು ಹೊರ ಬರಬೇಕು, ದೀಪಾವಳಿ ಎಂದರೆ ಪಟಾಕಿ ಹಚ್ಚುವುದು ಎಂಬ ಮನಸ್ಥಿತಿ ಜನರಲ್ಲಿದೆ, ದೀಪಾವಳಿ ಎಂದರೆ ಮನೆ, ದೇವಾಲಯ, ಗುಡಿ, ಗೋಪುರ, ಸಾರ್ವಜನಿಕ ಸ್ಥಳ ಮತ್ತು ರಸ್ತೆಗಳಲ್ಲಿ ಹಣತೆಯ ದೀಪಗಳನ್ನು ಹಚ್ಚಿ ಅಂದಕಾರವನ್ನು ಹೋಗಲಾಡಿಸಿ ಎಲ್ಲರ ಜೀವನದಲ್ಲಿ ಬೆಳಕು ಮೂಡಲಿ ಎಂಬುದು ದೀಪಾವಳಿ ಹಬ್ಬದ ವಿಶೇಷವಾಗಿದೆ, ಈ ವರ್ಷದ ದೀಪಾವಳಿಯನ್ನು 'ದೀಪ ಬೆಳಗಲಿ, ಪಟಾಕಿ ಅಳಿಯಲಿ', 'ಮಣ್ಣಿನ ಹಣತೆ ಎಲ್ಲೆಲ್ಲೂ ರಾರಾಜಿಸಿ ಹಚ್ಚೋಣ, ವಿಷಕಾರಿ ಪಟಾಕಿಗೆ ತಿಲಾಂಜಲಿ ಇಟ್ಟು, ಪರಿಸರ ಸ್ನೇಹಿ ಹಸಿರು ಪಟಾಕಿಯನ್ನು ಹಚ್ಚೋಣ', ಎಂದು ಪರಿಸರಕ್ಕೆ ಹಾನಿಯಾಗದಂತೆ ನಾವೆಲ್ಲರೂ ಸಂಕಲ್ಪ ಮಾಡಬೇಕೆಂದು ನನ್ನ ಮಹದಾಸೆಯಾಗಿದೆ. ಸರ್ವರಿಗೂ ದೀಪಾವಳಿ ಹಬ್ಬದ ಶುಭಾಶಯಗಳು.


–ಪರಶಿವಮೂರ್ತಿ ಎನ್.ಪಿ, ನಂಜೇಪುರ, ಸರಗೂರು ತಾ.




ಕೆಬಿಜೆಯವರ

ಛೂಮಂತ್ರ... ಛೂಮಂತ್ರ... ಛೂಮಂತ್ರ...


ಸ್ಮೃತಿಪಟಲದಿಂದ ಮರೆಯಾದ ದೇವಮಾನವನನ್ನು ನೆನೆದು...



ಶ್ರೀ ಸತ್ಯಸಾಯಿ ಬಾಬಾ
ತಮ್ಮ ಜೀವಿತಾವಧಿಯಲ್ಲಿ ದೊಡ್ಡ ಭಕ್ತ ಸಮುದಾಯವನ್ನು ಹೊಂದಿದ್ದ ದೇವಮಾನವ



ಸದ್ಗುರು ಶ್ರೀ ಮಧುಸೂದನ್ ಸಾಯಿ
ಈಗ ಶ್ರೀ ಸತ್ಯ ಸಾಯಿಬಾಬಾ ಮಿಷನ್ ನಡೆಸಿಕೊಂಡು ಹೋಗುತ್ತಿರುವವರು




ಮಾರದೇವನಹಳ್ಳಿಯಲ್ಲಿರುವ ಶ್ರೀ ಸತ್ಯ ಸಾಯಿ ಶಾರದಾನಿಕೇತನದ ಮುಂಭಾಗದ ನೋಟ

ಕಳೆದ ಕೆಲ ದಿನಗಳ ಹಿಂದೆ, ಮೈಸೂರು ನಗರದ ಹೆಸರಾಂತ ಎನ್‌ಜಿಓ, **ಮೈಸೂರು ಗ್ರಾಹಕರ ಪರಿಷತ್** ಸಂಸ್ಥಾಪಕ ಸಂಚಾಲಕರಾದ ಡಾ. ಭಾಮಿ ವಿ.ಶೆಣೈ ಅವರು ಶ್ರೀ ಸತ್ಯಸಾಯಿ ಬಾಬಾ ಅವರ ಟ್ರಸ್ಟ್ ಮಂಡ್ಯದ ಬಳಿ ಸ್ಥಾಪಿಸಿರುವ ಒಂದು ಹಿರಿಯ ಪ್ರಾಥಮಿಕ ಶಾಲೆಗೆ ತಮ್ಮ ಭೇಟಿಯ ವಿಚಾರವಾಗಿ ನನಗೆ ಒಂದು ಸಂದೇಶ ರವಾನಿಸಿದ್ದರು. ಅದನ್ನು ನಾನು ಪೂರ್ಣ ಗಮನಿಸಿದೆ. ಪುಟ್ಟಪರ್ತಿ ಖ್ಯಾತಿಯ, ಯಾವ ಬಾಬಾರ ಕಡೇ ದಿನಗಳು ಆಘಾತ ಮತ್ತು ವಿವಾದಗಳಲ್ಲಿ ಮುಳುಗಿದ್ದವೋ ಅಂತಹ ಶ್ರೀ ಸತ್ಯಸಾಯಿ ಬಾಬಾರವರ ನೆನಪುಗಳು ಇನ್ನೇನು ಸಂಪೂರ್ಣವಾಗಿ ಗ್ರಹಣ ಹಿಡಿದಂತಾಗಿ ಅವರ ಆಧ್ಯಾತ್ಮಿಕ ಶಕ್ತಿ ಮತ್ತು ವೈಭವಗಳು ಕೊನೆಗೊಂಡಿವೆ ಎಂದು ನಾನು ಭಾವಿಸಿದ್ದೆ. ಬಾಬಾರವರ ಭೌತಿಕ ಉಪಸ್ಥಿತಿಯ ಖ್ಯಾತಿಯ ಉತ್ತುಂಗದ ದಿನಗಳಲ್ಲಿ ನಡೆದಂತೆ ಯಾವ ಕಾರ್ಯಕ್ರಮಗಳು ಪುಟ್ಟಪರ್ತಿ ಆಶ್ರಮದಲ್ಲಿ ಈಗ ನಡೆಯುತ್ತಿಲ್ಲ ಎಂದು ನಾನು ಕೇಳಿದ್ದೆ. ಹಾಗೆಯೇ ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿರುವ ಬಾಬಾರ ಆಶ್ರಮವು ಕೂಡ ನೇಪಥ್ಯಕ್ಕೆ ಸರಿದಿದೆ ಎಂಬ ಸುದ್ದಿಯೂ ಇತ್ತು.



250 ವಸತಿ ವಿದ್ಯಾರ್ಥಿಗಳನ್ನೊಳಗೊಂಡ ಶಾಲೆಯ ಹಾಸ್ಟೆಲ್‌ನ ನೋಟ



ಶಾಲಾ ಕಟ್ಟಡದ ಪ್ರವೇಶ ದ್ವಾರದಲ್ಲಿರುವ ಬಿಳಿ ಮಾರ್ಬಲ್‌ನ ದೇವಿ ಸರಸ್ವತಿ ಪ್ರತಿಮೆ

ಬಾಬಾ ನಂತರದ ಕಾಲದ ಈ ಮಸುಕಾದ ಸನ್ನಿವೇಶದಲ್ಲಿ ಭಾಮಿ ಅವರ ಈ ಸಂದೇಶ ನನ್ನಲ್ಲಿ ಒಬ್ಬ ಪತ್ರಕರ್ತನ ಕುತೂಹಲವನ್ನು ಕೆರಳಿಸಿತು. ಹಾಗೆ ಒಬ್ಬ ಸತ್ಯಾನ್ವೇಷಕನಾಗಿ ಮನುಷ್ಯನಿಗೆ ಧರ್ಮ ಹಾಗೂ ದೇವಮಾನವರ ಬಗ್ಗೆ ಇರುವ ಗೀಳಿನ ಬಗ್ಗೆ ತನಿಖೆ ಮಾಡುವ ನನ್ನ ಆಸಕ್ತಿಯನ್ನು ಹೆಚ್ಚಿಸಿತು. ಈ ಪದಗಳನ್ನು ನಾನು ಮತ್ತೊಬ್ಬ ದೇವಮಾನವ ಜಗ್ಗೀ ವಾಸುದೇವ ಅವರಿಂದ ಎರವಲು ಪಡೆದಿದ್ದೇನೆ.

ಭಾಮಿ ವಿ.ಶೆಣೈ ಅವರು ಶಾಲೆಯ ಬಗ್ಗೆ ತಮ್ಮ ಸಂದೇಶದಲ್ಲಿ ಉಲ್ಲೇಖಿಸಿದ್ದ ಪ್ರಶಂಸೆಯನ್ನು ನಾನು ಅಲಕ್ಷಿಸುವಂತಿರಲಿಲ್ಲವಾದ್ದರಿಂದ ನಾನು ಮರುದಿನವೇ ಆ ಶಾಲೆಗೆ ಭೇಟಿ ಕೊಡಲು ನಿರ್ಧರಿಸಿದೆ. ಅಲ್ಲದೇ ವಿಶೇಷವಾಗಿ ಶಿಕ್ಷಣದ ವಿಷಯಕ್ಕೆ ಬಂದಾಗ, ಉತ್ಕೃಷ್ಟತೆಯಲ್ಲಿ ಕಿಂಚಿತ್ತು ಕಡಿಮೆಯಾಗುವುದನ್ನು ಸಹಿಸದಂತಹವರ ಅಭಿಪ್ರಾಯವೂ ಆಗಿತ್ತು. ಅವರು ಬರೆದಿದ್ದರು:

"ನಮ್ಮ ಐಐಟಿಗಳು ಸಹ ಅಂತಹ ಭವ್ಯ ಕಟ್ಟಡಗಳು ಮತ್ತು ಸುತ್ತಮುತ್ತಲಿನ ವಾತಾವರಣವನ್ನು ಹೊಂದಿಲ್ಲ. ಉಪನ್ಯಾಸ ಕೊಠಡಿಗಳು ವಿಶಾಲವಾಗಿವೆ. ಗ್ರಂಥಾಲಯ ಬೃಹತ್ತಾಗಿದೆ. ಹಾಸ್ಟೆಲ್ ಬಹಳ ಸ್ವಚ್ಛ, ದೊಡ್ಡದಾಗಿದೆ. ಶೌಚಾಲಯ ಶುಚಿಯಾಗಿದ್ದು, ಉಪಯೋಗಿಸಲು ಅನುಕೂಲಕರವಾಗಿವೆ. ಯಾವುದೇ ಶುಲ್ಕವಿಲ್ಲ. ಸಂಪೂರ್ಣ ಉಚಿತ. ಬಹುತೇಕ ಬಡವರಲ್ಲಿ ಬಡವರಿಗೆ ಪ್ರವೇಶ ಕಲ್ಪಿಸಲಾಗುತ್ತದೆ".

"ಕೆಲ ಶ್ರೀಮಂತ ಹಾಗೂ ಮಧ್ಯಮ ವರ್ಗದ ವಿದ್ಯಾರ್ಥಿಗಳು ಕೂಡ ಇಲ್ಲಿದ್ದಾರೆ. ಖಾಸಗಿ ಶಾಲೆಗಳ ವಿಚಾರದಲ್ಲಿ ಕೇಳಿಬರುವಂತೆ ಯಾವುದೇ ವರ್ಗಭೇದವಿಲ್ಲದೆ ಅವರೆಲ್ಲಾ ಸಹಬಾಳ್ವೆ ನಡೆಸುತ್ತಿದ್ದಾರೆ. ಶಿಕ್ಷಣ ಹಕ್ಕು ಕಾಯ್ದೆಯಡಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವಾಗ ವರ್ಗ ಭೇದ ಸಮಸ್ಯೆಗಳ ಎದುರಿಸುವುದಾಗಿ ಖಾಸಗಿ ಶಾಲೆಗಳು ಹೇಳಿಕೊಳ್ಳುತ್ತವೆ. ಆರನೇ ತರಗತಿಗೆ ಸೇರಿಕೊಳ್ಳುವ ವಿದ್ಯಾರ್ಥಿಗಳಿಗೆ ಅಕ್ಷರ ಜ್ಞಾನವಾಗಲೀ, ಸಂಖ್ಯಾ ಜ್ಞಾನವಾಗಲೀ ಇರುವುದಿಲ್ಲ. ಆದರೆ ಪ್ರತಿಭಾನ್ವಿತ ವಿದ್ಯಾರ್ಥಿಗಳೊಟ್ಟಿಗೆ ಸರಿ ಹೊಂದುವಂತೆ ಅವಶ್ಯವಿರುವ ಕೌಶಲ್ಯಗಳನ್ನು ಅವರಿಗೂ ಒದಗಿಸುವ ನಿಟ್ಟಿನಲ್ಲಿ ಶಾಲೆ ಕ್ರಮ ಕೈಗೊಳ್ಳುತ್ತದೆ. ಇದು ಗಮನಾರ್ಹ."

"ತಪ್ಪು ಹುಡುಕಲೇಬೇಕೆಂದಾದರೆ, ಅಲ್ಲಿ 'ಗುರು' ಅನುಯಾಯಿ ವ್ಯವಸ್ಥೆಗೆ ಹೆಚ್ಚು ಒತ್ತು ಕೊಡಲಾಗುತ್ತದೆ. ಆದರೆ ಉತ್ತಮ ನಡೆ–ನುಡಿ ಮತ್ತು ಗುಣಗಳ ಪಾಲನೆ, ಸಮಾಜ ಸೇವೆ, ಅಶಕ್ತರಿಗೆ ಸಹಾಯ ಇತ್ಯಾದಿಗಳನ್ನು ಒಳಗೊಂಡಿದೆ. ಅವರು ಪದವೀಧರರಾದಾಗ ಸಮಾಜಕ್ಕಾಗಿ ಏನು ಮಾಡಬೇಕು ಎಂಬುದರ ಬಗ್ಗೆಯೂ ನಾನು ವಿದ್ಯಾರ್ಥಿಗಳೊಂದಿಗೆ ಒಂದು ಗಂಟೆ ಸಂವಾದ ನಡೆಸಿದೆ."

ಅವರು ವಿದ್ಯಾರ್ಥಿಗಳೊಂದಿಗೆ ಮಾತನಾಡಿದ್ದನ್ನು ಕೇಳಿಸಿಕೊಳ್ಳಲು ನಾನು ಅಂದು ಅಲ್ಲಿದ್ದಿದ್ದರೆ ಚೆನ್ನಾಗಿರುತ್ತಿತ್ತು ಎಂದೆನಿಸಿತು. ಈ ರೀತಿ ಬುದ್ಧಿ ಹೇಳುವ ಶೆಣೈರಂತಹ ಹಿರಿಯರಿಂದ ವಿದ್ಯಾರ್ಥಿಗಳು ಏನು ಬಯಸುತ್ತಾರೆ ಎಂಬ ಬಗ್ಗೆ ನಾನು (ಅದನ್ನು ಓದಿದ ನಂತರ) ಅಚ್ಚರಿಪಟ್ಟೆ, ಬುದ್ಧಿವಂತ, ಸೆಲ್‌ಫೋನ್ ಶಿಕ್ಷಿತ ವಿದ್ಯಾರ್ಥಿ, ದೊಡ್ಡ ಉದ್ಯೋಗದಲ್ಲಿದ್ದು, ಈಗ ನಿವೃತ್ತರಾಗಿರುವ ಹಾಗೂ ದೊಡ್ಡ ಮೊತ್ತದ ನಿವೃತ್ತಿ ವೇತನ ಪಡೆಯುತ್ತಿರುವ ಹಿರಿಯರಿಗೆ ತಾವು ಸಮಾಜದ ಕೆಳಮಟ್ಟದ ಹಾಗೂ ವಂಚಿತ ವರ್ಗದ ಜನರ ಸೇವೆಗಾಗಿ ಏನು ಸಹಾಯ ಮಾಡುತ್ತೀರಿ? ಎಂದು ಕೇಳಬಹುದು. ವಾಸ್ತವವಾಗಿ, ಆಯ್ದ ಕೆಲವರು ಮಾತ್ರ ತಮ್ಮ ಆರ್ಥಿಕ ಸಂಪಾದನೆಯನ್ನು ಬಡವರೊಂದಿಗೆ ಹಂಚಿಕೊಳ್ಳುತ್ತಾರೆ. ಅವರಲ್ಲಿ ಕೆಲವರು ದಾನ ಧರ್ಮ ಮಾಡುವವರು ಇದ್ದಾರೆ.

ನಾನು ಮತ್ತು ಭಾಮಿ ಶೆಣೈರವರು ಭೇಟಿ ನೀಡಿದ ಇಂತಹ ಉತ್ತಮ ಶಾಲೆಗಳನ್ನು ನಿರ್ಮಾಣ ಮಾಡಲು ಕೆಲವು ದಾನಿಗಳು ಧಾರಾಳವಾಗಿ ದೇಣಿಗೆ ನೀಡುತ್ತಾರೆ. ಅವರು ಜೀವನ್ಮುಖಿ ದೈವಿಕ ವ್ಯಕ್ತಿಗಳು. ಅವರ ಸಂತತಿ ಹೆಚ್ಚಲಿ.

ಇಪ್ಪತ್ತು ಎಕರೆ ವಿಶಾಲ ಜಾಗದಲ್ಲಿರುವ ಈ ವಸತಿ ಶಾಲೆ 2013ರಲ್ಲಿ ಪ್ರಾರಂಭವಾಗಿದೆ. ಅದೂ ಕೃಷಿ ವಲಯದಲ್ಲಿ, ಉತ್ತಮ ರಸ್ತೆ ಸಂಪರ್ಕವಿಲ್ಲದ ಪ್ರದೇಶದಲ್ಲಿದೆ. ಎತ್ತಿನ ಗಾಡಿಗಳೇ ಹೆಚ್ಚಾಗಿ ಓಡಾಡಿ, ಹಳ್ಳ–ಕೊಳ್ಳದಿಂದ ಕೂಡಿರುವ ಮಣ್ಣಿನ ರಸ್ತೆಯಲ್ಲಿ ಕಾರಿನಲ್ಲಿ ಪ್ರಯಾಣ ಮಾಡು ವುದು ಕೂಡ ದುಸ್ತರ.

ಆದಾಗ್ಯೂ, ಕಾರು ಶಾಲಾ ಆವರಣದ ಒಳಗೆ ಹೊಕ್ಕಾಗ ಸ್ವರ್ಗದ ಹೊಸ ನೋಟವೇ ಅನಾವರಣಗೊಂಡಿತು. ಒಂದು ಚಿತ್ರ ಸಾವಿರಾರು ಪದಗಳಿಗಿಂತ ಹೆಚ್ಚು ಅರ್ಥ ಕೊಡುವುದಾದರೆ ಕೆಲವು ಚಿತ್ರಗಳನ್ನು ಇಲ್ಲಿ ಸೇರಿಸಬಹುದು. ಅದು ಭಯಾನಕ ಮರಳುಗಾಡಿನಲ್ಲಿ ಅಲೆದಾಡಿದ ಮೇಲೆ ಸಿಕ್ಕ ಓಯಸಿಸ್‌ನಂತಿತ್ತು.

ಋಷಿಮುನಿಗಳ ಈ ನಾಡೇ ಧನ್ಯ. ಪುಟ್ಟಪರ್ತಿಯ ಶ್ರೀ ಸತ್ಯ ಸಾಯಿಬಾಬಾರ ಚೈತನ್ಯ ನೆಲೆಸಿರುವ ಮಂಡ್ಯ ಭೂಮಿಯೇ ಧನ್ಯ.

[ಇಂಗ್ಲೀಷ್ ಲೇಖನದ ಕನ್ನಡಾನುವಾದ : ಡಿ.ಜೆ.ಶುಭ]

email: voice
@starofmysore.com

ಬೂತ್ ಮಟ್ಟದಿಂದ ಪಕ್ಷ ಬಲವರ್ಧನೆ: ಬಿ.ವೈ.ವಿಜಯೇಂದ್ರ

● ಬಿಜೆಪಿ ನೂತನ ರಾಜ್ಯಾಧ್ಯಕ್ಷರಿಗೆ ವರಿಷ್ಠರ ಸಲಹೆ ಪಾಲನೆ ● ಬೂತ್ ಮಟ್ಟದ ಕಾರ್ಯಕರ್ತನ ಮನೆಗೆ ಭೇಟಿ ನೀಡಿ, ಚರ್ಚಿಸುವ ಮೂಲಕ ಕಾರ್ಯಾರಂಭ

ಬೆಂಗಳೂರು, ನ.11(ಕೆಎಂಶಿ)– ರಾಷ್ಟ್ರೀಯ ಘಟಕದ ಮಾದರಿಯಲ್ಲೇ ರಾಜ್ಯದಲ್ಲೂ ಬೂತ್ ಮಟ್ಟದಲ್ಲಿ ಸಂಘಟನೆ ಬಲಪಡಿಸುವುದಾಗಿ ಬಿಜೆಪಿ ನೂತನ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಇಂದಿಲ್ಲಿ ತಿಳಿಸಿದ್ದಾರೆ.

ಬೂತ್ ಮಟ್ಟದ ಕಾರ್ಯಕರ್ತರೊಬ್ಬರ ಮನೆಗೆ ತೆರಳಿ ಅವರೊಂದಿಗೆ ಸಂಘಟನೆ ಬಗ್ಗೆ ಸಮಾಲೋಚನೆ ಮಾಡುವ ಮೂಲಕ ತಮ್ಮ ಜವಾಬ್ದಾರಿ ನಿರ್ವಹಣೆಯನ್ನು ನೂತನ ಅಧ್ಯಕ್ಷರು ಇಂದು ಪ್ರಾರಂಭಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ ಪ್ರತಿಯೊಂದು ಬೂತ್ ಅಧ್ಯಕ್ಷರು ಕೂಡ ಪಕ್ಷದ ಜೀವಾಳ. ಪಕ್ಷದ ಎಲ್ಲಾ ಬೂತ್‌ಗಳನ್ನು ಬಲಪಡಿಸಲು ಆದ್ಯತೆ ನೀಡಲಾಗುವುದು. ಗಾಂಧಿ ನಗರ ಬೂತ್ ಒಂದರ ಅಧ್ಯಕ್ಷ ಶಶೀಂದ್ರ ಅವರ ಮನೆಗೆ ಭೇಟಿ ನೀಡಿ ದೀಪಾವಳಿ ಶುಭಾಶಯ ಕೋರಿದ್ದೇನೆ. ರಾಜ್ಯದಲ್ಲಿ 58,282 ಬೂತ್‌ಗಳು ಇವೆ. ಎಲ್ಲ ಬೂತ್‌ಗಳಲ್ಲಿ ಪಕ್ಷದ ಸಂಘಟನೆ ಬಲಪಡಿಸಲಾಗುವುದು ಎಂದು ತಿಳಿಸಿದರು.



ಪ್ರತಿ ಬೂತ್ ಪ್ರಮುಖ ಮತ್ತು ಪಕ್ಷದ ಜೀವಾಳ ಎಂಬುದು ಕೇಂದ್ರ ಗೃಹ ಸಚಿವರು ಆದ ಅಮಿತ್ ಷಾ, ರಾಷ್ಟ್ರೀಯ ಅಧ್ಯಕ್ಷರಾದ ಜೆ.ಪಿ.ನಡ್ಡಾ ಅವರ ಕಲ್ಪನೆ ಮತ್ತು ಚಿಂತನೆಯಾಗಿದೆ. ಅವರ ಚಿಂತನೆಯಂತೆ ಬೂತ್ ಅಧ್ಯಕ್ಷರ ಮನೆಗೆ ಭೇಟಿ ಕೊಡುವ ಮೂಲಕ ಕೆಲಸ ಕಾರ್ಯಾರಂಭ ಮಾಡಿದ್ದೇನೆ. ಇಡೀ ರಾಜ್ಯದಲ್ಲಿರುವ 58 ಸಾವಿರಕ್ಕೂ ಹೆಚ್ಚು ಬೂತ್‌ಗಳಲ್ಲಿ ಪಕ್ಷದ ಸಂಘಟನೆಯನ್ನು ಬಲಪಡಿಸಲು ಹೆಜ್ಜೆ ಇಡುವುದಾಗಿ ಹೇಳಿದರು.

ಪಕ್ಷದ ರಾಷ್ಟ್ರೀಯ ನಾಯಕರು ಬೂತ್ ಅಧ್ಯಕ್ಷರಾಗಿ ಈ ಮಟ್ಟಕ್ಕೆ ಬೆಳೆದು ಬಂದಿದ್ದಾರೆ. ಬಿಜೆಪಿ, ರಾಷ್ಟ್ರೀಯ ಅಧ್ಯಕ್ಷರಂತೆ ಬೂತ್ ಅಧ್ಯಕ್ಷರನ್ನೂ ಗೌರವದಿಂದ ಕಾಣುತ್ತದೆ. ಇದೇ ಬಿಜೆಪಿಯ ವಿಶೇಷತೆ ಎಂದು ತಿಳಿಸಿದರು.

ಬಿಜೆಪಿ ಕಾರ್ಯಕರ್ತರು ಹೋರಾಟದಿಂದ ಹಿಂದೆ ಸರಿದ ಉದಾಹರಣೆಗಳಿಲ್ಲ. ನಮ್ಮ ಕಾರ್ಯಕರ್ತರ ರಕ್ತದ ಕಣಕಣದಲ್ಲೂ ಹೋರಾಟದ ಗುಣವಿದೆ. ಕಾಂಗ್ರೆಸ್ ಅಬ್ಬರವನ್ನು ಮೀರಿ ನಮ್ಮ ಪಕ್ಷದ ಕಾರ್ಯಕರ್ತರು ಸಂಘಟನೆ ಮಾಡುತ್ತಾರೆ. ಮುಂದಿನ ಲೋಕಸಭಾ ಚುನಾವಣೆಯಲ್ಲಿ ತಕ್ಕ ಉತ್ತರ ಕೊಡಲಿದ್ದೇವೆ ಎಂದು ಬಿ.ವೈ.ವಿಜಯೇಂದ್ರ ವಿಶ್ವಾಸದಿಂದ ನುಡಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com



ಡಾ.ಕಲ್ಯಾಣಸಿರಿ ಭಂತೇಜಿ ಅವರ ಹುಟ್ಟುಹಬ್ಬವನ್ನು ಸಂಸದ ವಿ.ಶ್ರೀನಿವಾಸಪ್ರಸಾದ್ ಸಮ್ಮುಖದಲ್ಲಿ ಅವರ ಮೈಸೂರು ನಿವಾಸ ಭೀಮ ಸದನದಲ್ಲಿ ಆಚರಿಸಲಾಯಿತು. ಈ ವೇಳೆ ಪ್ರೊ. ನೀಲಗಿರಿ ತಳವಾರ, ಪ್ರಕಾಶಕ ಭರತ್ ರಾಮಸ್ವಾಮಿ, ಡಿ.ವೆಂಕಟರಾಜು, ಸಿ.ಜಿ.ಶಿವಕುಮಾರ್, ಡಾ.ಮುಳ್ಳೂರು ನಂಜುಂಡಸ್ವಾಮಿ, ಶಿವಸ್ವಾಮಿ (ಶಿವಪ್ಪ) ಇದ್ದರು.



ನಿಖಿಲ್ ಕುಮಾರಸ್ವಾಮಿ ಅಭಿಮಾನಿ ಬಳಗದ 3ನೇ ವಾರ್ಷಿಕೋತ್ಸವದ ಪೋಸ್ಟರ್ ಅನ್ನು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಬಿಡುಗಡೆ ಮಾಡಿದರು. ಈ ವೇಳೆ ಬಳಗದ ಅಧ್ಯಕ್ಷ ಪ್ರದೀಪ್ ಕೃಷ್ಣೇಗೌಡ, ಸದಸ್ಯರಾದ ಶ್ರೀನಿವಾಸಗೌಡ, ಹೇಮಂತ್‌ಕುಮಾರ್ ಸುಬ್ರಮಣ್ಯ, ಆಕಾಶ್ ಉಪಸ್ಥಿತರಿದ್ದರು.



ಬೆಂಗಳೂರಿನಲ್ಲಿ ಬಿಜೆಪಿ ನೂತನ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ರಘು ಕೌಟಿಲ್ಯ ಶನಿವಾರ ಆತ್ಮೀಯವಾಗಿ ಅಭಿನಂದಿಸಿದರು.



ಮೈಸೂರಿನ ವಿದ್ಯಾರಣ್ಯಪುರಂನಲ್ಲಿ ಗೆಳೆಯರ ಬಳಗದ ಆಶ್ರಯದಲ್ಲಿ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಧ್ವಜಾರೋಹಣ ನೆರವೇರಿಸಿ, ಆರೋಗ್ಯ ತಪಾಸಣೆ ಶಿಬಿರಕ್ಕೆ ಚಾಲನೆ ನೀಡಿದರು. ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ಕಾಂಗ್ರೆಸ್ ಮುಖಂಡರಾದ ಕುಮಾರ್ (ಕುಮ್ಮಿ), ಗೌತಮ್ (ಬುಜ್ಜಿ), ರವಿಶಂಕರ್, ವಿನಯ್, ಕುಮಾರ್, ವಸಂತ ನಾಯಕ್, ಗೃಹಶೋಭೆ ಕೃಷ್ಣ, ಪ್ರತಾಪ್‌ರಾವ್ (ಗಣೇಶ್), ಶೇಖರ್, ಶಂಕರ್, ನಾಗರಾಜು, ಸುನೀಲ್, ರವಿ, ಶಿವಕುಮಾರ್, ಹರೀಶ್, ಅಪ್ಪು ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ವಾರ್ಡ್ ಸಂಖ್ಯೆ 35ಕ್ಕೆ ಸೇರಿದ ಜೆಎಸ್‌ಎಸ್ ಲೇಔಟ್‌ನಲ್ಲಿರುವ ಉದ್ಯಾನದಲ್ಲಿ ವ್ಯಾಯಾಮಕ್ಕೆ ಅವಶ್ಯವಿರುವ ಪರಿಕರಗಳನ್ನು ಅಳವಡಿಸುವ ಕಾಮಗಾರಿಗೆ ಕಾರ್ಪೋರೇಟರ್ ಸಾತ್ವಿಕ್ ಸಂದೇಶ್‌ಸ್ವಾಮಿ ಗುದ್ದಲಿಪೂಜೆ ನೆರವೇರಿಸಿದರು. ಈ ವೇಳೆ ಮುಖಂಡರಾದ ಬಸವರಾಜಪ್ಪ, ಮಹದೇವಪ್ಪ, ಶ್ರೀಕಂಠಮೂರ್ತಿ, ರೇಣುಕಾ ಸ್ವಾಮಿ, ಮಹೇಶ್ ಇನ್ನಿತರರು ಹಾಜರಿದ್ದರು.



ರವಿಕುಮಾರ್‌ಗೆ ಪಿಹೆಚ್.ಡಿ ಪದವಿ

ಮೈಸೂರು, ನ.11– ಡಾ.ಎಂ.ಎಸ್.ಶೇಖರ್ ಅವರ ಮಾರ್ಗದರ್ಶನದಲ್ಲಿ ಡಿ.ರವಿಕುಮಾರ್ ಅವರು ಕನ್ನಡ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಸ್ವಚ್ಛತೆ ಮಾಡಿ ಅಭಿವೃದ್ಧಿಗೊಳಿಸಿದ ನಮೋ ಉದ್ಯಾನವನ ಉದ್ಘಾಟನೆ



ಮೈಸೂರು, ನ. 11–ಪ್ರಧಾನಿ ನರೇಂದ್ರ ಮೋದಿಯವರ ಹುಟ್ಟುಹಬ್ಬದ ಪ್ರಯುಕ್ತ ಬಿಜೆಪಿ ವತಿಯಿಂದ ದೇಶದಾದ್ಯಂತ ಸೇವಾ ಪಾಕ್ಷಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಅದರ ಅಂಗವಾಗಿ ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದ ಶಾರದಾದೇವಿನಗರದಲ್ಲಿ ಉದ್ಯಾನವನ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಜನವಾಸ ಇರುವ ಬಡಾವಣೆ ನಡುವೆ ಗಿಡಗಂಟಿ ಕಳೆ ಬೆಳೆದು ಜನಬಳಕೆ ಇಲ್ಲದೇ ಪಾಳು ಬಿದ್ದಿತ್ತು. ಅಂತಹ ಉದ್ಯಾನವನ್ನು ಬಿಜೆಪಿ ಕಾರ್ಯಕರ್ತರು, ಮಂಡಲದ ಅಧ್ಯಕ್ಷ ಬಿ.ಎಂ.ರಘು ನೇತೃತ್ವದಲ್ಲಿ ಸತತವಾಗಿ 15 ದಿನ ಶ್ರಮ ವಹಿಸಿ ಸ್ವಚ್ಛಗೊಳಿಸಿ, ಇಂಟರ್‌ಲಾಕ್ ಟೈಲ್ಸ್ ಅಳವಡಿಸಿ, ಸುಂದರ ಹೂ ಗಿಡಗಳನ್ನು ನೆಟ್ಟಿದ್ದಾರೆ. ಉದ್ಯಾನವನಕ್ಕೆ "ನಮೋವನ" ಹೆಸರನ್ನಿಟ್ಟು ಸಾರ್ವಜನಿಕರು ಕುಳಿತುಕೊಳ್ಳುವ ಆಸನಗಳ ವ್ಯವಸ್ಥೆ ಮಾಡಿ ಸುಂದರವಾಗಿ ಅನಾವರಣಗೊಳಿಸಿದ್ದಾರೆ. ಇದನ್ನು ಗುರುತಿಸಿದ ಸ್ಥಳೀಯ ನಿವಾಸಿಗಳು ಶಾರದಾದೇವಿನಗರ ಹಿತರಕ್ಷಣಾ ವೇದಿಕೆ ಆಶ್ರಯದಲ್ಲಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಹಾಗೂ ಅಭಿನಂದನಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು.

ಶಾಸಕ ಟಿ.ಎಸ್.ಶ್ರೀವತ್ಸ ಹಾಗೂ ಚಾಮುಂಡೇಶ್ವರಿ ನಗರ ಮಂಡಲದ ಅಧ್ಯಕ್ಷ ಬಿ.ಎಂ.ರಘು ಅವರನ್ನು ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ಪಾಲಿಕೆ ಮಾಜಿ ಸದಸ್ಯ ಕೆ.ಜೆ. ರಮೇಶ್, ಬಿಜೆಪಿ ಮುಖಂಡರಾದ ಜೋಗಿಮಂಜು, ಭಾನುಪ್ರಕಾಶ್, ಸ್ಥಳೀಯ ಮುಖಂಡರಾದ ವಿಜೇಯೇಂದ್ರ, ಶ್ರೀಧರ್ ಶರ್ಮಾ, ರಾಜಮಣಿ, ರಾಕೇಶ್ ಭಟ್, ರಾಜ್‌ಕುಮಾರ್, ರಮಬಾಯಿ, ರವಿ ಅರಸ್, ರವಿ ನಾಯಕಂಡ, ಗೀತಾ ಮಹೇಶ್, ವಿಜಯ ಮಂಜುನಾಥ್, ಶಶಿಕಾಂತ್, ಗಿರೀಶ್, ಪ್ರತಾಪ್, ಶಿವಕುಮಾರ್, ನಾಗರಾಜ್ ಜನ್ನು, ಚಂದ್ರಶೇಖರ ಸ್ವಾಮಿ, ಅಭಿಷೇಕ್, ಹಿರಿಯಣ್ಣ, ಬಸವಣ್ಣ, ಶ್ರೀನಿವಾಸ್‌ಗೌಡ ಇತರರಿದ್ದರು.

ಮೈಸೂರಲ್ಲಿ ವೀರ ವನಿತೆ ಒನಕೆ ಓಬವ್ವ ಜಯಂತಿ



ಮೈಸೂರು, ನ.11 (ಎಂಟಿವೈ)– ಸ್ವಾತಂತ್ರ್ಯ ಹೋರಾಟಗಾರರಾದ ಒನಕೆ ಓಬವ್ವ ಸೇರಿದಂತೆ ಮಹಾನ್, ಪುಣ್ಯ ಪುರುಷರ ಜಯಂತಿಯನ್ನು ಒಂದೇ ಸಮುದಾಯಕ್ಕೆ ಸೀಮಿತಗೊಳಿಸದೆ, ಸರ್ವ ಸಮುದಾಯಕ್ಕೂ ಸಾಧನೆ ಮತ್ತು ಸಾಮಾಜಿಕ ಸಂದೇಶ ಸಾರುವ ಪ್ರಯತ್ನ ಮಾಡಬೇಕು ಎಂದು ಶಾಸಕ ಟಿ.ಎಸ್.ಶ್ರೀವತ್ಸ ಸಲಹೆ ನೀಡಿದ್ದಾರೆ.

ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಜಿಲ್ಲಾಡಳಿತ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆಯೋಜಿಸಿದ್ದ ವೀರರಾಣಿ ಒನಕೆ ಓಬವ್ವ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸರ್ಕಾರದ ವತಿಯಿಂದಲೇ ನಾಡಿನಾದ್ಯಂತ ಒನಕೆ ಓಬವ್ವ ಜಯಂತಿ ಕಾರ್ಯಕ್ರಮವನ್ನು ಆಚರಿಸಿ, ವಿದ್ಯಾರ್ಥಿಗಳಿಗೆ ಹಾಗೂ ಜನರಿಗೆ ಓಬವ್ವ ಅವರ ಅಪ್ರತಿಮ ಸಾಧನೆ ಬಗ್ಗೆ ಮಾಹಿತಿ ನೀಡುವ ಪ್ರಯತ್ನ ಮಾಡಿದೆ. ಅವರ ಸಾಧನೆಯನ್ನು ರಾಜ್ಯದಾದ್ಯಂತ ತಿಳಿಸಲು ಕಾರ್ಯಕ್ರಮ ನಡೆಸಲಾಗುತ್ತಿದೆ. ಪುಣ್ಯ ಪುರುಷರು ಹಾಗೂ ಮಹಾನ್ ನಾಯಕರ ಜಯಂತಿ ಆಚರಣೆಯಲ್ಲಿ ಸರ್ವ ಜನರು ಒಳಗೊಳ್ಳಬೇಕಾಗಿದೆ. ಎಂಟನೇ ಶತಮಾನದಿಂದಲೂ ಅಸ್ಪೃಶ್ಯತೆ ನಿವಾರಣೆ ಮಾಡುವ ಪ್ರಯತ್ನ ನಿರಂತರವಾಗಿ ನಡೆಯುತ್ತಾ ಬಂದಿದೆ. ಈ ನಿಟ್ಟಿನಲ್ಲಿ ಮಹನೀಯರ ಜಯಂತಿ ಕಾರ್ಯಕ್ರಮಕ್ಕೆ ಸಮುದಾಯ, ಜಾತಿ ಸಂಕೋಲೆಯಿಂದ ಸೀಮಿತಗೊಳಿಸಬಾರದು ಎಂದು ಸಲಹೆ ನೀಡಿದರು.

ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿ, ಚಿತ್ರದುರ್ಗದ ಕೋಟೆ ಎಂದರೆ ಅದು ಒನಕೆ ಓಬವ್ವರ ಸಾಹಸಮಯ ದೃಶ್ಯ ಕಣ್ಣಿಗೆ ಕಟ್ಟುತ್ತದೆ. ಇದರಿಂದ ಓಬವ್ವ ಅವರ ಮೇಲೆ ಪ್ರೀತಿ, ಗೌರವ ಹೆಚ್ಚಾಗುತ್ತದೆ. ಹೈದರಾಲಿ ಸೈನ್ಯ ಚಿತ್ರದುರ್ಗದ ಕೋಟೆಗೆ ಮುತ್ತಿಗೆ ಹಾಕಿದಾಗ ಊಟ ಮಾಡುತ್ತಿದ್ದ ಪತಿಗೆ ಅಡಚಣೆಯಾಗಬಾರದು ಎಂಬ ಕಾರಣದಿಂದ ತಾನೇ ಒನಕೆ ತಂದು, ಕೋಟೆಯ ಕಿಂಡಿಯಿಂದ ನುಸುಳುತ್ತಿದ್ದ ಶತ್ರು ಸೈನ್ಯವನ್ನು ಸದೆಬಡಿಯುವ ಮೂಲಕ ಶೌರ್ಯ ಪ್ರದರ್ಶಿಸಿದ್ದರು. ಆದರೆ, ಯಾವುದೇ ಸಾಮಾಜಿಕ ಜಾಲತಾಣಗಳಲ್ಲೂ ಒನಕೆ ಓಬವ್ವ ಅವರ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲದಿರುವುದು ವಿಷಾದನೀಯ ಎಂದರು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಆರ್.ಲೋಕನಾಥ್ ಮಾತನಾಡಿ, ಪ್ರಸ್ತುತ ಸಂದರ್ಭದಲ್ಲಿ ಮಹಿಳೆಯರು ಒನಕೆ ಓಬವ್ವ ಅವರನ್ನು ಮಾದರಿಯಾಗಿಸಿಕೊಳ್ಳಬೇಕು. ಓಬವ್ವರ ಆತ್ಮಸ್ಥೈರ್ಯ, ಕೆಚ್ಚೆದೆ ಹಾಗೂ ದಿಟ್ಟತನದ ಹೋರಾಟವನ್ನು ಮನಗಂಡು ಗಟ್ಟಿತನ ಪ್ರದರ್ಶಿಸಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ಒನಕೆ ಓಬವ್ವ ಛದ್ಮವೇಷ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಸ್ನೇಹಾರ್ಚನ ಅವರಿಗೆ ಪ್ರಥಮ ಹಾಗೂ ದಿಯಾ ಕೃಷ್ಣ ಅವರಿಗೆ ದ್ವಿತೀಯ ಬಹುಮಾನ ನೀಡಲಾಯಿತು. ಕಾರ್ಯಕ್ರಮದಲ್ಲಿ ಸೋಮಾನಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ.ಟಿ.ರಮೇಶ್ ವಿಶೇಷ ಉಪನ್ಯಾಸ ನೀಡಿದರು. ಮೇಯರ್ ಶಿವಕುಮಾರ್, ಉಪಮೇಯರ್ ಡಾ.ಜಿ.ರೂಪ, ಪಾಲಿಕೆ ಆಡಳಿತ ವಿಭಾಗದ ಉಪಆಯುಕ್ತ ಸೋಮಶೇಖರ್ ಜಿಗಿಣಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಕರ್ನಾಟಕ ಕಾವಲು ಪಡೆಯ ರಾಜ್ಯಾಧ್ಯಕ್ಷ ಎಂ.ಮೋಹನ್ ಕುಮಾರ್‌ಗೌಡ, ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ಕಾಂಗ್ರೆಸ್ ಮಾಧ್ಯಮ ವಕ್ತಾರ ಮಹೇಶ್ ಸೇರಿದಂತೆ ಇತರರು ಭಾಗವಹಿಸಿದ್ದರು.

ಖಾಲಿ ಖುರ್ಚಿಗೆ ಭಾಷಣ

ಜಿಲ್ಲಾಡಳಿತ ವತಿಯಿಂದ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಆಯೋಜಿಸಿದ್ದ ಒನಕೆ ಓಬವ್ವ ಜಯಂತಿ ಕಾರ್ಯಕ್ರಮದಲ್ಲಿ ಬೆರಳೆಣಿಯಷ್ಟು ಜನ ಮಾತ್ರ ಭಾಗಿಯಾಗಿದ್ದರು. ಸಭಾಂಗಣದ ಬಹುತೇಕ ಖುರ್ಚಿಗಳು ಖಾಲಿಯಿದ್ದವು. ಈ ವೇಳೆ ಖಾಲಿ ಖುರ್ಚಿಗೆ ಭಾಷಣ ಮಾಡುತ್ತಿದ್ದ ವೇಳೆ ಮಲೆಯೂರು ಸೋಮಯ್ಯ ಸೇರಿದಂತೆ ಕೆಲವರು ಆಕ್ಷೇಪ ವ್ಯಕ್ತಪಡಿಸಿದರು. ಮಹನೀಯರ ಜಯಂತಿ ಕಾರ್ಯಕ್ರಮ ಆಚರಣೆಗೆ ಜನರನ್ನು ಆಹ್ವಾನಿಸಿಲ್ಲ. ದಸಂಸ ಸಂಘಟನೆಗೆ ಹೇಳಿದ್ದರೆ ಜನರನ್ನು ಕರೆತರುತ್ತಿದ್ದೆವು. ಇಲ್ಲದಿದ್ದರೆ ವಿದ್ಯಾರ್ಥಿ ನಿಲಯಗಳಿಂದ ವಿದ್ಯಾರ್ಥಿಗಳನ್ನು ಕರೆತರಬಹುದಿತ್ತು. ಉದ್ದೇಶಪೂರ್ವಕವಾಗಿ ಕಾರ್ಯಕ್ರಮವನ್ನು ಕಡೆಗಣಿಸಲಾಗಿದೆ ಎಂದು ಆರೋಪಿಸಿದರು.

ಇದಕ್ಕೆ ಸ್ಪಷ್ಟನೆ ನೀಡಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಂ.ಡಿ.ಸುದರ್ಶನ್ ಮಹನೀಯರ ಜಯಂತಿ ಕಾರ್ಯಕ್ರಮಕ್ಕೆ ಎಲ್ಲರನ್ನು ಮುಕ್ತವಾಗಿ ಆಹ್ವಾನಿಸಲಾಗಿದೆ. ವಾಟ್ಸಪ್ ಮೂಲಕ ಎಲ್ಲಾ ಸಂಘಟನೆಗಳ ಮುಖ್ಯಸ್ಥರಿಗೂ ಆಹ್ವಾನ ನೀಡಲಾಗಿದೆ. ಮಹನೀಯರನ್ನು ಒಂದು ಸಮುದಾಯಕ್ಕೆ ಸೀಮಿತಗೊಳಿಸದೆ ಎಲ್ಲಾ ಸಮುದಾಯವನ್ನು ಒಳಗೊಂಡಂತೆ ಕಾರ್ಯಕ್ರಮ ನಡೆಸಲಾಗುತ್ತಿದೆ ಎಂದರು.

ಜಾತಿ ಗಣತಿ ವಿರೋಧ: ಶಾಮನೂರು ನಿರ್ಧಾರಕ್ಕೆ ಸ್ವಾಮೀಜಿಗಳ ಸಹಮತ



ಬೆಂಗಳೂರು: ಜಾತಿ ಗಣತಿ ವರದಿ ಕುರಿತ ಚರ್ಚೆ ಈಗ ಕಾಂಗ್ರೆಸ್ ಸರ್ಕಾರಕ್ಕೆ ಬಿಸಿತುಪ್ಪವಾಗಿ ಪರಿಣಮಿಸಿದೆ. ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ಸಿದ್ಧಪಡಿಸಿರುವ ಕಾಂತರಾಜ್ ವರದಿ, ಇದೀಗ ಸರ್ಕಾರಕ್ಕೆ ಕಬ್ಬಿಣದ ಕಡಲೆಯಾಗಿದೆ. ಒಕ್ಕಲಿಗ ಮತ್ತು ಲಿಂಗಾಯತ ಸಮುದಾಯದ ವಿರೋಧ ವ್ಯಕ್ತವಾಗುತ್ತಿದೆ. ಮತ್ತೊಮ್ಮೆ ಜಾತಿಗಣತಿ ನಡೆಸುವಂತೆ ಒಕ್ಕೊರಲ ಕೂಗು ಕೇಳಿ ಬರುತ್ತಿದೆ. ಕಾಂತರಾಜ್ ವರದಿ ಸ್ವೀಕರಿಸಲು ಸರ್ಕಾರ ಸಿದ್ಧವಾಗುತ್ತಿದ್ದಂತೆಯೇ ಈ ವರದಿ ತಿರಸ್ಕರಿಸುವಂತೆ ಒಕ್ಕಲಿಗ ಸಮುದಾಯ ಆಗ್ರಹಿಸಿದೆ. ಈ ಮಧ್ಯೆ, ಬೆಂಗಳೂರಲ್ಲಿ ಸಭೆ ನಡೆಸಿದ ವೀರಶೈವ ಮಹಾಸಭಾ ತೀವ್ರ ವಿರೋಧ ವ್ಯಕ್ತಪಡಿಸಿದೆ. ಅದ್ರಲ್ಲೂ ವೀರಶೈವ ಮಹಾಸಭಾ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ, ಈ ವರದಿಯನ್ನು ಮನೆಯಲ್ಲೇ ಕೂತು ಬರೆದಿದ್ದಾರೆ. ಜಾತಿ ಗಣತಿ ಅಂಕಿ ಅಂಶಗಳಲ್ಲಿ ಸಾಕಷ್ಟು ಲೋಪದೋಷಗಳಿವೆ ಎಂದಿದ್ದಾರೆ. ವೀರಶೈವ ಮಹಾಸಭಾ ಸಭೆಯಲ್ಲಿ ತೆಗೆದುಕೊಂಡ ನಿರ್ಧಾರ ಮತ್ತು ಶಾಮನೂರು ಹೇಳಿಕೆಗೆ ಸಮುದಾಯದ ಸ್ವಾಮೀಜಿಗಳ ಸಹಮತ ವ್ಯಕ್ತವಾಗಿದೆ. ದಾವಣಗೆರೆಯಲ್ಲಿ ಪ್ರತಿಕ್ರಿಯಿಸಿರುವ ಬಸವ ಜಯಮೃತ್ಯುಂಜಯ ಶ್ರೀ, ಕಾಂತರಾಜ ವರದಿಯಲ್ಲಿ ಲಿಂಗಾಯತರು ಕಡಿಮೆ ಇದ್ದಾರೆಂದು ತೋರಿಸಲಾಗಿದೆ ಎಂಬ ಆತಂಕ ವ್ಯಕ್ತಪಡಿಸಿದ್ದಾರೆ. ಜಾತಿಗಣತಿಗೆ ಲಿಂಗಾಯತ ಸಮುದಾಯ ವಿರೋಧ ವ್ಯಕ್ತಪಡಿಸಿದ್ದು, ಈ ತಿಂಗಳ ಅಂತ್ಯಕ್ಕೆ ಲಿಂಗಾಯತ ಶಾಸಕರ ಸಭೆ ಕರೆಯಲು ನಿರ್ಧರಿಸಿದ್ದಾರೆ. 51ಕ್ಕೂ ಶಾಸಕರು ಭಾಗಿಯಾಗುವ ಸಾಧ್ಯತೆ ಇದ್ದು, ಮುಂದಿನ ಹೋರಾಟದ ಬಗ್ಗೆ ಚರ್ಚಿಸಲಾಗುತ್ತದೆ. ಈ ಕುರಿತು ಪ್ರತಿಕ್ರಿಯಿಸಿರುವ ಸಚಿವ ರಾಮಲಿಂಗಾರೆಡ್ಡಿ, ವರದಿ ಸರ್ಕಾರಕ್ಕೆ ಸಲ್ಲಿಕೆಯಾಗಿಲ್ಲ ಎಂದಿದ್ದಾರೆ. ವರದಿ ಸ್ವೀಕರಿಸಬೇಕು, ಬಹಿರಂಗಪಡಿಸಬೇಕು ಎಂದು ಶಾಸಕ ತನ್ವೀರ್ ಸೇಠ್ ಹೇಳಿದ್ದಾರೆ. ಜಾತಿಗಣತಿ ವಿರುದ್ಧ ಎದ್ದಿರುವ ವಿರೋಧದ ಅಲೆ ಜ್ವಾಲೆಯಾಗುತ್ತಿದೆ. ತಿಂಗಳಾಂತ್ಯಕ್ಕೆ ವರದಿ ಸಲ್ಲಿಕೆಯಾಗುವ ಸಾಧ್ಯತೆ ಇದ್ದು, ಸರ್ಕಾರ ಹೇಗೆ ನಿಭಾಯಿಸುತ್ತದೆ ಎಂಬುದನ್ನು ಕಾದುನೋಡಬೇಕಿದೆ.

ಅರ್ಜಿ ಆಹ್ವಾನ

ಮೈಸೂರು: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಏಕಲವ್ಯ ಪ್ರಶಸ್ತಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕ್ರೀಡಾ ಕ್ಷೇತ್ರದಲ್ಲಿ ಅಸಾಧಾರಣ ಪ್ರತಿಭೆಯನ್ನು ತೋರಿದ ರಾಜ್ಯದ ಕ್ರೀಡಾಪಟುಗಳಿಗೆ ಏಕಲವ್ಯ ಪ್ರಶಸ್ತಿಯನ್ನು ನೀಡಲಾಗುವುದು. ನ.25ರೊಳಗೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಕಚೇರಿಗೆ ಸಲ್ಲಿಸಬಹುದು. ಮಾಹಿತಿಗೆ ಇಲಾಖೆ ಸಹಾಯಕ ನಿರ್ದೇಶಕರು ಅಥವಾ ದೂ.ಸಂ: 0821–2564179 ಸಂಪರ್ಕಿಸಬಹುದು.

ತ.ನಾಡು ಬಿಜೆಪಿ ಅಧ್ಯಕ್ಷ ಅಣ್ಣಾಮಲೈ ಹೇಳಿಕೆಗೆ ಖಂಡನೆ



ಮೈಸೂರು, ನ.11(ಜಿಎ)–ತಮಿಳುನಾಡು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಕೆ.ಅಣ್ಣಾಮಲೈ ತಮಿಳುನಾಡಿನಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ತಮಿಳುನಾಡಿನ ಅನೇಕ ದೇವಾಲಯಗಳ ಹೊರಗೆ ಸ್ಥಾಪಿಸಿರುವ ಪೆರಿಯಾರ್ ಪ್ರತಿಮೆಗಳನ್ನು ತೆಗೆದು ಹಾಕಲಾಗುವುದು ಎಂಬ ಹೇಳಿಕೆ ಖಂಡನೀಯ ಕೂಡಲೇ ಅವರು ಕ್ಷಮೆಯಾಚಿಸಬೇಕೆಂದು ಕರ್ನಾಟಕ ನಾಯಕರ ಹಿತರಕ್ಷಣಾ ವೇದಿಕೆ ಮತ್ತು ಪ್ರಗತಿಪರ ಸಂಘಟನೆಗಳ ಒಕ್ಕೂಟ ಆಗ್ರಹಿಸಿದೆ.

ಮೈಸೂರಿನ ಜಲದರ್ಶಿನಿ ಸರ್ಕಾರಿ ಅತಿಥಿ ಗೃಹದಲ್ಲಿ ಕರ್ನಾಟಕ ನಾಯಕರ ಹಿತರಕ್ಷಣಾ ವೇದಿಕೆ ಅಧ್ಯಕ್ಷ ದ್ಯಾವಪ್ಪನಾಯಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕೆ.ಅಣ್ಣಾಮಲೈ ತಮಿಳುನಾಡಿನಲ್ಲಿ ತಾವು ನಡೆಸುತ್ತಿರುವ ಎನ್ ಮಕ್ಕಳ್ ಪಾದಯಾತ್ರೆಯ ಭಾಗವಾಗಿ ತಿರುಚ್ಚಿಯ ಶ್ರೀರಂಗನಲ್ಲಿ ಅವರು ತಮಿಳುನಾಡಿನಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ತಮಿಳುನಾಡಿನ ಅನೇಕ ದೇವಾಲಯಗಳ ಹೊರಗೆ ಸ್ಥಾಪಿಸಿರುವ ಪೆರಿಯಾರ್ ಪ್ರತಿಮೆಗಳನ್ನು ತೆಗೆದುಹಾಕಲಾಗುವುದು ಹೇಳಿದ್ದಾರೆ. ಇದು ದಕ್ಷಿಣ ಭಾರತದ ಶೋಷಿತ ವರ್ಗಗಳಿಗೆ ಮಾಡಿರುವ ಅವಮಾನ ಎಂದು ಬೇಸರ ವ್ಯಕ್ತಪಡಿಸಿದರು.

ಅವರ ಹೇಳಿಕೆಯನ್ನು ಹಿಂಪಡೆದು ಈ ಕೂಡಲೇ ಬಹಿರಂಗವಾಗಿ ಕ್ಷಮೆ ಕೇಳಬೇಕು. ಅವರ ವಿರುದ್ಧ ತಮಿಳುನಾಡು ರಾಜ್ಯ ಸರ್ಕಾರ ಕ್ರಮ ವಹಿಸಬೇಕು. ಹಾಗೇ ಬಿಜೆಪಿ ಹೈಕಮಾಂಡ್ ಶಿಸ್ತು ಕ್ರಮ ಜರುಗಿಸಬೇಕು. ಇಲ್ಲವಾದರೆ, ತಮಿಳುನಾಡಿನಲ್ಲಿರುವ ವಿವಿಧ ದಲಿತ ಸಂಘಟನೆಗಳೊಂದಿಗೆ ಚರ್ಚಿಸಿ ಮುಂದಿನ ದಿನಗಳಲ್ಲಿ ಪ್ರತಿಭಟನೆ ಮಾಡುತ್ತೇವೆ. ಜೊತೆಗೆ ಕರ್ನಾಟಕಕ್ಕೆ ಅಣ್ಣಾಮಲೈ ಭೇಟಿ ನೀಡುವ ಸಂದರ್ಭದಲ್ಲಿ ಕಪ್ಪು ಬಾವುಟ ಪ್ರದರ್ಶಿಸುತ್ತೇವೆ ಎಂದದರು.

ಸುದ್ದಿಗೋಷ್ಠಿಯಲ್ಲಿ ಮಂಜುನಾಥ್, ರಘು, ಸುಭಾಷ್, ಉಲ್ಲಾಸ್, ಜಲ್ಲೇಂದರ್, ದೀಪಕ್ ಪಾಳೆಗಾರ್, ಮಹೇಶ್, ಸಿದ್ಧರಾಜು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಉದ್ಯಮಿಗಳೂ ಆದ ಹಿರಿಯ ವಕೀಲ ಎಂ.ಡಿ.ಹರೀಶ್‌ಕುಮಾರ್ ಹೆಗ್ಡೆ ಅವರ 60ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ಮಾಜಿ ಸಚಿವರೂ ಆದ ಶಾಸಕ ಎ.ಮಂಜು ಅಭಿನಂದಿಸಿದರು. 'ಲಾ ಗೈಡ್' ಕನ್ನಡ ಕಾನೂನು ಪತ್ರಿಕೆ ಗೌರವ ಸಂಪಾದಕ ಹೆಚ್.ಎನ್.ವೆಂಕಟೇಶ್, ಸಂಸದ ಪ್ರತಾಪ್ ಸಿಂಹ, ಹರೀಶ್‌ಕುಮಾರ್ ಹೆಗ್ಡೆ ಪುತ್ರ ಅಭಿಜಿತ್ ಹೆಗ್ಡೆ, ವಕೀಲರ ಸಂಘದ ಮಾಜಿ ಅಧ್ಯಕ್ಷ ಜಿ.ವಿ.ರಾಮಮೂರ್ತಿ, ಉದ್ಯಮಿ ತಿಮ್ಮಯ್ಯ, ಡಿವೈಎಸ್ಪಿಗಳಾದ ಯಶವಂತ್‌ಕುಮಾರ್, ಧರ್ಮೇಂದ್ರ ಇನ್ನಿತರರಿದ್ದರು.



ಬಿಜೆಪಿ ರಾಜ್ಯಾಧ್ಯಕ್ಷರಾಗಿ ಬಿ.ವೈ.ವಿಜಯೇಂದ್ರ ಆಯ್ಕೆಯಾದ ಹಿನ್ನೆಲೆಯಲ್ಲಿ ಮಾಜಿ ಶಾಸಕ ಎಲ್.ನಾಗೇಂದ್ರ ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರು ಶನಿವಾರ ಸಿಹಿಹಂಚಿ ಸಂಭ್ರಮಿಸಿದರು. ಬಿಜೆಪಿ ನಗರ ಯುವ ಮೋರ್ಚಾ ಅಧ್ಯಕ್ಷ ಎಂ.ಜೆ.ಕಿರಣ್‌ಗೌಡ, ಚಾಮರಾಜ ಕ್ಷೇತ್ರದ ಬಿಎಲ್‌ಎ–1 ದಿನೇಶ್‌ಗೌಡ, ಕಾರ್ಯದರ್ಶಿ ಮೃತ್ಯುಂಜಯ, ಮುಖಂಡರಾದ ಭರತ್ ಶೆಟ್ಟಿ, ಸಂಜೀವ್‌ಕುಮಾರ್, ಸ್ವಾಮಿ, ಹರೀಶ್ ಟಿವಿ, ಶ್ರೀನಿವಾಸ್ ಮತ್ತಿತರರಿದ್ದರು.

ಸ್ವಯಂ ಉದ್ಯೋಗ ಯೋಜನೆಗೆ ಅರ್ಜಿ ಆಹ್ವಾನ

ಮೈಸೂರು,ನ.11– ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ಕಾರ್ಯಾಲಯದ ವತಿಯಿಂದ ಪಂಚಾಯಿತಿ ವ್ಯಾಪ್ತಿಯ ಸಾರ್ವಜನಿಕರಿಗೆ 2023–24ನೇ ಸಾಲಿನ ಡೇ ನಲ್ಮ್ ಯೋಜನೆ ಅಡಿಯಲ್ಲಿ ಸ್ವಯಂ ಉದ್ಯೋಗ ಯೋಜನೆಗೆ ಉಪ ಘಟಕದಡಿ ಅರ್ಜಿ ಆಹ್ವಾನಿಸಲಾಗಿದ್ದು, ನ.24ರೊಳಗೆ ಸೂಕ್ತ ದಾಖಲೆಗಳೊಂದಿಗೆ ಡೇ ನಲ್ಮ್ ಶಾಖೆಗೆ ಅರ್ಜಿಯನ್ನು ಸಲ್ಲಿಸಬಹುದು ಎಂದು ರಮ್ಮನಹಳ್ಳಿ ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಣತೆ ವಿತರಿಸಿ ದೀಪಾವಳಿ ಶುಭ ಕೋರಿದ ಶಾಸಕ ಹರೀಶ್‌ಗೌಡ

ಮೈಸೂರು, ನ. 11–ಮೈಸೂರು ಯುವ ಬಳಗದ ವತಿಯಿಂದ ದೀಪಾವಳಿ ಹಬ್ಬದ ಅಂಗವಾಗಿ ಶಾಸಕ ಕೆ.ಹರೀಶ್‌ಗೌಡ ದೇವರಾಜ ಮೊಹಲ್ಲಾದ ಕೊತ್ವಾಲ್ ರಾಮಯ್ಯ ರಸ್ತೆಯ ಮನೆಮನೆಗೂ ಮಣ್ಣಿನ ಹಣತೆಯನ್ನು ವಿತರಿಸಿ, ಶುಭ ಕೋರಿದರು.

ಬಳಿಕ ಮಾತನಾಡಿದ ಅವರು, ಅಜ್ಞಾನದ ಕತ್ತಲನ್ನು ದೂರ ಮಾಡಿ ಜ್ಞಾನದ ಬೆಳಕನ್ನು ಬೀರುವುದೇ ದೀಪಾವಳಿಯ ಸತ್ಯಾರ್ಥ. ಆದ್ದರಿಂದ, ಪ್ರತಿ ಮನೆ–ಮನೆಯಲ್ಲೂ ಪ್ರತಿಯೊಬ್ಬರ ಮನ–ಮನದಲ್ಲೂ ಜ್ಞಾನವೆಂಬ ದೀಪವು ನಿರಂತರವಾಗಿ ಬೆಳಗುತ್ತಿರಲಿ ಎಂಬುದೇ ದೀಪಾವಳಿ ಹಬ್ಬದ ಉದ್ದೇಶ.



ಬೆಳಕಿನ ಹಬ್ಬಕ್ಕೆ ಮೆರುಗು ತರುವ ಪಟಾಕಿಗಳು, ಪರಿಸರ ದೃಷ್ಟಿಯಿಂದ ಒಳ್ಳೆಯದಲ್ಲ. ಅಪಾಯಕಾರಿ ಪಟಾಕಿಗಳ ಬಳಕೆ ನಿಯಂತ್ರಿಸಲು ಹಸಿರು ಪಟಾಕಿಗಳನ್ನು ಮಾತ್ರ ಬಳಸಲು ಸರ್ಕಾರಗಳೇ ಅನುಮತಿ ನೀಡಿರುವುದು ಸ್ವಾಗತಾರ್ಹ. ಕಡಿಮೆ ಮಾಲಿನ್ಯ ಉಂಟು ಮಾಡುವುದರಿಂದ ಹಸಿರು ಪಟಾಕಿ ಸಿಡಿಸುವುದು ತಪ್ಪೇನಲ್ಲ. ಹಬ್ಬ ಎಂದು ಭಾರಿ ಪ್ರಮಾಣದ ಪಟಾಕಿ ಸಿಡಿಸುವ ಮಿತಿಯನ್ನು ಕಡಿಮೆ ಮಾಡಿಕೊಂಡರೆ, ಭವಿಷ್ಯದ ದೃಷ್ಟಿಯಿಂದ ಎಲ್ಲರಿಗೂ ಒಳ್ಳೆಯದು. ಮಕ್ಕಳು ಪಟಾಕಿ ಸಿಡಿಸುವಾಗ ಮನೆಯವರು ಎಚ್ಚರ ವಹಿಸಿ ಎಂದು ತಿಳಿಸಿದರು.

ಮುಡಾ ಮಾಜಿ ಸದಸ್ಯ ನವೀನ್ ಕುಮಾರ್, ಕರ್ನಾಟಕ ಹಿತರಕ್ಷಣಾ ವೇದಿಕೆ ಅಧ್ಯಕ್ಷ ವಿನಯ್‌ಕುಮಾರ್, ಮುಖಂಡರಾದ ರಾವ್‌ರಾಜ್, ರವಿಚಂದ್ರ, ನಂಜುಂಡಸ್ವಾಮಿ, ಹರೀಶ್‌ಗೌಡ, ನಿತಿನ್, ಮಂಜುನಾಥ್, ಮಂಜು, ಬಸವಣ್ಣ, ರಾಣಿ, ಕಾಂತಿಲಾಲ್ ಜೈನ್, ಲೋಕೇಶ್ ಹಾಗೂ ಇನ್ನಿತರರು ಹಾಜರಿದ್ದರು.

ಆಯುರ್ವೇದ ಚಿಕಿತ್ಸಾ ಪದ್ಧತಿಯಿಂದ ಸ್ವಾಸ್ಥ್ಯ ಕಾಪಾಡಬಹುದು

ರಾಮಕೃಷ್ಣ ಆಶ್ರಮದ ಶ್ರೀ ಮಹಾದಾನಂದ ಸ್ವಾಮೀಜಿ ಅಭಿಮತ



ಮೈಸೂರು,ನ.11(ಆರ್‌ಕೆ)–ಪುರಾತನ ಆಯುರ್ವೇದ ಚಿಕಿತ್ಸಾ ಪದ್ಧತಿಯಿಂದ ಜನರ ಸ್ವಾಸ್ಥ್ಯ ಕಾಪಾಡಬಹುದು ಎಂದು ಮೈಸೂರಿನ ರಾಮಕೃಷ್ಣ ಆಶ್ರಮದ ಶ್ರೀ ಮಹಾದಾನಂದ ಸ್ವಾಮೀಜಿ ಅಭಿಪ್ರಾಯಪಟ್ಟಿದ್ದಾರೆ.

ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ ಮತ್ತು ಜಿಲ್ಲಾ ಪತ್ರಕರ್ತರ ಸಂಘದ ಆಶ್ರಯದಲ್ಲಿ ಪತ್ರಕರ್ತರ ಭವನದಲ್ಲಿ 8ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಪ್ರಯುಕ್ತ ಪತ್ರಕರ್ತರು ಹಾಗೂ ಅವರ ಕುಟುಂಬದವರಿಗಾಗಿ ಏರ್ಪಡಿಸಿದ್ದ ಉಚಿತ ಆಯುರ್ವೇದ ಆರೋಗ್ಯ ತಪಾಸಣಾ ಶಿಬಿರದ ದಿವ್ಯ ಸಾನ್ನಿಧ್ಯ ವಹಿಸಿ ಅವರು ಮಾತನಾಡುತ್ತಿದ್ದರು. ಆಯುರ್ವೇದ ಎಂಬುದು ಯಾವುದೇ ಅಡ್ಡ ಪರಿಣಾಮಗಳಿಲ್ಲದೇ ರೋಗ ಗುಣಪಡಿಸುವ ಉತ್ತಮ ಚಿಕಿತ್ಸಾ ಪದ್ಧತಿಯಾಗಿದ್ದು, ನಮ್ಮ ನಿಸರ್ಗದಲ್ಲೇ ಸಿಗುವ ವಸ್ತುಗಳಿಂದ ತಯಾರಾದ ಔಷಧಗಳ ಬಳಕೆಯು ದೀರ್ಘ ಕಾಲ ಆರೋಗ್ಯವಂತರಾಗಿರುವಂತೆ ಮಾಡುತ್ತದೆ ಎಂದು ತಿಳಿಸಿದರು.

ವೈದ್ಯ ವೃತ್ತಿಯು ವಾಣಿಜ್ಯೀಕರಣವಾಗಬಾರದು. ಸೌಲಭ್ಯ ಒದಗಿಸಲು ಅಗತ್ಯವಿರುವ ವೆಚ್ಚಕ್ಕೆ ಶುಲ್ಕ ಪಡೆದು ವೈದ್ಯಕೀಯ ಸೇವೆ ಒದಗಿಸಿದಲ್ಲಿ ರೋಗಿಗಳು ಅತ್ಯಂತ ಸಂತೋಷಪಡುತ್ತಾರೆ. ಸೇವೆ ನೀಡಿದ ವೈದ್ಯರಿಗೂ ತೃಪ್ತಿ ದೊರೆಯಲಿದೆ ಎಂದ ಸ್ವಾಮೀಜಿಗಳು, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರವು ಸಮಾಜದ ಸ್ವಾಸ್ಥ್ಯ ಕಾಪಾಡುತ್ತಿರುವ ಪತ್ರಕರ್ತರಿಗೆ ಆರೋಗ್ಯ ತಪಾಸಣೆ ಶಿಬಿರ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಶಾಸಕ ಟಿ.ಎಸ್.ಶ್ರೀವತ್ಸ ಅಧ್ಯಕ್ಷತೆ ವಹಿಸಿದ್ದ ಶಿಬಿರವನ್ನು ಮೇಯರ್ ಶಿವಕುಮಾರ್ ಉದ್ಘಾಟಿಸಿದರು. ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕ ಡಾ.ಲಕ್ಷ್ಮೀನಾರಾಯಣ ಶೆಣೈ, ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾರಾಯಣ ಹೆಗ್ಡೆ, ರವೀಂದ್ರ ಜೋಷಿ ಪಾಲ್ಗೊಂಡಿದ್ದರು.

ರಕ್ತದೊತ್ತಡ, ಇಸಿಜಿ, ಎಕೋ ಕಾರ್ಡಿಯಾಲಜಿ, ಶುಗರ್, ದಂತ, ನೇತ್ರ ತಪಾಸಣೆ ಸೇರಿದಂತೆ ನಾನಾ ಬಗೆಯ ತಪಾಸಣೆ ನಡೆಸಿ ಸೂಕ್ತ ಸಲಹೆ, ಚಿಕಿತ್ಸೆ ಹಾಗೂ ಔಷಧಿಯನ್ನು ವಿತರಿಸಲಾಯಿತು. ಜೆಎಸ್‌ಎಸ್, ಕಾವೇರಿ ಆಸ್ಪತ್ರೆ, ನಾರಾಯಣ ಹೃದಯಾಲಯ ಆಸ್ಪತ್ರೆ ವೈದ್ಯರು 150ಕ್ಕೂ ಹೆಚ್ಚು ಮಂದಿಗೆ ಆರೋಗ್ಯ ತಪಾಸಣೆ ಮಾಡಿದರು.

ಕಾವೇರಿ ವಿಚಾರದಲ್ಲಿ ಕಾನೂನಾತ್ಮಕ ಪರಿಹಾರವೇ ಅಂತಿಮ

ನಿವೃತ್ತ ಐಜಿಪಿ ಚಂದ್ರಶೇಖರ್ ಸಲಹೆ



ಮಂಡ್ಯ, ನ.11– ಕಾವೇರಿ ನದಿ ನೀರು ಹಂಚಿಕೆ ವಿಚಾರದಲ್ಲಿ ಕಾನೂನಾತ್ಮಕ ಪರಿಹಾರ ಅಂತಿಮವಾಗಿರುವುದರಿಂದ ಕಾನೂನು ಪರಿಹಾರ ಪಡೆಯಲು ಮುಂದಾಗಬೇಕು ಎಂದು ಕಾವೇರಿ ವಿವಾದ ಚಾರಿತ್ರಿಕ ಹಿನ್ನೋಟ ಕೃತಿ ಕರ್ತೃ ಹಾಗೂ ನಿವೃತ್ತ ಐಜಿಪಿ ಸಿ.ಚಂದ್ರಶೇಖರ್ ಸಲಹೆ ನೀಡಿದರು.

ನಗರದ ಸರ್‌ಎಂವಿ ಪ್ರತಿಮೆ ಎದುರು ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ನಿರಂತರ ಧರಣಿಯಲ್ಲಿ ಮಾತನಾಡಿದ ಅವರು, ದೇಶದಲ್ಲಿ ಒಕ್ಕೂಟ ಸರ್ಕಾರ ಅಸ್ತಿತ್ವದಲ್ಲಿದೆ. ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತು ಸಂವಿಧಾನದತ್ತ ಕಾನೂನು ಜಾರಿಯಲ್ಲಿವೆ. ಹಾಗಾಗಿ ಕಾವೇರಿ ಸಮಸ್ಯೆಗೆ ಕಾನೂನಾತ್ಮಕ ಪರಿಹಾರ ಪಡೆಯುವುದು ಒಳ್ಳೆಯ ಮಾರ್ಗ ಎಂದರು.

ಕಾವೇರಿ ನದಿ ನೀರು ಹಂಚಿಕೆ ಸಮಸ್ಯೆಗೆ ಭಾವುಕತೆ, ಆವೇಶ, ಕೋಪ, ಬೇಸರ ಪರಿಹಾರವಾಗದು. ಕಾನೂನು ಪರಿಹಾರವೇ ಅಂತಿಮ ಎಂದ ಅವರು, ನದಿ ಪ್ರಕೃತಿದತ್ತ ವರ ಎಂಬುದನ್ನರಿತು ಎಲ್ಲರಿಗೂ ಒಳ್ಳೆಯದಾಗಲಿ ಎಂಬ ಸದುದ್ದೇಶದಿಂದ ನ್ಯಾಯಾಲಯದ ಹೊರಗೆ ಮಾತುಕತೆ ಮೂಲಕ ಬಗೆಹರಿಸಲು ಸಾಧ್ಯವಿದೆ ಎಂದರು.

ಸುಪ್ರೀಂಕೋರ್ಟ್, ಕಾವೇರಿ ನದಿ ನೀರು ನಿಯಂತ್ರಣ ಸಮಿತಿ, ಪ್ರಾಧಿಕಾರದ ವಿರುದ್ಧ ಮಾತನಾಡಿ ಯಾವುದೇ ಪ್ರಯೋಜನ ಇಲ್ಲ. ಇದಕ್ಕೆ ಬದಲಾಗಿ ವಸ್ತು ಸ್ಥಿತಿ ಆಧಾರಿತ ಅಂಕಿ ಅಂಶ ಮುಂದಿಟ್ಟು ಪರಿಹಾರ ಪಡೆಯಲು ಮುಂದಾಗಬೇಕು. ಹಾಗಾಗಿ ಆಳುವ ಸರ್ಕಾರ ಸಂಕಷ್ಟ ಪರಿಸ್ಥಿತಿ ಬಗ್ಗೆ ಸಮರ್ಪಕ ಮಾಹಿತಿಯನ್ನು ಪಾರದರ್ಶಕವಾಗಿ ನೀಡಬೇಕು. ಆ ವಿಚಾರ ಜನತೆಗೆ ಗೊತ್ತಿರಬೇಕು ಎಂಬ ನಿಟ್ಟಿನಲ್ಲಿ ಒತ್ತಡ ಇರಲಿ ಎಂದು ಹೇಳಿದರು.

ಬ್ರಿಟಿಷರ ಆಳ್ವಿಕೆಯಲ್ಲಿ ಮದ್ರಾಸ್ ರೆಸಿಡೆನ್ಸಿ ಮತ್ತು ಮೈಸೂರು ಸಂಸ್ಥಾನದ ನಡುವೆ ಆದ ಒಪ್ಪಂದದ ಬಗ್ಗೆ ಕರ್ನಾಟಕ ಸರ್ಕಾರ 1947ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ದೊರೆತಾಗ, ಸಂವಿಧಾನ ಜಾರಿಗೊಂಡಾಗ, ಅಷ್ಟೇ ಅಲ್ಲದೆ ರಾಜ್ಯಗಳ ಪುನರ್ ವಿಂಗಡನೆ ಸಮಯದಲ್ಲಿ ಪ್ರಸ್ತಾಪಿಸಿದ್ದರೆ ನ್ಯಾಯ ಪಡೆಯಲು ಸಾಧ್ಯವಿತ್ತು. ಸುಪ್ರೀಂ ಕೋರ್ಟ್‌ನಲ್ಲಿ ಇರುವುದರಿಂದ ಒಕ್ಕೂಟ ಸರ್ಕಾರದ ಪ್ರಧಾನಮಂತ್ರಿ ಮಧ್ಯ ಪ್ರವೇಶಿಸಲು ಸಾಧ್ಯವಿಲ್ಲ. ಇದರಲ್ಲಿ ನಮ್ಮ ಪಾತ್ರ ಇಲ್ಲ ಎಂದು ಹೇಳಿರುವ ಕೇಂದ್ರ ಸರ್ಕಾರ ಕಾನೂನು ಚೌಕಟ್ಟಿನಲ್ಲಿ ಪರಿಹಾರ ಪಡೆಯಲು ಸೂಚಿಸಿದೆ ಎಂದರು.

ವಿದ್ಯಾರ್ಥಿಗಳು, ನಿವೃತ್ತ ಇಂಜಿನಿಯರ್ ಬೆಂಬಲ: ಧರಣಿಯಲ್ಲಿ ಸರ್ಕಾರಿ ಮಹಾವಿದ್ಯಾಲಯದ ವಿದ್ಯಾರ್ಥಿಗಳು, ಪಿಇಎಸ್ ಇಂಜಿನಿಯರಿಂಗ್ ಕಾಲೇಜಿನ ಹಳೆಯ ಸಿವಿಲ್ ಇಂಜಿನಿಯರಿಂಗ್ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ನಿವೃತ್ತ ಇಂಜಿನಿಯರ್‌ಗಳು ಭಾಗಿಯಾಗಿ ಕಾವೇರಿ ಹೋರಾಟ ಬೆಂಬಲಿಸಿದರು.

ಸರ್ಕಾರಿ ಮಹಾವಿದ್ಯಾಲಯದ ಪದವಿ ವಿದ್ಯಾರ್ಥಿಗಳು ಕಾಲೇಜು ಆವರಣದಿಂದ ಮೆರವಣಿಗೆ ಹೊರಟು ಧರಣಿ ಸ್ಥಳಕ್ಕೆ ಆಗಮಿಸಿ ನಿರಂತರ ಧರಣಿಯಲ್ಲಿ ಭಾಗಿಯಾದರು.

ಈ ವೇಳೆ ನಿವೃತ್ತ ಮುಖ್ಯ ಕಾರ್ಯಪಾಲಕ ವಿಜಯಕುಮಾರ್, ದೇವರಾಜು, ಕೆಂಪೇಗೌಡ, ಎಂ.ಬಿ. ರಾಜು, ಎಂ.ಕೆ.ನಂಜಯ್ಯ, ಚಂದ್ರಶೇಖರ್, ಸತ್ಯನಾರಾಯಣ, ಮಹೇಂದ್ರ, ಪಾಂಡು, ಪ್ರಕಾಶ್, ಪುಟ್ಟರಾಜು, ಸುರೇಶ್ ಬಾಬು, ಸಮಿತಿಯ ಸುನಂದಾ, ಜಿ.ಬಿ.ಶಿವಕುಮಾರ್ ಕೆ.ಬೋರಯ್ಯ, ಬೋರೇಗೌಡ, ರೈತ ಸಂಘದ ಚಂದ್ರಶೇಖರ್, ಮುದ್ದೇಗೌಡ, ಕೃಷ್ಣಪ್ರಕಾಶ್, ಕನ್ನಡಸೇನೆ ಮಂಜುನಾಥ್, ನಾರಾಯಣ, ಅಂಬುಜಮ್ಮ ಇದ್ದರು.

ಕೃಷಿ ಭಾಗ್ಯ, ಹಾರ್ವೆಸ್ಟರ್ ಹಬ್‌ಗೆ ಕ್ಯಾಬಿನೆಟ್ ಅನುಮೋದನೆ



ನಾಗಮಂಗಲ, ನ.11– ರಾಜ್ಯದಲ್ಲಿ 100 ಹೈಟೆಕ್ ಹಾರ್ವೆಸ್ಟರ್ ಹಬ್ ಸ್ಥಾಪನೆ ಹಾಗೂ 200 ಕೋಟಿ ರೂ. ವೆಚ್ಚದಲ್ಲಿ ಕೃಷಿ ಭಾಗ್ಯ ಯೋಜನೆಗೆ ಸಚಿವ ಸಂಪುಟ ಅನುಮೋದನೆ ನೀಡಿದ್ದು, ಶೀಘ್ರ ಅನುಷ್ಠಾನಗೊಳಿಸಲಾಗುವುದು ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ತಾಲೂಕಿನ ದೇವರ ಮಲ್ಲನಾಯಕನಹಳ್ಳಿಯಲ್ಲಿ ನಡೆದ ಜಲಾನಯನ ಮೇಳ ಹಾಗೂ ಫಲಾನುಭವಿಗಳಿಗೆ ಬೃಹತ್ ಪ್ರಮಾಣದಲ್ಲಿ ಸವಲತ್ತು ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದ 223 ತಾಲೂಕಿನಲ್ಲಿ ಬರ ಇದೆ. 17,000 ಕೋಟಿ ರೂ. ಪರಿಹಾರ ಕೋರಿದ್ದೇವೆ. ಕೇಂದ್ರದಿಂದ ಈ ವರೆಗೂ ಯಾವುದೇ ನೆರವು, ಪೂರಕ ಸ್ಪಂದನೆ ದೊರೆತಿಲ್ಲ ಎಂದರು.

ರಾಜ್ಯ ಸರ್ಕಾರ ಜನಪರ ಯೋಜನೆ ಅನುಷ್ಠಾನ ಮಾಡುತ್ತಿದೆ. ಅಧಿಕಾರಕ್ಕೆ ಬಂದ ಕೂಡಲೇ ನಾಲ್ಕು ಗ್ಯಾರಂಟಿ ಯೋಜನೆ ಜಾರಿಗೆ ತಂದು ನುಡಿದಂತೆ ನಡೆದಿದ್ದೇವೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳೆ ಪ್ರಭುಗಳು. ಚುನಾವಣೆಗಳಲ್ಲಿ ಯೋಗ್ಯರನ್ನು ಆಯ್ಕೆ ಮಾಡಬೇಕು. ಆ ಅಧಿಕಾರ ಜನರ ಕೈಯಲ್ಲಿ ಇದೆ. ಅದನ್ನು ಸರಿಯಾಗಿ ಬಳಸಿ ಎಂದರು.

ದೇವಲಾಪುರ ಹಾಗೂ ದೇವರ ಮಲ್ಲನಾಯಕನಹಳ್ಳಿ ಗ್ರಾಪಂ ವ್ಯಾಪ್ತಿಯ 17 ಗ್ರಾಮಗಳ 1689 ರೈತರಿಗೆ ಶೇ.80ರ ಸಬ್ಸಿಡಿಯೊಂದಿಗೆ 2 ಕೋಟಿಗೂ ಅಧಿಕ ಸಹಾಯಧನದಲ್ಲಿ ಜೀವನೋಪಾಯ ಸಾಧನ ಸಲಕರಣೆ ವಿತರಿಸಲಾಗುತ್ತಿದೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಈ ಯೋಜನೆ ಜಾರಿಯಾಗಲಿವೆ ಎಂದು ತಿಳಿಸಿದರು.

ಹೇಮಾವತಿ ಜಲಾಶಯದಿಂದ ಮಂಡ್ಯ ಜಿಲ್ಲೆಗೆ ನೀರು ಹರಿಸುವ ನಾಲೆಗಳ ದುರಸ್ತಿಗೆ ಕ್ರಮ ವಹಿಸಲಾಗುತ್ತಿದೆ. ರಾಜ್ಯದಲ್ಲಿ 13,000 ಶಿಕ್ಷಕರ ನೇಮಕಾತಿ ಮಾಡಲಾಗುವುದು. ವಿವಿಧ ಇಲಾಖೆಗಳ ಖಾಲಿ ಹುದ್ದೆ ಭರ್ತಿಗೂ ಕ್ರಮವಹಿಸಲಾಗುವುದು ಎಂದರು.

ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ, ವಿವಿಧ ಮೇಳ ಆಯೋಜಿಸಿ ರೈತರಿಗೆ ಸರ್ಕಾರದ ವಿವಿಧ ಸವಲತ್ತುಗಳನ್ನು ಒದಗಿಸುತ್ತಿರುವುದು ಸ್ವಾಗತಾರ್ಹ. ಇಂಥ ಮೇಳಗಳು ಹೆಚ್ಚು ನಡೆಯಬೇಕು ಎಂದರು.

ಜಿಲ್ಲಾಧಿಕಾರಿ ಡಾ.ಕುಮಾರ್ ಮಾತನಾಡಿ, ಮಂಡ್ಯ ಕೃಷಿ ಪ್ರಧಾನ ಜಿಲ್ಲೆಯಾಗಿದ್ದು, ಸಮಾಜದಲ್ಲಿ ರೈತರಿಗೆ ವಿಶೇಷ ಗೌರವವಿದೆ. ರೈತರಿಗೆ ಬೇಕಿರುವುದು ಉತ್ತೇಜನ ಹಾಗೂ ಅವಕಾಶ ಅನುಕಂಪವಲ್ಲ. ರೈತರು ಸರ್ಕಾರದಿಂದ ನೀಡಲಾಗುವ ವಿವಿಧ ಯೋಜನೆಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಜಿಲ್ಲೆಯ 7 ತಾಲೂಕುಗಳು ಬರ ಪೀಡಿತವಾಗಿದ್ದು, ಸರ್ಕಾರ ಮುಂದಿನ ದಿನಗಳಲ್ಲಿ ಬರ ಪರಿಹಾರ ನೀಡಲಿದೆ. ಇದಕ್ಕೆ ರೈತರು ಫ್ರೂಟ್ಸ್ ಐಡಿಯಲ್ಲಿ ಹೆಸರು ನೋಂದಾಯಿಸಿಕೊಂಡು ತಮ್ಮ ಜಮೀನಿಗೆ ಸಂಬಂಧಿಸಿದ ವಿವರ ಅಪ್ಲೋಡ್ ಮಾಡುವುದು ಕಡ್ಡಾಯ. ರೈತರು ತಪ್ಪದೇ ಜಮೀನಿನ ವಿವರ ಅಪ್ಲೋಡ್ ಮಾಡಿ. ರೈತರು ಬೆಳೆದ ಭತ್ತ ಮತ್ತು ರಾಗಿಯನ್ನು ಬೆಂಬಲ ಬೆಲೆ ಯೋಜನೆಯಡಿ ಖರೀದಿಸಲು ನೋಂದಣಿ ಕೇಂದ್ರ ಖರೀದಿ ಕೇಂದ್ರ ತೆರೆಯಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ರೈತರ ಜೀವನೋಪಾಯ ಚಟುವಟಿಕೆ, ಉತ್ಪದನಾ ಪದ್ಧತಿ ಹಾಗೂ ಖುಷ್ಕಿ ತೋಟಗಾರಿಕೆ ಘಟಕದಡಿ ಪಲ್ವರೈಸರ್ (ಹಿಟ್ಟಿನ ಗಿರಣಿ), ಎಣ್ಣೆ ಗಾಣ, ಹಪ್ಪಳ ಮಾಡುವ ಯಂತ್ರ, ನಾಟಿ ಕೋಳಿ, ಪೈಬರ್ ದೋಟಿ, ಲ್ಯಾಡರ್, ಹಾಗೂ ವಿವಿಧ ಜಾತಿಯ ಹಣ್ಣಿನ ಗಿಡಗಳನ್ನು ದೇವಲಾಪುರ ಹೋಬಳಿಯ ವ್ಯಾಪ್ತಿಯ ರೈತರಿಗೆ ನೀಡಲಾಯಿತು. ಕಾರ್ಯಕ್ರಮದಲ್ಲಿ ಎಸ್ಪಿ ಎನ್.ಯತೀಶ್ ಜಲಾನಯನ ಇಲಾಖೆ ಆಯುಕ್ತ ಗಿರೀಶ್, ನಿರ್ದೇಶಕ ಶ್ರೀನಿವಾಸ್ ಮತ್ತಿತರರಿದ್ದರು.

ಕೆ.ಆರ್.ಪೇಟೆಯಲ್ಲಿ ಜೆಡಿಎಸ್‌ನಿಂದ ಬರ ಅಧ್ಯಯನ



ಕೆ.ಆರ್.ಪೇಟೆ: ತಾಲೂಕಿನ ಸಂತೇಬಾಚಹಳ್ಳಿ ಹೋಬಳಿಯ ವಿವಿಧ ಗ್ರಾಮಗಳಿಗೆ ಜೆಡಿಎಸ್ ಬರ ಪರಿಸ್ಥಿತಿ ಅಧ್ಯಯನ ತಂಡದ ಸದಸ್ಯರು ಭೇಟಿ ನೀಡಿ ಶಾಸಕ ಹೆಚ್.ಟಿ.ಮಂಜು ನೇತೃತ್ವದಲ್ಲಿ ಶನಿವಾರ ಅಧ್ಯಯನ ನಡೆಸಿದರು.

ತಾಲೂಕಿನ ಸೋಮೇನಹಳ್ಳಿ, ನಾಯಕನಹಳ್ಳಿ, ಲೋಕನಹಳ್ಳಿ, ಅಘಲಯ, ಮಾವಿನಕಟ್ಟೆಕೊಪ್ಪಲು ಮತ್ತಿತರ ಗ್ರಾಮಗಳಿಗೆ ಭೇಟಿ ನೀಡಿದ ಕಳೆದ ಜೆಡಿಎಸ್ ಬರ ಅಧ್ಯಯನ ತಂಡದ ಮಾಜಿ ಸಚಿವರಾದ ಡಿ.ಸಿ.ತಮ್ಮಣ್ಣ, ಸಿ.ಎಸ್.ಪುಟ್ಟರಾಜು, ಶಾಸಕ ಹೆಚ್.ಟಿ.ಮಂಜು, ಮಾಜಿ ಶಾಸಕರಾದ ಡಾ.ಕೆ.ಅನ್ನದಾನಿ, ಸುರೇಶ್‌ಗೌಡ, ಕೆ.ಟಿ.ಶ್ರೀಕಂಠೇಗೌಡ, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಡಿ.ರಮೇಶ್, ತಾಲೂಕು ಜೆಡಿಎಸ್ ಅಧ್ಯಕ್ಷ ಎ.ಎನ್.ಜಾನಕೀರಾಂ ಸೇರಿದಂತೆ ಇತರರು ರೈತರ ಸಮಸ್ಯೆಗಳನ್ನು ಆಲಿಸಿದರು.

ಎರಡೂವರೆ ವರ್ಷದ ಹಿಂದೆ ಅತಿವೃಷ್ಟಿಯಿಂದ ಒಡೆದು ಹೋಗಿದ್ದ ಕೆರೆಗಳನ್ನು ವೀಕ್ಷಿಸಿದರು. ಅಲ್ಲದೇ ಕೆರೆ ಒಡೆದು ಹೋಗಿರುವ ಏರಿ, ಬರಿದಾಗಿರುವ ಕೆರೆಯಂಗಳ, ಅಂತರ್ಜಲ ಕುಸಿದು ಹೋಗಿರುವ ಕೊಳವೆ ಬಾವಿಗಳು, ನೀರಿಲ್ಲದೆ ಒಣಗಿರುವ ತೆಂಗಿನ ಮರಗಳು, ರಾಗಿ ಬೆಳೆ, ಜೋಳದ ಬೆಳೆ ಕಂಡು ಮರುಗಿದರು. ರೈತರ ಅಹವಾಲು ಸ್ವೀಕರಿಸಿ ಮಾತನಾಡಿದ ಮಾಜಿ ಸಚಿವ ಡಿ.ಸಿ.ತಮ್ಮಣ್ಣ 2 ವರ್ಷಗಳ ಹಿಂದೆ ಭಾರಿ ಮಳೆಯಿಂದ ಕೆರೆ ಏರಿ ಹೊಡೆದಿದ್ದರೂ ಈ ಹಿಂದಿನ ಶಾಸಕ ನಾರಾಯಣಗೌಡ ದುರಸ್ತಿ ಮಾಡಿಸಿಲ್ಲ. ಪರಿಣಾಮ ಕೆರೆಕಟ್ಟೆ ತುಂಬದೇ ಕೃಷಿ ಕೊಳವೆ ಬಾವಿಗಳಲ್ಲಿ ಅಂತರ್ಜಲ ಕುಸಿದಿದೆ. ಅಲ್ಲದೇ ಜನಜಾನುವಾರುಗಳ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಿದೆ. ಹೀಗಾಗಿ ಸರ್ಕಾರ ಕೆರೆ ಏರಿಗಳ ದುರಸ್ತಿಗೆ ಅನುದಾನ ನೀಡಬೇಕು ಎಂದರು.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿ, ತಾಲೂಕಿನಲ್ಲಿ ಬರ ಪರಿಸ್ಥಿತಿ ನಿರ್ವಹಣೆ ಮಾಡುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ. ಸರ್ಕಾರದ ಬಿಟ್ಟಿ ಯೋಜನೆಗಳಿಗೆ ಮರುಳಾಗಿ ಮತ ನೀಡಿದ ರಾಜ್ಯದ ಜನರು ಕೇವಲ 6 ತಿಂಗಳಿಗೆ ಸರ್ಕಾರದ ದುರಾಡಳಿತದಿಂದ ರೋಸಿಹೋಗಿದ್ದಾರೆ. ಶ್ರೀಸಾಮಾನ್ಯರ ಸಂಕಷ್ಟಗಳಿಗೆ ಅಧಿಕಾರಿಗಳು ಸ್ಪಂದಿಸುತ್ತಿಲ್ಲ. ಹೀಗಾಗಿ ಜನರಿಗೆ ಕಾಂಗ್ರೆಸ್ ಸರ್ಕಾರದ ಜನವಿರೋಧಿ ನಡೆ ತಿಳಿಸುವ ಮೂಲಕ ಜನಾಂದೋಲನ ರೂಪಿಸುತ್ತೇವೆ ಎಂದರು.

ಶಾಸಕ ಹೆಚ್.ಟಿ.ಮಂಜು ಮಾತನಾಡಿ, ತಾಲೂಕಿನ ಕೆರೆ ಕಟ್ಟೆಗಳ ದುರಸ್ತಿಗೆ ಅನುದಾನ ನೀಡಬೇಕು. ಮೇವು ಬ್ಯಾಂಕ್ ತೆರೆಯಬೇಕು. ರೈತರ ಕೃಷಿ ಸಾಲದ ಮೇಲಿನ ಎಲ್ಲಾ ಬಡ್ಡಿ ಮನ್ನಾ ಮಾಡಬೇಕು. ಜಾನುವಾರು ರಕ್ಷಣೆಗೆ ಗೋಶಾಲೆ ಆರಂಭಿಸಬೇಕು. ಇಲ್ಲದಿದ್ದರೆ ರೈತರು ಬದುಕು ನಾಶವಾಗುತ್ತದೆ. ಇದಕ್ಕೆ ಸರ್ಕಾರವೇ ಹೊಣೆ ಎಂದರು.

ಮಾಜಿ ಶಾಸಕ ಡಾ.ಕೆ.ಅನ್ನದಾನಿ, ಕೆ.ಸುರೇಶ್‌ಗೌಡ ಮಾತನಾಡಿದರು. ಈ ವೇಳೆ ಮನ್‌ಮುಲ್ ಮಾಜಿ ಅಧ್ಯಕ್ಷ ಹರೀಶ್, ಮನ್‌ಮುಲ್ ನಿರ್ದೇಶಕ ಡಾಲು ರವಿ, ರಾಜ್ಯ ಜೆಡಿಎಸ್ ಯುವ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ದಿನೇಶ್, ತಾಲೂಕು ಆರೋಗ್ಯ ರಕ್ಷಾ ಸಮಿತಿ ಸದಸ್ಯ ರವಿಕುಮಾರ್, ಬಲದೇವ್, ಕಾಯಿ ಮಂಜೇಗೌಡ, ದಿನೇಶ್, ಬಿ.ವಿ.ನಾಗೇಶ್ ಭಾಗವಹಿಸಿದ್ದರು.

ಮಂಡ್ಯ ಪತ್ರಕರ್ತರ ಸಂಘಕ್ಕೆ ಬಿ.ಪಿ.ಪ್ರಕಾಶ್ ಅಧ್ಯಕ್ಷ



ಮಂಡ್ಯ, ನ.11– ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾಗಿ ಬಿ.ಪಿ. ಪ್ರಕಾಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನಗರದ ಕಾರ್ಯನಿರತ ಪತ್ರಕರ್ತರ ಸಂಘದ ಆವರಣದಲ್ಲಿ ನಡೆದ ಕಾರ್ಯಕಾರಿ ಮಂಡಳಿ ಸಭೆಯಲ್ಲಿ ಅಧ್ಯಕ್ಷ ಕೆ.ಸಿ. ಮಂಜುನಾಥ್ ಅವರು ಒಡಂಬಡಿಕೆಯಂತೆ ರಾಜೀನಾಮೆ ನೀಡಿದ ಹಿನ್ನೆಲೆಯಲ್ಲಿ ಪ್ರಕಾಶ್ ಅವರನ್ನು ಅವಿರೋಧವಾಗಿ ಅಧ್ಯಕ್ಷರಾಗಿ ಆಯ್ಕೆ ಮಾಡಲಾಯಿತು.

ಉಳಿದಂತೆ ರಾಷ್ಟ್ರೀಯ ಮಂಡಳಿ ಸದಸ್ಯರಾಗಿ ಜೆ.ಎಂ.ಬಾಲಕೃಷ್ಣ, ಆಡಳಿತ ಮಂಡಳಿ ಕಾರ್ಯಕಾರಿ ನಾಮನಿರ್ದೇಶಕರಾಗಿ 'ಮೈಸೂರು ಮಿತ್ರ'ನ ಚಿನಕುರಳಿ ಹೋಬಳಿ ವರದಿಗಾರ ಚಿನುಕುರಳಿ ಲೋಕೇಶ್, ನಾಗಮಂಗಲ ಬಾಲಕೃಷ್ಣ, ಸಿ.ಮಧು, ಅಶ್ವತ್ಥ್, ಶಿವಪ್ರಕಾಶ್, ಉಮೇಶ್, ವೆಂಕಟರಾಮು ಆಯ್ಕೆಯಾದರು.

ಈ ಸಂದರ್ಭ ನಿರ್ಗಮಿತ ಅಧ್ಯಕ್ಷ ಕೆ.ಸಿ. ಮಂಜುನಾಥ್, ಕೆಂಯುಡಬ್ಲ್ಯುಜೆ ಕಾರ್ಯದರ್ಶಿಗಳಾದ ಮತ್ತೀಕೆರೆ ಜಯರಾಂ, ಸೋಮಶೇಖರ ಕೆರಗೋಡು, ಕೆ.ಎನ್.ನವೀನ್‌ಕುಮಾರ್, ಆಡಳಿತ ಮಂಡಳಿಯ ನಂಜುಂಡಸ್ವಾಮಿ, ನಂಜೇಗೌಡ, ರವಿಸಾವಂದಿಪುರ, ಮಂಜುಳಾ, ಜಯರಾಂ, ಮೋಹನ್‌ರಾಜ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ವಿಶ್ವ ದಾಖಲೆ ಬರೆದ ಅಯೋಧ್ಯೆ ದೀಪೋತ್ಸವ: ಬೆಳಗಿದವು 22.23 ಲಕ್ಷ ದೀಪಗಳು



ಅಯೋಧ್ಯೆ, ನ.11– ಉತ್ತರ ಪ್ರದೇಶದ ಅಯೋಧ್ಯೆಯು ಶನಿವಾರದಂದು ಭವ್ಯವಾದ ದೀಪೋತ್ಸವ ಆಚರಣೆಗೆ ಸಾಕ್ಷಿಯಾಯಿತು. ಇಲ್ಲಿನ ಘಾಟ್‌ಗಳಲ್ಲಿ ಲಕ್ಷಗಟ್ಟಲೆ ಮಣ್ಣಿನ ದೀಪ ಬೆಳಗಿಸಲಾಗಿದ್ದು ಸರಯು ನದಿಯ ದಂಡೆಯ ಮೇಲಿರುವ ದೇವಾಲಯ ನಗರವು ಇದೀಗ ವಿಶ್ವ ದಾಖಲೆಯನ್ನು ಮುರಿದಿದೆ.

ರಾಮ್ ಕಿ ಪೈಡಿ ಸೇರಿದಂತೆ ಅಯೋಧ್ಯೆಯ 51 ಘಾಟ್‌ಗಳಲ್ಲಿ 22,23,000 ದೀಪಗಳನ್ನು ಬೆಳಗಿಸುವ ಮೂಲಕ ಉತ್ತರಪ್ರದೇಶ ಸರ್ಕಾರ 6ನೇ ಗಿನ್ನೆಸ್ ವಿಶ್ವ ದಾಖಲೆ ಬರೆದಿದೆ. 2022ರಲ್ಲಿ ದೀಪೋತ್ಸವ ಆಚರಣೆಯ ಸಮಯದಲ್ಲಿ 16 ಲಕ್ಷ ದೀಪಗಳನ್ನು ಬೆಳಗಿಸಿ ಗಿನ್ನಿಸ್ ದಾಖಲೆ ಸೃಷ್ಟಿಸಿತ್ತು. ದೀಪೋತ್ಸವ ಮೆರವಣಿಗೆಯು ಭಗವಾನ್ ರಾಮನ ಸಾರವನ್ನು ಚಿತ್ರಿಸುವ 18 ವಿಸ್ಮಯ–ಸ್ಫೂರ್ತಿದಾಯಕ ಮತ್ತು ದೈವಿಕ ಸ್ತಬ್ದಚಿತ್ರಗಳನ್ನು ಪ್ರದರ್ಶಿಸಿತು. ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಸಚಿವ ಜೈವೀರ್ ಸಿಂಗ್ ಅವರು ಶನಿವಾರ ಅಯೋಧ್ಯೆಯಲ್ಲಿ ಮೆರವಣಿಗೆಗೆ ಅಧಿಕೃತವಾಗಿ ಚಾಲನೆ ನೀಡಿದರು. ಭಗವಾನ್ ರಾಮನ ಜೀವನದ ವಿವಿಧ ಮುಖಗಳನ್ನು ವಿವರಿಸುವ ಸ್ತಬ್ಧಚಿತ್ರ ಮೆರವಣಿಗೆಯು ಅಯೋಧ್ಯೆಯ ಉದಯ ಚೌಕದಿಂದ ತನ್ನ ಯಾತ್ರೆ ಆರಂಭಿಸಿ ರಾಮ್ ಕಥಾ ಪಾರ್ಕ್ ಕಡೆಗೆ ಸಾಗಿತು.

ದೀಪೋತ್ಸವದಲ್ಲಿ ಭಾಗವಹಿಸಿ ಮಾತನಾಡಿದ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ದೀಪೋತ್ಸವದ ಕಾರ್ಯಕ್ರಮವನ್ನು ಪ್ರಾರಂಭಿಸಿದಾಗ, ಪ್ರತಿಯೊಬ್ಬರಿಗೂ ಒಂದೇ ಒಂದು ಆಸೆಯಿತ್ತು ಅದು ದೇವಾಲಯ (ರಾಮ ಮಂದಿರ) ನಿರ್ಮಾಣ. ಭಗವಾನ್ ರಾಮನ ದೇವಾಲಯದ (ರಾಮ ಮಂದಿರ) ನಿರ್ಮಾಣವು ಕಳೆದ 9.5 ವರ್ಷಗಳಲ್ಲಿ ಪ್ರಧಾನಿ ಮೋದಿಯವರು ಭಾರತದಲ್ಲಿ ಸ್ಥಾಪಿಸಿದ 'ರಾಮ ರಾಜ್ಯ'ದ ಅಡಿಪಾಯವನ್ನು ಬಲಪಡಿಸುತ್ತದೆ ಎಂದು ಹೇಳಿದ್ದಾರೆ. ರಾಮಮಂದಿರ ನಿರ್ಮಾಣವಾಗುತ್ತಿದ್ದಂತೆ ನಗರವನ್ನು ಅಭಿವೃದ್ಧಿಪಡಿಸಲು ಮತ್ತು ಅಯೋಧ್ಯೆಯ ಮುಖವನ್ನು ಬದಲಾಯಿಸಲು ಸರ್ಕಾರ ಕೋಟ್ಯಂತರ ರೂಪಾಯಿ ಖರ್ಚು ಮಾಡುತ್ತಿದೆ ಎಂದು ಅವರು ಹೇಳಿದ್ದಾರೆ. ಏತನ್ಮಧ್ಯೆ, ಭಕ್ತರು ಅಯೋಧ್ಯೆಯ ರಾಮ ಜನ್ಮಭೂಮಿಯಲ್ಲಿ ಭಗವಾನ್ ರಾಮ್ ಲಲ್ಲಾಗೆ ಪ್ರಾರ್ಥನೆ ಸಲ್ಲಿಸಿದರು. ಮಕ್ಕಳ ಹಕ್ಕುಗಳು ಮತ್ತು ಮೂಲಭೂತ ಶಿಕ್ಷಣ, ಮಹಿಳಾ ಸುರಕ್ಷತೆ ಮತ್ತು ಕಲ್ಯಾಣ, ಸ್ವಾವಲಂಬನೆ, ಅರಣ್ಯ ಮತ್ತು ಪರಿಸರದ ರಕ್ಷಣೆ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನದಂತಹ ವಿಷಯಗಳ ಕುರಿತು ಸ್ತಬ್ಧಚಿತ್ರಗಳಿದ್ದವು. ಸರ್ಕಾರದ ವಿವಿಧ ಉಪಕ್ರಮಗಳನ್ನು ಸಹ ಇದರಲ್ಲಿ ಪ್ರದರ್ಶಿಸಲಾಗಿದೆ.

ರಾಮಚರಿತಮಾನಸ್ ಮತ್ತು ರಾಮ್ ಕಥಾದಿಂದ ಪ್ರೇರಿತವಾದ ಸ್ತಬ್ಧಚಿತ್ರ ಸೇರಿದಂತೆ ಶಬರಿ–ರಾಮ್ ಮಿಲಾಪ್ ಮತ್ತು ಲಂಕಾ ದಹನ್ ಕೂಡಾ ಮೆರವಣಿಗೆಯಲ್ಲಿ ಗಮನಸೆಳೆದಿದೆ. ಉತ್ತರ ಪ್ರದೇಶದಿಂದ ಮಾತ್ರವಲ್ಲದೆ, ದೇಶದಾದ್ಯಂತ ಕಲಾವಿದರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ವಿವಿಧ ರಾಜ್ಯಗಳ ಜಾನಪದ ನೃತ್ಯಗಳು ಸೇರಿದಂತೆ ಪ್ರದರ್ಶನಗಳನ್ನು ವೀಕ್ಷಿಸಲು ಅಯೋಧ್ಯೆಯಾದ್ಯಂತ ಜನರು ರಸ್ತೆಗಳ ಉದ್ದಕ್ಕೂ ಜಮಾಯಿಸಿದ್ದರು. ಅಯೋಧ್ಯೆಯಲ್ಲಿ ದೀಪೋತ್ಸವ ಸಂಪ್ರದಾಯವು 2017ರಲ್ಲಿ ಯೋಗಿ ಆದಿತ್ಯನಾಥ್ ಸರ್ಕಾರ ರಚನೆಯೊಂದಿಗೆ ಪ್ರಾರಂಭವಾಯಿತು. 2017ರಲ್ಲಿ 51,000 ದೀಪಗಳನ್ನು ಬೆಳಗುವ ಮೂಲಕ ಪ್ರಾರಂಭವಾಗಿ, ಸಂಖ್ಯೆ 2019 ರಲ್ಲಿ 4.10 ಲಕ್ಷಕ್ಕೆ ಏರಿತು, 2020 ರಲ್ಲಿ 6 ಲಕ್ಷಕ್ಕೂ ಹೆಚ್ಚು ಮತ್ತು 2021ರಲ್ಲಿ 9 ಲಕ್ಷಕ್ಕೂ ಹೆಚ್ಚು ದೀಪ ಬೆಳಗಿ ಗಿನ್ನೆಸ್ ವಿಶ್ವ ದಾಖಲೆ ಬರೆದಿತ್ತು.

ಒಂದನೇ ಪುಟದಿಂದ

ಭಾರಿ ಅಗ್ನಿ ಅವಘಡ

ಚಾಮರಾಜನಗರ, ಮಂಡ್ಯ, ಶ್ರೀರಂಗಪಟ್ಟಣ ಅಗ್ನಿಶಾಮಕ ಕೇಂದ್ರದ ವಾಹನಗಳು, ಸಿಬ್ಬಂದಿ ಕೆಲವೇ ಸಮಯದಲ್ಲಿ ಆಗಮಿಸಿ, ಅಗ್ನಿ ಜ್ವಾಲೆ ಮತ್ತಷ್ಟು ವ್ಯಾಪಿಸದಂತೆ ಹತೋಟಿಗೆ ತರಲು ಹರಸಾಹಸ ಪಟ್ಟರು. ಪೇಪರ್ ರಿವೈಂಡಿಂಗ್, ಬಂಡಲ್‌ಗಳನ್ನು ಸಂಗ್ರಹಿಸಿಡುವ ಗೋಡೌನ್‌ನಲ್ಲಿ ಅಗ್ನಿ ರುದ್ರ ನರ್ತನ ಕಂಡು, ಕ್ಷಣಕಾಲ ತಬ್ಬಿಬ್ಬಾದರು.

ಅಗ್ನಿ ಕೆನ್ನಾಲಿಗೆ, ಜೊತೆಗೆ ದಟ್ಟ ಹೊಗೆ ಮುಗಿಲೆತ್ತರಕ್ಕೆ ಚಾಚಿರು ವುದನ್ನು ಕಂಡ ಸುತ್ತಮುತ್ತಲ ಕಾರ್ಖಾನೆ ಸಿಬ್ಬಂದಿ ಹಾಗೂ ಗ್ರಾಮಸ್ಥರು ಆತಂಕದಿಂದ ಸ್ಥಳದಲ್ಲಿ ಜಮಾ ಯಿಸಿದರು. ಜನರು ಕಾರ್ಖಾನೆಯತ್ತ ಸುಳಿಯದಂತೆ ತಡೆಯಲು ಪೊಲೀಸರು ಹರಸಾಹಸಪಟ್ಟರು. ಘಟನೆಯಿಂದ ಮೈಸೂರು–ನಂಜನಗೂಡು ರಸ್ತೆಯಲ್ಲಿ ಕೆಲ ಕಾಲ ವಾಹನ ಸಂಚಾರಕ್ಕೆ ಅಡ್ಡಿಯಾಯಿತು.

ಅಗ್ನಿಶಾಮಕ ವಾಹನಗಳು ನೀರು ಖಾಲಿಯಾದಂತೆ ಸನಿಹದಲ್ಲೇ ಇದ್ದ ಪ್ಲಾಂಟ್‌ನಿಂದ ತುಂಬಿಸಿ ಕೊಂಡು ಬಂದು ಮೋಟಾರ್ ಪೈಪ್ ಮೂಲಕ ತ್ವರಿತವಾಗಿ, ಚಿಮ್ಮಿ, ಅಗ್ನಿ ಶಮನಕ್ಕೆ ಹರಸಾಹಸಪಟ್ಟರು. ಎಷ್ಟೇ ವೇಗವಾಗಿ ನೀರು ಚಿಮ್ಮಿದರೂ ಬೆಂಕಿ ನಿಯಂತ್ರಣಕ್ಕೆ ಬರಲಿಲ್ಲ. ಮತ್ತಷ್ಟು ಅನಾಹುತ ಆಗದಂತೆ ತಡೆಯಲು ಪಕ್ಕದಲ್ಲೇ ಇದ್ದ ಪೇಪರ್ ರೋಲ್‌ಗಳನ್ನು ನೀರಾಯಿಸಿ ಒದ್ದೆ ಮಾಡಲಾಯಿತು. ಮುಂಜಾನೆಯಿಂದ ಸಂಜೆತನಕ ಸತತ 15 ಗಂಟೆಗಳ ಕಾಲ ಹತ್ತಾರು ಅಗ್ನಿಶಾಮಕ ವಾಹಕ ಸಿಬ್ಬಂದಿ ಬೆಂಕಿ ನಂದಿಸಲು ಶ್ರಮಿಸಿದರು.

ಬೆಂಕಿ ಹೊತ್ತಿದ್ದ ಗೋಡೌನ್‌ನಲ್ಲಿ ಯಾವ ಸಿಬ್ಬಂದಿಯೂ ಇರಲಿಲ್ಲ. ಇದರಿಂದ ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಲಿಲ್ಲ. ಅಗ್ನಿಶಾಮಕ ದಳದ ಸಿಬ್ಬಂದಿ ನಿರಂತರ ಪರಿಶ್ರಮ ದಿಂದ ಕೊನೆಗೂ ಅಗ್ನಿ ಜ್ವಾಲೆ ಹತೋಟಿಗೆ ಬಂದು ಸಂಜೆ ವೇಳೆಗೆ ಪೂರ್ಣ ಪ್ರಮಾಣ ದಲ್ಲಿ ಬೆಂಕಿ ನಂದಿಸಲಾಯಿತು. ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಹೊತ್ತಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ. ಆದರೆ, ನಿಖರ ಕಾರಣ ತನಿಖೆ ನಂತರವಷ್ಟೇ ತಿಳಿಯಬೇಕಿದೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಸೌತ್ ಇಂಡಿಯಾ ಪೇಪರ್ ಮಿಲ್‌ನ ಮಾನವ ಸಂಪನ್ಮೂಲ ಅಧಿಕಾರಿ ಕೃಷ್ಣಕುಮಾರ್, ಅಗ್ನಿ ಅವಘಡಕ್ಕೆ ಕಾರಣ ತಿಳಿದು ಬಂದಿಲ್ಲ. ಕಾರ್ಖಾನೆಯ ಆ ಘಟಕದಲ್ಲಿ ಕಾರ್ಮಿಕರು ಇಲ್ಲದ ಕಾರಣ ಪ್ರಾಣಾಪಾಯ ಸಂಭವಿಸಿಲ್ಲ. ಪೇಪರ್ ರೋಲ್, ಯಂತ್ರೋಪಕರಣಗಳು ಸೇರಿದಂತೆ ಹಲವು ವಸ್ತುಗಳು ಬೆಂಕಿಗಾಹುತಿಯಾಗಿವೆ. ಇದರಿಂದ ಎಷ್ಟು ನಷ್ಟವಾಗಿದೆ ಎಂದು ಈಗಲೇ ಅಂದಾಜು ಮಾಡಲು ಸಾಧ್ಯವಾಗುವುದಿಲ್ಲ. ನಾಳೆ ನಂತರ ಪರಿಶೀಲನೆ ಮಾಡಿ ನಷ್ಟದ ಪ್ರಮಾಣವನ್ನು ಅಂದಾಜು ಮಾಡಲಾಗುವುದು ಎಂದು ತಿಳಿಸಿದರು.

ನಂಜನಗೂಡು ಗ್ರಾಮಾಂತರ ಪೊಲೀಸ್ ಇನ್ಸ್‌ಪೆಕ್ಟರ್ ಸುನೀಲ್ ಕುಮಾರ್ ಕೂಡ ಭೇಟಿ ನೀಡಿ ಘಟನೆ ಬಗ್ಗೆ ಮಾಹಿತಿ ಪಡೆದಿದ್ದಾರೆ.



ಬೆಂಗಳೂರಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ನಾಡಪ್ರಭು ಕೆಂಪೇಗೌಡರ ಕಂಚಿನ ಪ್ರತಿಮೆ ಅನಾವರಣಗೊಂಡು ವರ್ಷ ತುಂಬಿದ ಹಿನ್ನೆಲೆಯಲ್ಲಿ ಈ ಪ್ರತಿಮೆ ಅನಾವರಣಕ್ಕೆ ಕಾರಣೀಭೂತರಾದ ಮಾಜಿ ಉಪಮುಖ್ಯಮಂತ್ರಿ ಡಾ. ಅಶ್ವತ್ಥನಾರಾಯಣ ಅವರನ್ನು ಶ್ರೀ ನಾಡಪ್ರಭು ಕೆಂಪೇಗೌಡ ಬಳಗ ಮತ್ತು ನಮ್ಮೂರು ನಮ್ಮೋರು ಟ್ರಸ್ಟ್ ವತಿಯಿಂದ ಸನ್ಮಾನಿಸಲಾಯಿತು. ಈ ವೇಳೆ ಸಂಸದ ಪ್ರತಾಪ್ ಸಿಂಹ, ಮುಡಾ ಮಾಜಿ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಬಿಜೆಪಿ ಮುಖಂಡರೂ ಆದ ವಿದ್ಯಾವಿಕಾಸ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಕವೀಶ್‌ಗೌಡ, ನಮ್ಮೂರು ನಮ್ಮೋರು ಟ್ರಸ್ಟ್ ಅಧ್ಯಕ್ಷ ಬೀಡನಹಳ್ಳಿ ಸತೀಶ್, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಗಂಗಾಧರ್, ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಮರಿಸ್ವಾಮಿ, ಕಾರ್ಯದರ್ಶಿ ಚೇತನ್, ನಿರ್ದೇಶಕರಾದ ರವಿ .ಎ, ಉಮೇಶ್, ಸುಶೀಲಾ ನಂಜಪ್ಪ, ಬೋರೇಗೌಡ, ಅಪ್ಪಾಜಿಗೌಡ ಇತರರಿದ್ದರು.



ಬಿಜೆಪಿ ರಾಜ್ಯಾಧ್ಯಕ್ಷರಾಗಿ ಆಯ್ಕೆಯಾದ ಬಿ.ವೈ.ವಿಜಯೇಂದ್ರ ಅವರನ್ನು ಬಿ.ಎಸ್.ಯಡಿಯೂರಪ್ಪನವರ ಬೆಂಗಳೂರು ನಿವಾಸ 'ಧವಳಗಿರಿ'ಯಲ್ಲಿ ಪಕ್ಷದ ಮೈಸೂರು ನಗರ ಘಟಕದ ವತಿಯಿಂದ ಕೃಷ್ಣರಾಜ ಕ್ಷೇತ್ರದ ಶಾಸಕರೂ ಆದ ಬಿಜೆಪಿ ನಗರಾಧ್ಯಕ್ಷ ಟಿ.ಎಸ್. ಶ್ರೀವತ್ಸ, ಮೇಯರ್ ಶಿವಕುಮಾರ್ ನೇತೃತ್ವದಲ್ಲಿ ಅಭಿನಂದಿಸಲಾಯಿತು. ಈ ವೇಳೆ ನಗರ ಪ್ರಧಾನ ಕಾರ್ಯದರ್ಶಿಗಳಾದ ಸೋಮಸುಂದರ್, ಗಿರಿಧರ್, ವಕ್ತಾರರಾದ ಮೋಹನ್, ಜೋಗಿ ಮಂಜು, ವಸಂತಕುಮಾರ್, ದೇವರಾಜೇಗೌಡ, ವೇಲು, ಬಿ.ಎಂ.ರಘು, ಭಾನುಪ್ರಕಾಶ್, ಪ್ರದೀಪ್, ಕಿಶೋರ್, ರಮೇಶ್, ರಘುನಂದನ್, ಮಂಜುನಾಥ್, ಶಶಿಕುಮಾರ್, ರವಿತೇಜ, ಗೋಪಾಲ್ ಮತ್ತಿತರರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಿಗೆ ಮೊಬೈಲ್ ದುರ್ಬಳಕೆ ಅರಿವು ಅಗತ್ಯ



ಮೈಸೂರು, ನ. 11– ಮೈಸೂರಿನ ಟಿಟಿಎಲ್ ಟ್ರಸ್ಟ್, ಟಿಟಿಎಲ್ ವಾಣಿಜ್ಯ ವ್ಯವಹಾರ ನಿರ್ವಹಣಾ ಕಾಲೇಜು, ಟಿಟಿಎಲ್ ಸ್ವತಂತ್ರ ಪದವಿ ಪೂರ್ವ ಕಾಲೇಜು ಮತ್ತು ಯುವ ರೆಡ್ ಕ್ರಾಸ್ ಘಟಕ, ರಾಷ್ಟ್ರೀಯ ಸೇವಾ ಯೋಜನೆ ಘಟಕ, ಐಕ್ಯೂಎಸಿ ಸಂಯುಕ್ತವಾಗಿ ಆಯೋಜಿಸಿದ್ದ ನೈತಿಕ ಜಾಗೃತಿ, ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಈ ವೇಳೆ ರೆಸ್ಕ್ಯೂ ಚಾರಿಟೇಬಲ್ ಟ್ರಸ್ಟ್‌ನ ಸಂಯೋಜಕರಾದ ಶ್ರೀಮತಿ ಗೀತಾ ಸುನಿಲ್ ಮಾತನಾಡಿ, ಇಂದಿನ ತಂತ್ರಜ್ಞಾನವು ಬೆಳೆಯುವುದರ ಮೂಲಕ ದೇಶದಾದ್ಯಂತ ಮೊಬೈಲ್ ದುರ್ಬಳಕೆಯಿಂದ ಯುವಕ, ಯುವತಿಯರು ಅಶ್ಲೀಲ ಚಿತ್ರದ ವಿಡಿಯೋಗಳ ವೀಕ್ಷಣೆಗೆ ಮಾರು ಹೋಗಿದ್ದಾರೆ. ಆದ್ದರಿಂದ ಭ್ರೂಣ ಹತ್ಯೆಗಳು, ಬಲಾತ್ಕಾರಗಳು, ಯುವಕ ಯುವತಿಯರ ಆತ್ಮಹತ್ಯೆ ಪ್ರಕರಣಗಳು ಹೆಚ್ಚಾಗುತ್ತಿವೆ. ಮಾನವ ಕಳ್ಳ ಸಾಗಾಣಿಕೆ ಮತ್ತು ವೇಶ್ಯಾವಾಟಿಕೆ ದಂಧೆಗೂ ಕಾರಣವಾಗುತ್ತಿದೆ ಎಂದು ವಿದ್ಯಾರ್ಥಿಗಳ ಮನಮುಟ್ಟುವಂತೆ ತಿಳಿಸಿದರು.

ಪ್ರಾಂಶುಪಾಲರಾದ ಡಾ.ಬಿ.ವಿ.ಪ್ರಶಾಂತ್, ಹಿರಿಯರ ಉಲ್ಲೇಖದಂತೆ ಸಕ್ರಿಯವಾಗಿಲ್ಲದ ಮನಸ್ಸು ದೆವ್ವದ ಕಾರ್ಯಾಗಾರವಿದ್ದಂತೆ. ಹಾಗಾಗಿ ನಾವು ಒಂಟಿತನದಲ್ಲಿ ಇರುವಾಗ ಪ್ರಯೋಜನಕಾರಿಯಾಗುವ ಅಂತರ್ಜಾಲದ ಉಪಯುಕ್ತ ಮಾಹಿತಿಗಳತ್ತ ಗಮನಹರಿಸುವ ಮೂಲಕ ದುಶ್ಚಟಗಳಿಂದ ಹೊರ ಬರಬಹುದು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಟಿ.ಟಿ.ಎಲ್ ಪದವಿ ಕಾಲೇಜು ಪ್ರಾಂಶುಪಾಲ ಡಾ.ಬಿ.ವಿ.ಪ್ರಶಾಂತ್ ಅಧ್ಯಕ್ಷತೆ ವಹಿಸಿದ್ದರು. ಮೈಸೂರಿನ ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಟಿಟಿಎಲ್ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಭ್ರಮರಾಂಭ ಎಸ್, ಹಿರಿಯ ಪ್ರಾಧ್ಯಾಪಕ ಪ್ರೊ. ಎನ್.ಎಂ. ರಾಮಚಂದ್ರಯ್ಯ, ಗ್ರಂಥಪಾಲಕರಾದ ಶ್ರೀಮತಿ ರಮ್ಯಶ್ರೀ ಎಸ್.ಹೆಚ್, ಯುವ ರೆಡ್‌ಕ್ರಾಸ್ ಘಟಕದ ಸಂಚಾಲಕ ಗಿರೀಶ ಹೆಚ್ ಆರ್, ಉಪ ನ್ಯಾಸಕರಾದ ಕರುಣ್ ಶರ್ಮ ಮತ್ತಿತರರು ಉಪಸ್ಥಿತರಿದ್ದರು.

ಅರ್ಜೆಂಟೈನಾದ ಸರ್ಜಿಕಲ್ ಕಾನ್ಫರೆನ್ಸ್‌ಗೆ ಮೈಸೂರಿನ ಡಾ.ನೈರುತ್ಯ ಶಿವತೀರ್ಥನ್ ಆಯ್ಕೆ



ಮೈಸೂರು, ನ. 11– ಮೈಸೂರಿನ ಅಪೋಲೊ ಬಿಜಿಎಸ್ ಆಸ್ಪತ್ರೆಯ ಮುಖ್ಯ ಗ್ಯಾಸ್ಟ್ರೋಸರ್ಜನ್ ಡಾ.ನೈರುತ್ಯ ಶಿವತೀರ್ಥನ್ ಅವರು ಅಂತಾರಾಷ್ಟ್ರೀಯ ಮಟ್ಟದ 93ನೇ ಅರ್ಜೆಂಟೈನಾ ಕಾಂಗ್ರೆಸ್ ಆಫ್ ಸರ್ಜರಿ ಸಮ್ಮೇಳನಕ್ಕೆ ಅಂತಾರಾಷ್ಟ್ರೀಯ ಫ್ಯಾಕಲ್ಟಿಯಾಗಿ ಆಯ್ಕೆಯಾಗಿದ್ದಾರೆ. ಅರ್ಜೆಂಟೈನಾದ ಶಸ್ತ್ರ ಚಿಕಿತ್ಸಕರ ಸಂಘದಿಂದ (ಅರ್ಜೆಂಟೈನಾ ಅಸೋಸಿಯೇಷನ್ ಆಫ್ ಸರ್ಜನ್ಸ್) ಡಾ.ನೈರುತ್ಯ ಅವರಿಗೆ ಈ ಆಹ್ವಾನ ಸಿಕ್ಕಿದ್ದು, ಸಮ್ಮೇಳನವು ನ.13ರಿಂದ 16ರವರೆಗೆ ಅಲ್ಲಿನ ಬ್ಯೂನಸ್ ಐರಿಸ್ ಶೆರಾಟನ್ ಹೋಟೆಲ್ ಮತ್ತು ಕನ್ವೆನ್ಷನ್ ಸೆಂಟರ್‌ನಲ್ಲಿ ನಡೆಯಲಿದೆ.

ಹಾಸನಾಂಬೆ ಸನ್ನಿದಿಯಲ್ಲಿ ನೂಕುನುಗ್ಗಲು
ಎಸಿ ಮೇಲೆ ಕೈಮಾಡಿದ ಡಿಸಿ!



ಹಾಸನ, ನ.11– ಹಾಸನಾಂಬೆ ದೇಗುಲದ ವಿವಿಐಪಿ ಗೇಟ್ ತಳ್ಳಿ ಜನರು ನುಗ್ಗಿದ್ದರಿಂದ ಜಿಲ್ಲಾಧಿಕಾರಿ ಸತ್ಯಭಾಮ ಆಕ್ರೋಶಗೊಂಡು ಸಕಲೇಶಪುರದ ಸಹಾಯಕ ಆಯುಕ್ತೆ ಶಿಲ್ಪಾ ಅವರಿಗೆ ಹೊಡೆದಿರುವ ವಿಡಿಯೋ ವೈರಲ್ ಆಗಿದೆ.

ಶಾಸಕ ಸಿಮೆಂಟ್ ಮಂಜು ದೇಗುಲದ ಒಳಗೆ ಪ್ರವೇಶಿಸುತ್ತಿದ್ದಂತೆ ಅವರ ಹಿಂದೆ ಜನರು ಗೇಟ್ ತಳ್ಳಿ ಒಳಗೆ ನುಗ್ಗಿದ್ದಾರೆ. ಇದರಿಂದ ಜಿಲ್ಲಾಧಿಕಾರಿ ಸತ್ಯಭಾಮ ಗರಂ ಆಗಿದ್ದಾರೆ. ಈ ವೇಳೆ ಘಟನೆ ಬಗ್ಗೆ ಎಸಿ ಶಿಲ್ಪಾ ಅವರು ಸಮಜಾಯಿಷಿ ನೀಡಲು ಮುಂದಾಗಿದ್ದಾರೆ. ಇದರಿಂದ ಮತ್ತಷ್ಟು ಕೋಪಗೊಂಡ ಡಿಸಿ 'ಏಯ್ ಸುಮ್ಮನಿರೆ...' ಎಂದು ಭಕ್ತರು ಹಾಗೂ ಪೊಲೀಸ್ ಸಿಬ್ಬಂದಿ ಎದುರಲ್ಲೇ ಶಿಲ್ಪಾ ಕೈಗೆ ಹೊಡೆದಿದ್ದಾರೆ. ಈ ವಿಡಿಯೋ ಖಾಸಗಿ ಸುದ್ದಿ ವಾಹಿನಿ ವೆಬ್‌ಸೈಟ್‌ನಲ್ಲಿ ಬಿತ್ತರವಾಗಿದೆ.

ಕ್ರಿಕೆಟ್ ಸ್ಟೇಡಿಯಂಗೆ ಹುಯಿಲಾಳು ಗ್ರಾಮದಲ್ಲಿ ಭೂಮಿ ಮಂಜೂರಿಗೆ ಪ್ರಸ್ತಾವನೆ ಸಲ್ಲಿಕೆ
ಸಂಸದ ಪ್ರತಾಪ್ ಸಿಂಹ



ಮೈಸೂರು, ನ.11(ಪಿಎಂ)– ಮೈಸೂರು ಜಿಲ್ಲೆ ಮತ್ತು ತಾಲೂಕಿನ ಇಲವಾಲ ಹೋಬಳಿಯ ಹುಯಿಲಾಳು ಗ್ರಾಮದ ಸರ್ವೇ ನಂ. 312ರಲ್ಲಿ 19 ಎಕರೆ ಮತ್ತು 313ರಲ್ಲಿ 7.31 ಎಕರೆ ಸೇರಿದಂತೆ ಒಟ್ಟು 26.31 ಎಕರೆ ಜಮೀನನ್ನು ಮೈಸೂರಿನ ಅಂತಾರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣದ ಉದ್ದೇಶಕ್ಕಾಗಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಗೆ ಮಂಜೂರು ಮಾಡುವಂತೆ ಕಂದಾಯ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಮೈಸೂರು ಪ್ರಾದೇಶಿಕ ಆಯುಕ್ತರು ಪ್ರಸ್ತಾವನೆ ಸಲ್ಲಿಸಿದ್ದಾರೆ.

ಸಂಸದ ಪ್ರತಾಪ್ ಸಿಂಹರ ಕಚೇರಿ ಪ್ರಕಟಣೆಯಲ್ಲಿ ಈ ವಿಷಯ ತಿಳಿಸಲಾಗಿದೆ. ಕಳೆದ ಎರಡು ವರ್ಷಗಳ ತಮ್ಮ ಸತತ ಪ್ರಯತ್ನದಿಂದ ಇದೀಗ ಹುಯಿಲಾಳು ಗ್ರಾಮದಲ್ಲಿ ಜಮೀನನ್ನು ಕ್ರಿಕೆಟ್ ಸ್ಟೇಡಿಯಂ ನಿರ್ಮಾಣದ ಉದ್ದೇಶಕ್ಕೆ ಮಂಜೂರು ಮಾಡುವಂತೆ ಕೋರಿ ಪ್ರಾದೇಶಿಕ ಆಯುಕ್ತರು ಪ್ರಸ್ತಾವನೆ ಸಲ್ಲಿಸುವ ಹಂತಕ್ಕೆ ಬರಲಾಗಿದೆ ಎಂದು ಸಂಸದರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಹಿಂದೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ಒಡೆತನದ ಸಾತಗಳ್ಳಿ ಗ್ರಾಮದಲ್ಲಿ 19.20 ಎಕರೆ ಭೂಮಿ ಗುರುತಿಸಲಾಗಿತ್ತು. ಆದರೆ ಭೂಮಿಯ ಬೆಲೆ ಹೆಚ್ಚಳ ಸೇರಿದಂತೆ ನಾನಾ ಕಾರಣಗಳಿಂದ ಇದನ್ನು ಕೈಬಿಡಲಾಯಿತು. ಇದೀಗ ಹುಯಿಲಾಳು ಗ್ರಾಮದಲ್ಲಿ ಗುರುತಿಸಿರುವ ಸದರಿ ಭೂಮಿಯು ಸರ್ಕಾರಿ ಸ್ವಾಮ್ಯದಲ್ಲಿರುವುದು ಬಹುಮುಖ್ಯ ಅಂಶವಾಗಿದೆ.

ಇಂದು ಮೈಸೂರು ಗ್ರಾಹಕರ ಪರಿಷತ್ ಸಭೆ

ಮೈಸೂರು, ನ. 11– ನಿರಂತರವಾಗಿ ಹೆಚ್ಚುತ್ತಿರುವ ಸೈಬರ್ ಅಪರಾಧಗಳ ಹಿನ್ನೆಲೆಯಲ್ಲಿ, ಸಾಮಾನ್ಯರು ಅವುಗಳಿಗೆ ತುತ್ತಾಗದಿರುವುದು ಹೇಗೆ...? ವಿಷಯ ಕುರಿತಂತೆ ಮೈಸೂರು ಗ್ರಾಹಕರ ಪರಿಷತ್ತು ನ.12ರಂದು ಸಂಜೆ 4 ಗಂಟೆಗೆ ನಂ. 6/1, ವಿವೇಕಾನಂದ ರಸ್ತೆ, ಯಾದವಗಿರಿ ಇಲ್ಲಿ ತಿಂಗಳ ಮಾಸಿಕ ಸಭೆ ಆಯೋಜಿಸಿದೆ.

ಸಾರ್ವಜನಿಕರಿಂದ ನಿರಂತರವಾಗಿ ಹೆಚ್ಚುತ್ತಿರುವ ಮೊಬೈಲ್ ಫೋನ್‌ಗಳ ಬಳಕೆ ಮತ್ತು ಮಾಹಿತಿ ತಂತ್ರಜ್ಞಾನಕ್ಕೋಸ್ಕರ ಅಂತರ್ಜಾಲದ ಮೇಲಿನ ಅವರ ಅತಿಯಾದ ಅವಲಂಬನೆಯ ಅನಿವಾರ್ಯತೆ – ಇವುಗಳಿಂದ ಪ್ರೇರೇಪಿತರಾದ ಕೆಲವು ಸಮಾಜ ವಿರೋಧಿ ಶಕ್ತಿಗಳು ಸಾರ್ವಜನಿಕರನ್ನು ಕುಯುಕ್ತಿಯಿಂದ ಮೋಸಗೊಳಿಸಲು ಹೊಸ ಹೊಸ ಯೋಜನೆಗಳನ್ನು ಅಭಿವೃದ್ಧಿಗೊಳಿಸುತ್ತಿವೆ. ಅನಿಲ್‌ಕುಮಾರ್, ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಮತ್ತು ಶಿವಕುಮಾರ್, ಪೊಲೀಸ್ ಹೆಡ್ ಕಾನ್ಸ್‌ಟೇಬಲ್, ಸಿ.ಇ.ಎನ್ ಕ್ರೈಂ ಪೊಲೀಸ್ ಠಾಣೆ, ಇವರು ಸೈಬರ್ ಅಪರಾಧಗಳ ತಡೆಗೆ ಕೈಗೊಳ್ಳಬೇಕಾದ ಮಾರ್ಗೋಪಾಯಗಳ ಕುರಿತು ಮಾಸಿಕ ಸಭೆಯಲ್ಲಿ ಚರ್ಚಿಸಲಿದ್ದಾರೆ. ಡಿ.ಟಿ.ವೆಂಕಟೇಶ್, ನಿವೃತ್ತ ಅಸಿಸ್ಟೆಂಟ್ ಜನರಲ್ ಮ್ಯಾನೇಜರ್, ಭಾರತೀಯ ಸ್ಟೇಟ್ ಬ್ಯಾಂಕ್, ಫೈನಾನ್ಸಿಯಲ್ ಲಿಟರಸಿ ಸೆಂಟರ್ ಇವರು ಬ್ಯಾಂಕುಗಳಲ್ಲಿ ಸಂಭವಿಸುವ ಸೈಬರ್ ಅಪರಾಧಗಳ ಕುರಿತು ವಿವರಣೆ ನೀಡಲಿದ್ದಾರೆ.

ಸೈಬರ್ ಅಪರಾಧಗಳ ಕುರಿತು ಪ್ರಶ್ನೆ ಕೇಳಲಿಚ್ಛಿಸುವವರು ಅಥವಾ ಚರ್ಚಿಸಬೇಕೆನ್ನುವವರು mygrapa@gmail.com ಗೆ ಇಮೇಲ್ ಮಾಡಬಹುದು. ಹೆಚ್ಚಿನ ಮಾಹಿತಿಗೆ ದೂರವಾಣಿ ಸಂ. 0821–2515150 ಸಂಪರ್ಕಿಸಬಹುದು.



ವಿಶ್ವಕಪ್ ಮಹಾಸಮರ 2023

ಗೆಲುವಿನೊಂದಿಗೆ ವಿದಾಯ ಹೇಳಿದ ಇಂಗ್ಲೆಂಡ್



ಕೋಲ್ಕತ್ತಾ, ನ.11– ಸಂಘಟಿತ ಬ್ಯಾಟಿಂಗ್, ಬೌಲಿಂಗ್ ನೆರವಿನಿಂದ ಇಂಗ್ಲೆಂಡ್ ಪಾಕಿಸ್ತಾನದ ವಿರುದ್ಧ 93 ರನ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ ಇಂಗ್ಲೆಂಡ್ ಗೆಲುವಿನೊಂದಿಗೆ ಟೂರ್ನಿಗೆ ವಿದಾಯ ಹೇಳಿದರೆ, ಪಾಕಿಸ್ತಾನ ಸೋಲಿನೊಂದಿಗೆ ವಿದಾಯ ಹೇಳಿದೆ.

ಇಲ್ಲಿನ ಕೋಲ್ಕತ್ತಾ ಈಡನ್ ಗಾರ್ಡನ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ 50 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 337 ರನ್ ಗಳಿಸಿತ್ತು ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಡೇವಿಡ್ ಮಲಾನ್ ಹಾಗೂ ಜಾನಿ ಬೈರ್ಸ್ಟೋವ್ ಮೊದಲ ವಿಕೆಟ್‌ಗೆ 82 ರನ್ ಜೊತೆ ಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಆದರೆ 31 ರನ್ ಗಳಿಸಿದ್ದ ಡೇವಿಡ್ ಮಲಾನ್ 31 ರನ್ ಗಳಿಸಿ ವಿಕೆಟ್ ಒಪ್ಪಿಸಿದರೇ, ಜಾನಿ ಬೈರ್ಸ್ಟೋವ್ 1 ಸಿಕ್ಸರ್, 6 ಬೌಂಡರಿ ಒಳಗೊಂಡ 59 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಬಳಿಕ 3ನೇ ವಿಕೆಟ್‌ಗೆ ಜೊತೆಯಾದ ಬೆನ್ ಸ್ಟೋಕ್ಸ್ ಮತ್ತು ಜೋ ರೂಟ್ 132 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು. ಈ ವೇಳೆ 76 ಎಸೆತಗಳಲ್ಲಿ 2 ಸಿಕ್ಸರ್, 11 ಬೌಂಡರಿ ಒಳಗೊಂಡ 84 ರನ್ ಗಳಿಸಿ ನಿರ್ಗಮಿಸಿದರು. ಮತ್ತೊಂದೆಡೆ ಜೋ ರೂಟ್ ಕೂಡ 60 ರನ್ ಗಳಿಸಿ ಔಟಾದರು. ಉಳಿದಂತೆ ಜೋಸ್ ಬಟ್ಲರ್ 27, ಹ್ಯಾರಿ ಬ್ರೂಕ್ 30, ಮೊಯಿನ್ ಅಲಿ 8, ಡೇವಿಡ್ ವಿಲ್ಲಿ 15 ರನ್ ಗಳಿಸಿದರು. ಪಾಕಿಸ್ತಾನ ಪರ ಹ್ಯಾರಿಸ್ ರೌಫ್ 3, ಶಾಹೀನ್ ಶಾ ಅಫ್ರಿದಿ ಮತ್ತು ಮೊಹಮ್ಮದ್ ವಸೀಮ್ ತಲಾ 2 ಹಾಗೂ ಇಫ್ತಿಕಾರ್ ಅಹ್ಮದ್ 1 ವಿಕೆಟ್ ಉರುಳಿಸಿದರು.

ಇಂಗ್ಲೆಂಡ್ ನೀಡಿದ 338 ರನ್‌ಗಳ ಬೃಹತ್ ಗುರಿ ಬೆನ್ನತ್ತಿದ ಪಾಕಿಸ್ತಾನ ಇನ್ನಿಂಗ್ಸ್ ಆರಂಭದಲ್ಲೇ ತಂಡದ ಮೊತ್ತ 10ರನ್ ಆಗುವಷ್ಟರಲ್ಲಿ 2 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಈ ವೇಳೆ 3ನೇ ವಿಕೆಟ್‌ಗೆ ಜೊತೆಯಾದ ನಾಯಕ ಬಾಬರ್ ಆಜಂ ಹಾಗೂ ಮೊಹಮ್ಮದ್ ರಿಜ್ವಾನ್ 51ರನ್ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಆದರೆ ಬಾಬರ್ ಆಜಂ 38 ರನ್ ಹಾಗೂ ಮೊಹಮ್ಮದ್ ರಿಜ್ವಾನ್ 36 ರನ್ ಗಳಿಸಿ ನಿರ್ಗಮಿಸಿದರು. ನಂತರ ಬಂದ ಸೌದ್ ಶಕೀಲ್ 29 ರನ್ ಗಳಿಸಿ ಔಟಾದರು. ಮತ್ತೊಂದೆಡೆ ಜವಾಬ್ದಾರಿಯುತ ಆಟವಾಡಿದ ಆಘಾ ಸಲ್ಮಾನ್ 51 ಗಳಿಸಿ ಡೇವಿಡ್ ವಿಲ್ಲಿಗೆ ವಿಕೆಟ್ ಒಪ್ಪಿಸಿದರು. ಉಳಿದಂತೆ ಶಾಹೀನ್ ಶಾ ಅಫ್ರಿದಿ 25, ಇನ್ನಿಂಗ್ಸ್ ಕೊನೆಯಲ್ಲಿ ಮಿಂಚಿನ ಬ್ಯಾಟಿಂಗ್ ಮಾಡಿದ ಹ್ಯಾರಿಸ್ ರೌಫ್ 35, ಮೊಹಮ್ಮದ್ ವಸೀಮ್ 16 ರನ್ ಗಳಿಸಿದರು. ಅಂತಿಮವಾಗಿ ಪಾಕಿಸ್ತಾನ 43.3 ಓವರ್‌ಗಳಲ್ಲಿ 244 ರನ್ ಗಳಿಗೆ ಆಲೌಟಾಯಿತು.

ಬಾಂಗ್ಲಾ ವಿರುದ್ಧ ಆಸ್ಟ್ರೇಲಿಯಾಕ್ಕೆ ಜಯ



ಪುಣೆ, ನ.11– ಮಿಚೆಲ್ ಮಾರ್ಷ್ ಅವರ ಭರ್ಜರಿ ಶತಕದ ನೆರವಿನೊಂದಿಗೆ ಆಸ್ಟ್ರೇಲಿಯಾ ಬಾಂಗ್ಲಾದೇಶ ವಿರುದ್ಧ 8 ವಿಕೆಟ್ ಗಳ ಜಯ ಸಾಧಿಸಿದೆ. ಪ್ರಸ್ತುತ ಟೂರ್ನಿಯ ಆರಂಭದಲ್ಲಿ ಸತತ 2 ಸೋಲು ಅನುಭವಿಸಿದ್ದ ಆಸೀಸ್ ನಂತರದ ಎಲ್ಲಾ 7 ಪಂದ್ಯಗಳನ್ನು ಗೆಲ್ಲುವ ಮೂಲಕ ಸೆಮಿಫೈನಲ್‌ಗೆ ಆತ್ಮವಿಶ್ವಾಸ ಹೆಚ್ಚಿಸಿಕೊಂಡಿದೆ.

ಇಲ್ಲಿನ ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ಶನಿವಾರ ಬೆಳಗ್ಗೆ ನಡೆದ ಪಂದ್ಯದಲ್ಲಿ ಬಾಂಗ್ಲಾದೇಶ ನೀಡಿದ 307 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಆಸ್ಟ್ರೇಲಿಯಾ 5.2 ಓವರ್‌ಗಳು ಬಾಕಿ ಇರುವಾಗಲೇ 8 ವಿಕೆಟ್‌ಗಳ ವಿಜಯೋತ್ಸವ ಆಚರಿಸಿತು. ತಂಡದ ಪರ ಮಿಂಚಿನ ಬ್ಯಾಟಿಂಗ್ ಮಾಡಿದ ಮಿಚೆಲ್ ಮಾರ್ಷ್ 132 ಎಸೆತಗಳಲ್ಲಿ 17 ಬೌಂಡರಿ, 9 ಸಿಕ್ಸರ್ ಒಳಗೊಂಡ ಅಜೇಯ 177 ರನ್ ಗಳಿಸಿ ತಂಡದ ಜಯಕ್ಕೆ ಕಾರಣರಾದರು. ಉಳಿದಂತೆ ಡೇವಿಡ್ ವಾರ್ನರ್ 53, ಸ್ಟೀವನ್ ಸ್ಮಿತ್ 63 ರನ್ ಗಳಿಸಿದರು. ಬಾಂಗ್ಲಾದೇಶದ ಪರ ತಸ್ಕಿನ್ ಅಹಮದ್, ಮುಸ್ತಫಿಜುರ್ ರೆಹಮಾನ್ ಒಂದೊಂದು ವಿಕೆಟ್ ಉರುಳಿಸಿದರು.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಬಾಂಗ್ಲಾದೇಶ 50 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 306 ರನ್ ಗಳಿಸಿತು. ತಂಡದ ಪರ ತಂಝೀದ್ ಹಸನ್, ಲಿಟ್ಟನ್ ದಾಸ್ ತಲಾ 36 ರನ್ ಗಳಿಸಿದರು. ನಜ್ಮುಲ್ ಹೊಸೈನ್ ಶಾಂತೋ 45, ತೋಹಿದ್ ಹೃದಯ್ 74, ಮಹಮ್ಮದುಲ್ಲಾ 32, ಮುಶ್ಫಿಕರ್ ರಹೀಮ್ 21, ಮೆಹಿದಿ ಹಸನ್ ಮಿರಾಜ್ 29 ರನ್ ಗಳಿಸಿದರು. ಆಸ್ಟ್ರೇಲಿಯಾ ಪರ ಶಾನ್ ಅಬಾಟ್ ಮತ್ತು ಆಡಮ್ ಝಂಪ ತಲಾ 2, ಸ್ಟೋಯಿನಿಸ್ 1 ವಿಕೆಟ್ ಪಡೆದರು. ಮಿಚೆಲ್ ಮಾರ್ಷ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಕಟ್ಟಡ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿವೇತನ ಕಡಿತ

ಬೆಂಗಳೂರು, ನ.11–ಕಾರ್ಮಿಕ ಇಲಾಖೆಯು ಸಾಕಷ್ಟು ಹಣದ ಕೊರತೆ ಎದುರಿಸುತ್ತಿರುವುದರಿಂದ ಕಟ್ಟಡ ಕಾರ್ಮಿಕರ ಮಕ್ಕಳ ವಿದ್ಯಾರ್ಥಿ ವೇತನ ಕಡಿತಗೊಳಿಸುವುದಾಗಿ ರಾಜ್ಯ ಸರ್ಕಾರ ತಿಳಿಸಿದ್ದು, ವಿದ್ಯಾರ್ಥಿಗಳು ಮತ್ತು ತಜ್ಞರು ಸರ್ಕಾರದ ಕ್ರಮಕ್ಕೆ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ. ಈ ಕ್ರಮವು ಬಡತನದ ಅಂಚಿನಲ್ಲಿರುವ ಕಟ್ಟಡ ಕಾರ್ಮಿಕರ ಮಕ್ಕಳ ಕಡಿಮೆ ಶಾಲಾ ದಾಖಲಾತಿಗೆ ಕಾರಣವಾಗಬಹುದು ಮತ್ತು ಗುಣಮಟ್ಟದ ಶಿಕ್ಷಣದಿಂದ ವಂಚಿತರಾಗಬಹುದು ಎಂದು ಸಂಬಂಧಪಟ್ಟವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. 2022–23ನೇ ಸಾಲಿನಲ್ಲಿ ಕಾರ್ಮಿಕ ಇಲಾಖೆಯು 13 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿ ವೇತನ ಅರ್ಜಿಗಳನ್ನು ಸ್ವೀಕರಿಸಿದೆ ಕೇವಲ 7 ಲಕ್ಷ ವಿದ್ಯಾರ್ಥಿಗಳನ್ನು ಫಲಾನುಭವಿಗಳಾಗಿ ಗುರುತಿಸಿದೆ ಎಂದು ಅಂಕಿ–ಅಂಶ ಹೇಳುತ್ತದೆ.

ಶಾಲಾ ಹಂತದಿಂದ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ವಿದ್ಯಾರ್ಥಿವೇತನದ ಮೊತ್ತವನ್ನು ಶೇ.80–85ರಷ್ಟು ಕಡಿತಗೊಳಿಸಲು ಇಲಾಖೆ ನಿರ್ಧರಿಸಿದೆ.

ಬಿ.ವೈ.ವಿಜಯೇಂದ್ರಗೆ ಬಿಜೆಪಿ ರಾಜ್ಯಾಧ್ಯಕ್ಷ ಪಟ್ಟ
ಮೈಸೂರಲ್ಲಿ ಬಿಜೆಪಿ ಕಾರ್ಯಕರ್ತರ ಸಂಭ್ರಮಾಚರಣೆ



ಮೈಸೂರು, ನ.11(ಆರ್‌ಕೆ)–ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಪುತ್ರ ಬಿ.ವೈ.ವಿಜಯೇಂದ್ರ ಅವರನ್ನು ಬಿಜೆಪಿ ರಾಜ್ಯಾಧ್ಯಕ್ಷರನ್ನಾಗಿ ನೇಮಿಸಿರುವ ಪ್ರಯುಕ್ತ ಮೈಸೂರಿನಲ್ಲಿ ಪಕ್ಷದ ಕಾರ್ಯಕರ್ತರು ಸಿಹಿ ಹಂಚಿ ಸಂಭ್ರಮಿಸಿದರು.

ಬಿಜೆಪಿ ಕಚೇರಿಯಲ್ಲಿ ಶಾಸಕರಾದ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ ಅವರ ನೇತೃತ್ವದಲ್ಲಿ ಸಿಹಿ ವಿತರಿಸಿದ ಕಾರ್ಯಕರ್ತರು, ಬಿ.ವೈ. ವಿಜಯೇಂದ್ರ ಅವರ ಭಾವಚಿತ್ರ ಪ್ರದರ್ಶಿಸಿ ವಿಜಯೋತ್ಸವ ಆಚರಿಸಿದರು. ಮುಂದೆ ಪಕ್ಷ ಸಂಘಟನೆ ಮತ್ತು ಲೋಕಸಭಾ ಚುನಾವಣೆಯಲ್ಲಿ ಅತೀ ಹೆಚ್ಚು ಸ್ಥಾನ ಗಳಿಸುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರ ಕೈ ಬಲಪಡಿಸಲು ನೂತನ ರಾಜ್ಯಾಧ್ಯಕ್ಷರು ಪ್ರೇರಣೆ ನೀಡಲಿದ್ದಾರೆ ಎಂದು ಘೋಷಣೆಗಳನ್ನು ಕೂಗಿದರು.

ರಾಜ್ಯದ ಯುವ ಕಾರ್ಯಕರ್ತರನ್ನು ಹುರಿದುಂಬಿಸಿ ಪಕ್ಷದ ಬಲವರ್ಧನೆಗೆ ರಾಜ್ಯಾಧ್ಯಕ್ಷರು ತಂದೆ ಬಿ.ಎಸ್. ಯಡಿಯೂರಪ್ಪ ಅವರ ಸಲಹೆ, ಮಾರ್ಗದರ್ಶನ ಮತ್ತು ಅನುಭವದಿಂದಾಗಿ ಮತ್ತೆ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರಲು ಶ್ರಮಿಸುವ ವಿಶ್ವಾಸವಿದೆ ಎಂದು ಶ್ರೀವತ್ಸ ಇದೇ ಸಂದರ್ಭ ನುಡಿದರು. ನಗರ ಬಿಜೆಪಿ ಪ್ರಧಾನ ಕಾರ್ಯದರ್ಶಿ ಸೋಮಸುಂದರ್, ಉಪ ಮೇಯರ್ ಡಾ. ರೂಪಾ, ಮುಖಂಡರಾದ ಮೈ.ವಿ. ರವಿಶಂಕರ್, ಮೋಹನ್, ಗಿರಿಧರ್, ಪ್ರದೀಪ್‌ಕುಮಾರ್, ಜಯರಾಮು, ಜಯಶಂಕರ್ ಸೇರಿದಂತೆ ಹಲವರು ವಿಜಯೋತ್ಸವದಲ್ಲಿ ಪಾಲ್ಗೊಂಡಿದ್ದರು.

ಗಿಚ್ಚಿ ಗಿಲಿಗಿಲಿ ಹಾಸ್ಯ ಕಲಾವಿದರಿಂದ ನಗೆ ಪ್ರಹಸನ; ಪಾಂಡವಪುರ ನಾಗಲಿಂಗೇಗೌಡರಿಂದ ಕರೋಕೆ ಪ್ರದರ್ಶನ

ಮೈಸೂರು, ನ.11(ಎಸ್‌ಪಿಎನ್)– ಗಿಚ್ಚಿ ಗಿಲಿಗಿಲಿ ಹಾಸ್ಯ ಕಲಾವಿದರಿಂದ ನಗೆ ಪ್ರಹಸನ ಕಾರ್ಯಕ್ರಮ ಹಾಗೂ ಪಾಂಡವಪುರ ನಾಗಲಿಂಗೇಗೌಡರ ಕರೋಕೆ ಪ್ರದರ್ಶನ ಪ್ರೇಕ್ಷಕರ ಮನಸೂರೆಗೊಂಡಿತು.

ಮೈಸೂರು ಕಲಾಮಂದಿರದಲ್ಲಿ ರೋಟರಿ ಮೈಸೂರು ಉತ್ತರ ಹಾಗೂ ಕದಂಬ ರಂಗವೇದಿಕೆಯಿಂದ ಆಯೋಜಿಸಿದ್ದ ನಗೆ ಪ್ರಹಸನ ಮತ್ತು ಕರೋಕೆ ಕಾರ್ಯಕ್ರಮಕ್ಕೂ ಮುನ್ನ ವೇದಿಕೆ ಕಾರ್ಯಕ್ರಮದಲ್ಲಿ ಜಿಲ್ಲಾ ಗವರ್ನರ್ ರೊ. ಹೆಚ್.ಆರ್.ಕೇಶವ್ ಮಾತನಾಡಿದರು.

ಒಂದು ಸಂಘಟನೆಯ ನಾಯಕತ್ವ ವಹಿಸಿಕೊಂಡಾಗ ಅಡ್ಡಮಾರ್ಗದಲ್ಲಿ ಚಿಂತಿಸುವುದು ಬೇಡ. ಇದು ನಮ್ಮ ಸಂಘಟನೆಯಿಂದ ಕಲಿತ ಪಾಠ. ಹಾಗಾಗಿ ಯಾವುದೇ ರೋಟರಿ ಕಾರ್ಯಕ್ರಮ ಎಂದರೆ ಸಾಮೂಹಿಕ ನಾಯಕತ್ವದಲ್ಲಿ ಸಂಘಟನೆಯ ಯಶಸ್ಸು ಕಂಡಿದ್ದೇವೆ ಎಂದರಲ್ಲದೆ, ರೋಟರಿ ಅಂತರರಾಷ್ಟ್ರೀಯ ಮಟ್ಟದಲ್ಲಿ ದೊಡ್ಡ ಸೇವಾ ಸಂಸ್ಥೆಯಾಗಿದ್ದು, ಇಂದು ಜಗತ್ತಿನಾದ್ಯಂತ 220ಕ್ಕೂ ಹೆಚ್ಚು ರಾಷ್ಟ್ರಗಳಲ್ಲಿ 46 ಸಾವಿರಕ್ಕೂ ಹೆಚ್ಚು ಸಂಸ್ಥೆಗಳೊಂದಿಗೆ 1.4 ಮಿಲಿಯನ್ ಸದಸ್ಯರನ್ನು ಹೊಂದಿದ್ದು, ರೋಟರಿ ಸಂಸ್ಥೆಯು ಅಂತರರಾಷ್ಟ್ರೀಯ ವಿದ್ಯಾರ್ಥಿ ವೇತನ, ಸಾಂಸ್ಕೃತಿಕ ವಿನಿಮಯ ಮತ್ತು ಮಾನವೀಯ ಸೇವಾ ಕಾರ್ಯಗಳ ಮೂಲಕ ಸೇವೆಯಲ್ಲಿ ನಿರತವಾಗಿದ್ದು, ಇಂದಿನ ಕಾರ್ಯಕ್ರಮದಲ್ಲಿ ರೋಟರಿ ಮೈಸೂರು ಉತ್ತರ ಮತ್ತು ಕದಂಬ ರಂಗವೇದಿಕೆ ಸಹಯೋಗದೊಂದಿಗೆ ಕಾರ್ಯಕ್ರಮ ಆಯೋಜಿಸಿರುವುದು ಉತ್ತಮ ಸಂಗತಿ ಎಂದರು.

ರೋಟರಿ ಮೈಸೂರು ಉತ್ತರ ಸಂಸ್ಥೆಯು 1983ರಲ್ಲಿ ಆರಂಭಗೊಂಡು 41 ವರ್ಷಗಳಿಂದ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಶಿಷ್ಯವೇತನ, ಆರೋಗ್ಯ, ಸ್ವಚ್ಛತಾ ಕಾರ್ಯಕ್ರಮ ಆಯೋಜನೆ ಹಾಗೂ ವಿವಿಧ ಕ್ಷೇತ್ರದ ಸಾಧಕರನ್ನು ಗುರುತಿಸಿ ಸನ್ಮಾನ ಹಾಗೂ ಮಹಿಳಾ ಸಬಲೀಕರಣಕ್ಕಾಗಿ ಹಲವು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದರು.

ಈ ವೇಳೆ ರೋಟರಿ ಜಿಲ್ಲಾ ಯೋಜನೆಗಳ ಕಾರ್ಯಾಧ್ಯಕ್ಷ ರೊ.ಸತೀಶ್ ಬೊಳಾರ್, ರೋಟರಿ ಮೈಸೂರು ಉತ್ತರ ಅಧ್ಯಕ್ಷ ರೊ.ಎಂ.ಕೆ.ಶ್ರೀಧರ್, ಸಹಾಯಕ ಗವರ್ನರ್ ರೊ.ಎಂ.ಕೆ.ನಂಜಯ್ಯ, ವಲಯ ಸೇನಾನಿ ರೊ. ಎಸ್.ಎಚ್. ಜಗದೀಶ್, ಕಾರ್ಯಕ್ರಮ ಸಮಿತಿ ಅಧ್ಯಕ್ಷ ರೊ.ಎಂ.ರಾಜು, ಸಂಚಾಲಕ ರೊ. ರಾಜಶೇಖರ ಕದಂಬ, ಕಾರ್ಯದರ್ಶಿ ರೊ.ರಾಜು ಇತರೆ ಸದಸ್ಯರಿದ್ದರು. ವೇದಿಕೆ ಕಾರ್ಯಕ್ರಮದ ನಂತರ ಗಿಚ್ಚಿಗಿಲಿಗಿಲಿ ತಂಡದ ಕಲಾವಿದರ ನಗೆಪ್ರಹಸನ, ಪಾಂಡವಪುರದ ನಾಗಲಿಂಗೇಗೌಡರಿಂದ ಕರೋಕೆ ಗಾಯನ ನಡೆಸಿಕೊಟ್ಟರು.



ರೋಟರಿ ಮೈಸೂರು ಉತ್ತರ ಕದಂಬ ರಂಗವೇದಿಕೆ ಸಹಯೋಗದೊಂದಿಗೆ ಆಯೋಜಿಸಿದ್ದ ಗಿಚ್ಚಿ ಗಿಲಿ ಗಿಲಿ ತಂಡದ ಕಲಾವಿದರ ನಗೆ ಪ್ರಹಸನ ಉದ್ಘಾಟಿಸಲಾಯಿತು. ರೋಟರಿ ಜಿಲ್ಲಾ ಗವರ್ನರ್ ಹೆಚ್.ಆರ್.ಕೇಶವ್. ಸತೀಶ್ ಬೋಳಾರ್, ಎಂ.ಕೆ.ಶ್ರೀಧರ್, ರಾಜಶೇಖರ ಕದಂಬ, ಎಂ.ಕೆ.ನಂಜಯ್ಯ, ಎಂ.ರಾಜು,ಜಗದೀಶ್,ರಾಜು ಇದ್ದಾರೆ.

ಸರ್ಕಾರದ ಹಸ್ತಕ್ಷೇಪ: ಶ್ರೀಲಂಕಾ ಕ್ರಿಕೆಟ್ ಮಂಡಳಿ ಸದಸ್ಯತ್ವ ಅಮಾನತುಗೊಳಿಸಿದ ಐಸಿಸಿ

ದುಬೈ, ನ.11– ಶ್ರೀಲಂಕಾ ಸರ್ಕಾರದ ಹಸ್ತಕ್ಷೇಪದಿಂದಾಗಿ ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ(ಐಸಿಸಿ) ಶುಕ್ರವಾರ ಶ್ರೀಲಂಕಾ ಕ್ರಿಕೆಟ್ (ಎಸ್‌ಎಲ್‌ಸಿ)ನ ಸದಸ್ಯತ್ವವನ್ನು ಅಮಾನತುಗೊಳಿಸಿದೆ. ಐಸಿಸಿಯ ಈ ನಿರ್ಧಾರದಿಂದ ಭಾರತದ ನೆರೆಯ ರಾಷ್ಟ್ರವಾದ ಶ್ರೀಲಂಕಾ ತಂಡ ಇನ್ನು ಮುಂದೆ ಅಂತಾರಾಷ್ಟ್ರೀಯ ಪಂದ್ಯವನ್ನಾಡಲು ಸಾಧ್ಯವಾಗುವುದಿಲ್ಲ. ಭಾರತದಲ್ಲಿ ನಡೆಯುತ್ತಿರುವ ವಿಶ್ವಕಪ್‌ನಲ್ಲಿ ಕಳಪೆ ಪ್ರದರ್ಶನ ತೋರಿದ ನಂತರ ಶ್ರೀಲಂಕಾ ಸರ್ಕಾರ, SLC ಅನ್ನು ವಜಾಗೊಳಿಸಿತ್ತು. ಲಂಕಾ ಸರ್ಕಾರದ ಈ ಹಸ್ತಕ್ಷೇಪ ಐಸಿಸಿ ನಿಯಮಗಳಿಗೆ ವಿರುದ್ಧವಾಗಿದ್ದು, ಶ್ರೀಲಂಕಾ ಕ್ರಿಕೆಟ್ ಮಂಡಳಿಯನ್ನು ಅಮಾನತುಗೊಳಿಸುವ ನಿರ್ಧಾರಕ್ಕೆ ಬರಲಾಗಿದೆ.

ಶ್ರೀಲಂಕಾ ವಿಶ್ವಕಪ್‌ನಲ್ಲಿ ಒಂಬತ್ತು ಪಂದ್ಯಗಳಲ್ಲಿ ಏಳರಲ್ಲಿ ಸೋತಿತ್ತು.

ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿಯು ತಕ್ಷಣದಿಂದ ಜಾರಿಗೆ ಬರುವಂತೆ ಶ್ರೀಲಂಕಾ ಕ್ರಿಕೆಟ್‌ನ ಐಸಿಸಿ ಸದಸ್ಯತ್ವವನ್ನು ಅಮಾನತುಗೊಳಿಸಿದೆ ಎಂದು ಐಸಿಸಿ ಪ್ರಕಟಣೆಯಲ್ಲಿ ತಿಳಿಸಿದೆ.

ಚಾಮುಂಡಿಬೆಟ್ಟದ ತಪ್ಪಲ ಚಿತಾಗಾರ ಜಲಮಯ; ಶಾಸಕ ಶ್ರೀವತ್ಸ, ಮೇಯರ್ ಶಿವಕುಮಾರ್ ಸ್ಥಳ ಪರಿಶೀಲನೆ

ತ್ವರಿತವಾಗಿ ಸಮಸ್ಯೆ ನಿವಾರಣೆಗೆ ಸೂಚನೆ



ಮೈಸೂರು, ನ.11(ಎಸ್‌ಪಿಎನ್)– ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಕಳೆದ ಮೂರ್ನಾಲ್ಕು ದಿನಗಳಿಂದ ಸುರಿಯುತ್ತಿರುವ ಧಾರಾಕಾರ ಮಳೆಗೆ ಜಲಾವೃತವಾಗಿದ್ದ ಹರಿಶ್ಚಂದ್ರ ಘಾಟ್ ಚಿತಾಗಾರಕ್ಕೆ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ, ಮೇಯರ್ ಶಿವಕುಮಾರ್, ನಗರ ಪಾಲಿಕೆ ಸದಸ್ಯ ಬಿ.ವಿ.ಮಂಜುನಾಥ್ ಹಾಗೂ ನಗರ ಪಾಲಿಕೆ ಅಧಿಕಾರಿಗಳೊಂದಿಗೆ ಶುಕ್ರವಾರ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಧಾರಾಕಾರ ಮಳೆಯಿಂದಾಗಿ 26 ದಹನದ ಕಟ್ಟೆಗಳನ್ನು ಹೊಂದಿರುವ ಈ ಚಿತಾಗಾರದಲ್ಲಿ 18 ಕಟ್ಟೆಗಳು ಜಲಾವೃತ್ತವಾಗಿದೆ. ಅದರಲ್ಲಿ ಅಂತ್ಯಸಂಸ್ಕಾರ ಮಾಡುವ ಸ್ಥಳದಲ್ಲಿ ಹಾಲು–ತುಪ್ಪ ಕ್ರಿಯಾದಿಗಳನ್ನು ನೆರವೇರಿಸಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿ ಜನರು ಪರದಾಡುವ ಪರಿಸ್ಥಿತಿಯಿದ್ದು, ಈ ನಿಮಿತ್ತ ಅಧಿಕಾರಿಗಳೊಂದಿಗೆ ಶಾಸಕ ಟಿ.ಎಸ್.ಶ್ರೀವತ್ಸ ಸೇರಿದಂತೆ ಇತರರು ಭೇಟಿ ನೀಡಿ, ಇಲ್ಲಿನ ಸಮಸ್ಯೆ ವೀಕ್ಷಿಸಿದರು. ನಂತರ ಶಾಸಕ ಟಿ.ಎಸ್.ಶ್ರೀವತ್ಸ ಮಾಧ್ಯಮಗಳೊಂದಿಗೆ ಮಾತನಾಡಿ, ಸರ್ವೆ ನಂ 71ರಲ್ಲಿ ಇರುವ ಈ ಚಿತಾಗಾರದ ಸುತ್ತಲೂ ಖಾಸಗಿಯವರ ನಿವೇಶನ ಅಭಿವೃದ್ಧಿಪಡಿಸಲಾಗಿದೆ. ಸ್ಮಶಾನದ ಜಾಗವು ಇಳಿಜಾರಿನಲ್ಲಿರುವುದರಿಂದ ಹೊರಭಾಗದಿಂದ ಬರುವ ಮಳೆ ನೀರು ಚಿತಾಗಾರ ಒಳ ಪ್ರವೇಶಿಸಿ ಸ್ಮಶಾನದ ಜಾಗವು ಜಲಾವೃತ್ತವಾಗಿದೆ. ಈ ನೀರು ಹೊರಹಾಕಲು ನಗರಪಾಲಿಕೆಯ ಸಿಬ್ಬಂದಿ ಪರದಾಡಬೇಕಾದ ಪರಿಸ್ಥಿತಿ ಇತ್ತು ಎಂದು ತಿಳಿಸಿದರು.

ಸ್ಮಶಾನದ ಜಾಗವನ್ನು ಸರ್ವೆ ಅಧಿಕಾರಿಗಳಿಂದ ಸರ್ವೆ ಮಾಡಿಸಿ ಒತ್ತುವರಿಯಾಗಿದ್ದರೆ ಅದನ್ನು ಜಿಲ್ಲಾಡಳಿತಕ್ಕೆ ಮರುವಶಪಡಿಸಿಕೊಂಡು ಮಳೆನೀರಿನ ಚರಂಡಿ ನಿರ್ಮಾಣ ಮಾಡುವಂತೆ ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಸೂಚಿಸಿರುವುದಾಗಿ ತಿಳಿಸಿದ ಶಾಸಕರು, ಮಳೆ ನೀರು ನಿಂತು ಹಾಳಾಗಿರುವ ದಹನ ಕಟ್ಟೆಗಳ ಸುತ್ತ ಫ್ಲೋರಿಂಗ್ ಮಾಡುವ ಕೆಲಸವನ್ನು ತುರ್ತಾಗಿ ಮಾಡುವಂತೆ ಅಧಿಕಾರಿಗಳಿಗೆ ಮನವಿ ಮಾಡಲಾಗಿದೆ. ಅಲ್ಲದೆ, ಸ್ಮಶಾನದ ಹಿಂಭಾಗದ ಜಾಗದಲ್ಲಿ ಗೃಹ ನಿರ್ಮಾಣಕ್ಕಾಗಿ ಮುಡಾದಿಂದ ಅನುಮೋದನೆ ಪಡೆಯಲಾಗಿದ್ದು, ಅಲ್ಲಿನ ಮಳೆನೀರಿನ ಚರಂಡಿಗೆ ಇಲ್ಲಿ(ಚಿತಾಗಾರದ ಜಾಗದಲ್ಲಿನ)ನ ಚರಂಡಿ ನೀರಿನ ಸಂಪರ್ಕ ಕಲ್ಪಿಸಿ, ಮುಂದಿನ ದಿನಗಳಲ್ಲಿ ಈ ಸಮಸ್ಯೆ ಪುನರಾವರ್ತನೆ ಆಗದಂತೆ ನೋಡಿಕೊಳ್ಳುವುದು ಅಧಿಕಾರಿಗಳ ಕರ್ತವ್ಯ ಎಂದರು.

ಈ ಚಿತಾಗಾರದಲ್ಲಿ ನೀರು ತುಂಬಿಕೊಂಡಿದ್ದ ಹಿನ್ನೆಲೆಯಲ್ಲಿ ಸಾರ್ವಜನಿಕರು, ಶವ ಸಂಸ್ಕಾರ ಮಾಡಲು ಸಾಧ್ಯವಾಗದೇ ಇರುವುದನ್ನು ಕಂಡ ಶಾಸಕರು, ತಕ್ಷಣವೇ ಪಂಪ್ ತರಿಸಿ ನೀರನ್ನು ಹೊರಹಾಕಿಸಿ, ಶವ ಸಂಸ್ಕಾರಕ್ಕೆ ಅನುವು ಮಾಡಿಕೊಡಬೇಕು. ಶವ ಸಂಸ್ಕಾರದ ಜಾಗದಲ್ಲಿ ತ್ಯಾಜ್ಯಗಳು ಎಲ್ಲೆಂದರಲ್ಲಿ ಬಿದ್ದಿರುವುದನ್ನು ಕಂಡ ಶಾಸಕರು, ಚಿತಾಗಾರ ನಿರ್ವಹಣೆ ಮಾಡುತ್ತಿರುವ ಗುತ್ತಿಗೆದಾರನಿಗೆ ಸೂಚಿಸಿ, ಈ ಸ್ಥಳದಲ್ಲಿ ಸದಾ ಸ್ವಚ್ಛತೆ ಕಾಪಾಡುವಂತೆ ನಿರ್ದೇಶಿಸಿದರು.

ಈ ಜಾಗವನ್ನು ಅಭಿವೃದ್ಧಿಪಡಿಸುವ ಸಲುವಾಗಿ ಶಾಸಕರ ಪ್ರದೇಶಾಭಿವೃದ್ಧಿ ನಿಧಿಯಿಂದ ಒಂದು ಕೋಟಿ ರೂ. ಮಂಜೂರು ಮಾಡಿ, ಅಭಿವೃದ್ಧಿ ಪಡಿಸಲಾಗುವುದು. ಚಿತಾಗಾರ ಅಭಿವೃದ್ಧಿಗೆ ಆದ್ಯತೆ ಮೇರೆಗೆ ಅವಶ್ಯವಿರುವ ಕೆಲಸಗಳನ್ನು ಮೊದಲು ಕೈಗೆತ್ತಿಕೊಂಡು ಆದಷ್ಟು ಶೀಘ್ರವಾಗಿ ಮುಗಿಸಬೇಕು. ಅಲ್ಲದೆ, ಅಭಿವೃದ್ಧಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯರೊಂದಿಗೆ ಚರ್ಚಿಸಿ ಹೆಚ್ಚಿನ ಅನುದಾನ ಬಿಡುಗಡೆಗೆ ಶ್ರಮಿಸಲಾಗುವುದು ಎಂದರು.

ಈ ವೇಳೆ ಸೂಪರಿಂಟೆಂಡೆಂಟ್ ಇಂಜಿನಿಯರ್ ಸಿಂಧೂ, ಕಾರ್ಯಪಾಲಕ ಇಂಜಿನಿಯರ್ ನಾಗರಾಜು, ವಲಯ ಕಚೇರಿ –1ರ ಅಭಿವೃದ್ಧಿ ಅಧಿಕಾರಿ ಸುಶ್ರುತ್, ಕೊಳಚೆ ನಿರ್ಮೂಲನೆ ಮತ್ತು ಒಳಚರಂಡಿ ಮಂಡಳಿಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಧನುಷ್, ಬಿಜೆಪಿ ಜಿಲ್ಲಾ ಒಬಿಸಿ ಮುಖಂಡರಾದ ಜೋಗಿ ಮಂಜು, ಪ್ರದೀಪ್‌ಕುಮಾರ್, ಕಿಶೋರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಕೊಡವ ಲ್ಯಾಂಡ್ ಜಿಯೋ-ರಾಜಕೀಯ ಸ್ವಾಯತ್ತತೆಗೆ ಆಗ್ರಹ

ಕೊಡವ ನ್ಯಾಷನಲ್ ಕೌನ್ಸಿಲ್ ಹೋರಾಟಕ್ಕೆ ಶೀಘ್ರ ಜಯ

ಸಿಎನ್‌ಸಿಯ ಐದು ಹಂತಗಳ ಪಾದಯಾತ್ರೆ ಮುಕ್ತಾಯ

● ನ.26ಕ್ಕೆ ಕೊಡವ ನ್ಯಾಷನಲ್ ಡೇ ಆಚರಣೆ

● ಕೇಂದ್ರ ಮಾಜಿ ಸಚಿವ ಡಾ.ಸುಬ್ರಮಣಿಯನ್ ಸ್ವಾಮಿ ಭಾಗಿ



ಮಡಿಕೇರಿ,ನ.11– ಕೊಡವ ಲ್ಯಾಂಡ್ ಜಿಯೋ-ರಾಜಕೀಯ ಸ್ವಾಯತ್ತತೆಯ ಪರ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ನಡೆಸುತ್ತಿರುವ ಶಾಂತಿಯುತ ಹೋರಾಟಕ್ಕೆ ಶೀಘ್ರ ಜಯ ಸಿಗಲಿದೆ ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು. ನಾಚಪ್ಪ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಪಾಡಿನಾಡ್–ಪಾಡಿ ಶ್ರೀ ಇಗ್ಗುತ್ತಪ್ಪ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದ ಅವರು ಕುಂಜಿಲ ಕಕ್ಕಬ್ಬೆ 'ಕೆಂಜರಾಣೆ ಪಾಡಿನಾಡ್ ಮಂದ್'ನಲ್ಲಿ ಕೊಡವ ಜಾಗೃತಿ ಸಭೆಯ ಮೂಲಕ ಸಿಎನ್‌ಸಿ ಸಂಘಟನೆಯ ಐದು ಹಂತಗಳ ಪಾದಯಾತ್ರೆಯನ್ನು ಮುಕ್ತಾಯಗೊಳಿಸಿದರು. ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಕೊಡಗಿನ ಆದಿಮಸಂಜಾತ ಕೊಡವ ಜನಾಂಗಕ್ಕೆ ಸಂವಿಧಾನಡಿ ಕೊಡವ ಲ್ಯಾಂಡ್ ಜಿಯೋ–ರಾಜಕೀಯ ಸ್ವಾಯತ್ತತೆಯ ಮೂಲಕ ಮಾತ್ರ ಭದ್ರತೆ ಸಿಗಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಕೊಡವ ಲ್ಯಾಂಡ್‌ಗಾಗಿ ಶಾಂತಿಯುತ ಹೋರಾಟ ಮುಂದುವರೆಯಲಿದೆ. ಕೊಡವ ಲ್ಯಾಂಡ್ ಭೂ–ರಾಜಕೀಯ ಸ್ವಾಯತ್ತತೆ ನೀಡಬೇಕು ಎನ್ನುವುದು ನಮ್ಮ ಪ್ರಮುಖ ಬೇಡಿಕೆಯಾಗಿದ್ದು, ಖ್ಯಾತ ಅರ್ಥಶಾಸ್ತ್ರಜ್ಞ ಹಾಗೂ ಕೇಂದ್ರ ಮಾಜಿ ಸಚಿವ ಡಾ.ಸುಬ್ರಮಣಿಯನ್ ಸ್ವಾಮಿ ಅವರು ಹೈಕೋರ್ಟ್‌ನಲ್ಲಿ ಈ ಕುರಿತು ಅರ್ಜಿ ಸಲ್ಲಿಸಿ ನಮ್ಮ ಪರವಾಗಿ ಕಾನೂನು ಹೋರಾಟ ನಡೆಸುತ್ತಿದ್ದಾರೆ. ಹಿರಿಯರಾದ ಸ್ವಾಮಿ ಅವರು ನಮಗೆ ಸ್ಫೂರ್ತಿಯಾಗಿದ್ದು, ಅವರಿಂದ ಪ್ರೇರಣೆಗೊಂಡು ಅವರ ಜನ್ಮದಿನದಿಂದ ಪಾದಯಾತ್ರೆಯನ್ನು ಆರಂಭಿಸಿ ಇಂದು ಮುಕ್ತಾಯಗೊಳಿಸಲಿದ್ದೇವೆ. ಇವರ ಮಾರ್ಗದರ್ಶನದಲ್ಲಿ ಕೊಡವ ಲ್ಯಾಂಡ್‌ಗಾಗಿ ಕಾನೂನು ಹೋರಾಟ ಕೂಡ ನಡೆಯಲಿದೆ ಎಂದರು.

ಇದೇ ನ.26ರಂದು ಸಿಎನ್‌ಸಿ ವತಿಯಿಂದ ಕೊಡವ ನ್ಯಾಷನಲ್ ಡೇ ನಡೆಯಲಿದ್ದು, ಕಾರ್ಯಕ್ರಮಕ್ಕೆ ಡಾ. ಸುಬ್ರಮಣಿಯನ್ ಸ್ವಾಮಿ ಅವರು ಆಗಮಿಸಲಿದ್ದಾರೆ. ಸಮಾವೇಶದಲ್ಲಿ ಪ್ರತಿಂಯೊಬ್ಬ ಕೊಡವ, ಕೊಡವತಿಯರು ಪಾಲ್ಗೊಳ್ಳುವ ಮೂಲಕ ಸಿಎನ್‌ಸಿ ಹೋರಾಟಕ್ಕೆ ಶಕ್ತಿ ತುಂಬಬೇಕು ಎಂದು ಕರೆ ನೀಡಿದರು.

ಆದಿಮಸಂಜಾತ ಕೊಡವ ಜನಾಂಗ ತಮ್ಮ ಪೂರ್ವಜರು ನೀಡಿದ ಪೂಜನೀಯ ಭೂಮಿಯನ್ನು ಅನುಭವಿಸುತ್ತಿದ್ದಾರೆಯೇ ಹೊರತು ಯಾರೂ ದಾನವಾಗಿ ನೀಡಿಲ್ಲ. ಕೊಡಗಿನ ಮೂಲನಿವಾಸಿ ಆದಿಮಸಂಜಾತ ಕೊಡವರು ಮಾತೃಭೂಮಿ ಅನಾದಿಕಾಲದಿಂದ ಬಂದಿದ್ದು ಅನುಭವಿಸುತ್ತಿರುವ ಭೂಮಿಗೂ, ಕೊಡವರ ಭೂಮಿಗೂ ಅಜಗಜಾಂತರ ವ್ಯತ್ಯಾಸವಿದೆ. ಇಂದು ಕೊಡವರ ಅಜನ್ಮ ಹಕ್ಕಾಗಿರುವ ಜನ್ಮಭೂಮಿ ಪರರ ಪಾಲಾಗುತ್ತಿದೆ. ಈ ಬಗ್ಗೆ ಕೊಡವರು ಜಾಗೃತಗೊಳ್ಳದಿದ್ದರೆ ಅತ್ಯಂತ ಸೂಕ್ಷ್ಮ ಜನಾಂಗ ಅಪಾಯಕ್ಕೆ ಸಿಲುಕುವ ಆತಂಕವಿದೆ ಎಂದರು.

ಯೋಗಕ್ಷೇಮಕ್ಕಾಗಿ ಪೂಜೆ: ಕೊಡವ ಲ್ಯಾಂಡ್ ಹೋರಾಟದ ಪರ ಶ್ರೀ ಇಗ್ಗುತ್ತಪ್ಪ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದ ನಾಚಪ್ಪ ಅವರು, ಅರ್ಥಶಾಸ್ತ್ರಜ್ಞ ಡಾ.ಸುಬ್ರಮಣಿಯನ್ ಸ್ವಾಮಿ ಅವರ ಯೋಗಕ್ಷೇಮಕ್ಕಾಗಿ ಪ್ರಾರ್ಥಿಸಿದರು. ಇದಕ್ಕೂ ಮೊದಲು ಕಕ್ಕಬ್ಬೆಯಲ್ಲಿ ಮಾನವ ಸರಪಳಿ ನಿರ್ಮಿಸಿದ ಸಿಎನ್‌ಸಿ ಪ್ರಮುಖರು ಹಾಗೂ ಕೊಡವ, ಕೊಡವತಿಯರು ಸಿಎನ್‌ಸಿ ಹೋರಾಟಕ್ಕೆ ಬೆಂಬಲ ಸೂಚಿಸಿದರು. ನಂತರ ಪಾದಯಾತ್ರೆಯಲ್ಲಿ ಸಾಗಿದರು.

ಕಲಿಯಂಡ ಮೀನ, ಪಟ್ಟಮಾಡ ಲಲಿತಾ ಗಣಪತಿ, ನಂದಿನೆರವಂಡ ಪಾರ್ವತಿ, ಚೋಳಪಂಡ ಜ್ಯೋತಿ ನಾಣಯ್ಯ, ಅರೆಯಡ ಸವಿತ, ಕರವಂಡ ಸರಸು, ನಂದಿನೆರವಂಡ ನಿಶಾ ಅಚ್ಚಯ್ಯ, ನಂದೆಟ್ಟಿರ ಕವಿತಾ ಸುಬ್ಬಯ್ಯ, ಚೆಂಬಂಡ ಜಾನ್ ಮಂಡ ಚಿತ್ರ ರಂಜು, ಬಾಚಮಂಡ ಸೀತಾ ಪೂವಣ್ಣ, ಕಲಿಯಂಡ ಸರಸು ಮಾದಪ್ಪ, ಅಪ್ಪಾರಂಡ ಮೀರಾ ನಂಜಪ್ಪ, ಅಪ್ಪಾರಂಡ ನೀರು ನಂಜಪ್ಪ, ನಂಬುದಮಾಡ ಜಿಜು ದೇವಯ್ಯ, ಕಲಿಯಂಡ ಪ್ರಕಾಶ್, ಬಾಚಮಂಡ ರಾಜ ಪೂವಣ್ಣ, ದೇಶತಕ್ಕ ಪರದಂಡ ಸುಮನ್ ಸುಬ್ರಮಣಿ, ಅರೆಯಡ ಗಿರೀಶ್, ನಂದಿನೆರವಂಡ ವಿಜು, ಕಲ್ಯಾಟಂಡ ರಾಜ ಕುಮಾರ, ಕಳಿಯಂಡ ಸುನಂದಾ, ಕೇಟೋಳಿರ ಸನ್ನಿ ಸೋಮಣ್ಣ, ಮಾದಂಡ ಜಗ್ಗ ಮತ್ತಿತರರು ಕೊಡವ ಸಾಂಪ್ರದಾಯಿಕ ಉಡುಪಿನಲ್ಲಿ ಪಾಲ್ಗೊಂಡು ಕೊಡವ ಲ್ಯಾಂಡ್ ಪರ ಘೋಷಣೆಗಳನ್ನು ಕೂಗಿದರು.

ಪಕ್ಷಿ ಸಂಕುಲ, ವನ್ಯಜೀವಿ ಸಂರಕ್ಷಣೆ, ಪರಿಸರದ ಬಗ್ಗೆ ಪಠ್ಯಪುಸ್ತಕಗಳಲ್ಲೇ ಪಾಠವಾಗಬೇಕು

ಕೆಪಿಸಿಸಿ ವಕ್ತಾರ ಸಂಕೇತ್ ಪೂವಯ್ಯ ಅಭಿಪ್ರಾಯ



ಮಡಿಕೇರಿ,ನ.11– ಪಕ್ಷಿ ಸಂಕುಲ, ವನ್ಯಜೀವಿ ಸಂರಕ್ಷಣೆ ಮತ್ತು ಪರಿಸರದ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸುವ ದೃಷ್ಟಿಯಿಂದ ಪಠ್ಯಪುಸ್ತಕಗಳಲ್ಲೇ ಅವುಗಳನ್ನು ಅಳವಡಿಸಬೇಕಿದೆ ಎಂದು ಸಮಾಜ ಸೇವಕ ಹಾಗೂ ಕೆಪಿಸಿಸಿ ವಕ್ತಾರ ಸಂಕೇತ್ ಪೂವಯ್ಯ ಅಭಿಪ್ರಾಯಪಟ್ಟಿದ್ದಾರೆ.

ಅರಣ್ಯ ಇಲಾಖೆ ವತಿಯಿಂದ ವಿರಾಜಪೇಟೆ ಸರಕಾರಿ ಜೆ.ಪಿ. ಪ್ರೌಢಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ಪಕ್ಷಿ ಹಬ್ಬ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಪರಿಸರ ಸಂರಕ್ಷಣೆಯಲ್ಲಿ ಪಕ್ಷಿಗಳು ಮಹತ್ತರ ಕೊಡುಗೆ ನೀಡುತ್ತವೆ. ದೇಶದಲ್ಲಿ 1300 ಬಗೆಯ ಪಕ್ಷಿ ಪ್ರಬೇಧಗಳು ಕಂಡು ಬರುತ್ತವೆ. ಆದರೆ ಮಾಲಿನ್ಯ, ಹವಾಮಾನ ವೈಪರೀತ್ಯಗಳಿಂದ ಪಕ್ಷಿ ಸಂಕುಲ ನಶಿಸುತ್ತಿದೆ. ಪಕ್ಷಿ ಸಂತತಿ, ವನ್ಯಜೀವಿ ಸಂರಕ್ಷಣೆ ವಿಚಾರದಲ್ಲಿ ಸಮಾಜವೂ ಹಿಂದುಳಿದಿದೆ ಎಂದು ಅವರು ವಿಷಾದ ವ್ಯಕ್ತಪಡಿಸಿದರು.

ಪಠ್ಯದಲ್ಲಿ ಅಳವಡಿಸಬೇಕು: ಅರಣ್ಯ ರಕ್ಷಣೆ, ವನ್ಯಜೀವಿ ಸಂರಕ್ಷಣೆ ಮತ್ತು ಪಕ್ಷಿ ಸಂಕುಲಗಳ ಮಾಹಿತಿ ಮತ್ತು ಅವುಗಳ ಮಹತ್ವದ ಕುರಿತು ಶಾಲಾ ಮಕ್ಕಳಿಗೆ ತಿಳಿಸಬೇಕು. ಹೀಗಾದಾಗ ಮುಂದಿನ ಪೀಳಿಗೆ ಪರಿಸರದ ಕುರಿತು ಜಾಗೃತರಾಗಲು ಸಾಧ್ಯವಾಗುತ್ತದೆ. ಆ ನಿಟ್ಟಿನಲ್ಲಿ ಪಠ್ಯಪುಸ್ತಕಗಳಲ್ಲಿಯೇ ಇವುಗಳನ್ನು ಅಳವಡಿಸಬೇಕು. ಕೇಂದ್ರ ಮತ್ತು ರಾಜ್ಯ ಸರಕಾರ ಈ ಕುರಿತು ಚಿಂತನೆ ನಡೆಸಬೇಕು ಎಂದು ಸಂಕೇತ್ ಪೂವಯ್ಯ ಸಲಹೆ ನೀಡಿದರು. ಪರಿಸರದ ಬಗ್ಗೆ ಮಾಹಿತಿ ನೀಡುವುದು ಕೇವಲ ಬೋಧನೆಗೆ ಸೀಮಿತವಾಗಬಾರದು. ಮಕ್ಕಳನ್ನು ಪ್ರಕೃತಿಯ ಮಡಿಲಿಗೆ ಕರೆದೊಯ್ಯುವ ಕೆಲಸವೂ ಆಗಬೇಕಿದೆ. ಅದಕ್ಕೆ ತಗಲುವ ವೆಚ್ಚವನ್ನು ಸರಕಾರವೇ ಭರಿಸುವ ಮೂಲಕ ತನ್ನ ಜವಾಬ್ದಾರಿಯನ್ನು ನಿಭಾಯಿಸಬೇಕೆಂದು ಸಂಕೇತ್ ಪೂವಯ್ಯ ಹೇಳಿದರು.

ವಿರಾಜಪೇಟೆ ಕ್ಷೇತ್ರದ ಶಾಸಕ ಎ.ಎಸ್.ಪೊನ್ನಣ್ಣ ಅರಣ್ಯ ಸಂರಕ್ಷಣೆ ಬಗ್ಗೆ ಕಾಳಜಿ ಹೊಂದಿದ್ದಾರೆ. ಅವರು ಮುಖ್ಯಮಂತ್ರಿ ಕಾನೂನು ಸಲಹೆಗಾರರೂ ಆಗಿದ್ದು, ಪಠ್ಯಗಳಲ್ಲಿ ಪಕ್ಷಿ ಸಂಕುಲ, ವನ್ಯಜೀವಿ ಸಂರಕ್ಷಣೆ, ಅರಣ್ಯ ರಕ್ಷಣೆಯ ವಿಚಾರಗಳನ್ನು ಪಠ್ಯಪುಸ್ತಕದಲ್ಲಿ ಅಳವಡಿಸಲು ಮುಖ್ಯಮಂತ್ರಿಗಳು, ಶಿಕ್ಷಣ ಸಚಿವರು ಮತ್ತು ಅರಣ್ಯ ಸಚಿವರ ಜೊತೆ ಚರ್ಚಿಸಬೇಕು ಎಂದರು.

ಅರಣ್ಯ, ವನ್ಯಜೀವಿ ಸಂರಕ್ಷಣೆಯಲ್ಲಿ ಕೊಡಗು ಅರಣ್ಯ ಇಲಾಖೆ ಉತ್ತಮ ರೀತಿಯಲ್ಲಿ ಕೆಲಸ ನಿರ್ವಹಿಸುತ್ತಿದೆ ಎಂದು ಇದೇ ಸಂದರ್ಭ ಸಂಕೇತ್ ಪೂವಯ್ಯ ಶ್ಲಾಘಿಸಿದರು. ಕಾರ್ಯಕ್ರಮದಲ್ಲಿ ವಿರಾಜಪೇಟೆ ಡಿಎಫ್‌ಓ ಶರಣ ಬಸಪ್ಪ, ಆರ್‌ಎಫ್‌ಓ ದೇವಯ್ಯ, ಅರಣ್ಯ ಇಲಾಖೆ ಅಧಿಕಾರಿಗಳು, ಶಾಲಾ ಮುಖ್ಯ ಶಿಕ್ಷಕ ಲಾಲ್‌ಕುಮಾರ್, ಶಿಕ್ಷಕ ವೃಂದ ಮತ್ತು ಮಕ್ಕಳು ಉಪಸ್ಥಿತರಿದ್ದರು.

ರುವಿನಾ ಗೊನ್ಸಲ್ವೇಸ್ ನಿಧನ



ನಾಪೋಕ್ಲು, ನ.11– ವಿರಾಜಪೇಟೆ ಮಹಿಳಾ ಸಮಾಜ ಹತ್ತಿರದ ನಿವಾಸಿ ಕು.ರುವಿನಾ ಗೊನ್ಸಲ್ವೇಸ್(28) ಶುಕ್ರವಾರ ನಿಧನರಾಗಿದ್ದಾರೆ.

ರುವಿನಾ ಗೊನ್ಸಲ್ವೇಸ್ ಬ್ಯಾಂಕ್ ಉದ್ಯೋಗಿ ಫ್ರಾನ್ಸಿಸ್ ಗೋನ್ಸೆಲ್ವೇಸ್ ಮತ್ತು ಶಿಕ್ಷಕಿ ರೀಟಾ ಆಲ್ವಾರೀಶ್ ದಂಪತಿಯ ಪುತ್ರಿ. ಅಂತ್ಯಕ್ರಿಯೆ ಶನಿವಾರ ವಿರಾಜಪೇಟೆ ಸಂತ ಅನ್ನಮ್ಮ ಚರ್ಚ್‌ನ ಕ್ರೈಸ್ತ ಸಮಾಧಿಯಲ್ಲಿ ನೆರವೇರಿತು.

ಕಾಫಿ ಉದ್ಯಮಿ ನರೇಂದ್ರ



ಕುಶಾಲನಗರ : ಕಾಫಿ ಉದ್ಯಮಿ ನರೇಂದ್ರ(56) ಶುಕ್ರವಾರ ನಿಧನರಾಗಿದ್ದಾರೆ. ಮೂಲತಃ ಸಿದ್ದಾಪುರದವರಾದ ಇವರು ಕುಶಾಲನಗರ ಬಳಿಯ ಕೊಪ್ಪದಲ್ಲಿ ಕಾಫಿ ಕೆಫೆ ಸೇರಿದಂತೆ ಉದ್ಯಮ ರಂಗದಲ್ಲಿ ಸಕ್ರಿಯರಾಗಿದ್ದರು. 5 ದಿನಗಳ ಹಿಂದೆ ಕಾಫಿ ಸಮ್ಮೇಳನದಲ್ಲಿ ಮಳಿಗೆ ಇಡಲು ದೆಹಲಿಗೆ ತೆರಳಿದ್ದ ನರೇಂದ್ರ ಅಲ್ಲಿನ ವಾಯು ಮಾಲಿನ್ಯದಿಂದ ತೀವ್ರ ಅಸ್ವಸ್ಥರಾಗಿದ್ದಾರೆ. ಆನಂತರ ಬೆಂಗಳೂರಿಗೆ ಬಂದ ನರೇಂದ್ರ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾದರು. ಚಿಕಿತ್ಸೆಗೆ ಸ್ಪಂದಿಸದೆ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಬೆಂಗಳೂರಿನ ಬನಶಂಕರಿ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಿತು.

ದುರ್ಬಲ ವರ್ಗದವರಿಗೂ ಉಚಿತ ಕಾನೂನಿನ ಸೌಲಭ್ಯ ದೊರಕಿಸುವುದೇ ಕಾನೂನು ಸೇವೆಗಳ ಉದ್ದೇಶ



ವಿರಾಜಪೇಟೆ: ಸಮಾಜದಲ್ಲಿ ದುರ್ಬಲ ವರ್ಗದವರಿಗೂ ಉಚಿತ ಕಾನೂನಿನ ಸೌಲಭ್ಯಗಳು ದೊರಕುವಂತೆ ಮಾಡುವುದೇ ಕಾನೂನು ಸೇವೆಗಳ ಉದ್ದೇಶವಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಆರ್. ಮಂಜುನಾಥ್ ತಿಳಿಸಿದರು.

'ರಾಷ್ಟ್ರೀಯ ಕಾನೂನು ಸೇವೆಗಳ ದಿನಾಚರಣೆ' ಅಂಗವಾಗಿ ತಾಲೂಕು ಕಾನೂನು ಸೇವೆಗಳ ಸಮಿತಿ ಹಾಗೂ ವಿರಾಜಪೇಟೆ ವಕೀಲರ ಸಂಘದ ಸಂಯುಕ್ತಾಶ್ರಯದಲ್ಲಿ ವಕೀಲರ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಕಾನೂನು ಅರಿವು ಶಿಬಿರದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ, ರಾಷ್ಟ್ರೀಯ ಕಾನೂನು ಸೇವೆಗಳ ದಿನಾಚರಣೆ 1995ರಲ್ಲಿ ಜಾರಿಗೆ ಬಂದು ಅಂದಿನಿಂದ ಎಲ್ಲಾ ಕಟ್ಟಕಡೆಯ ಜನರಿಗೂ ಉಚಿತ ಕಾನೂನು ಸೌಲಭ್ಯಗಳು ದೊರಕುತ್ತಿದೆ ಎಂದರು.

ಪ್ರತಿಯೊಬ್ಬರು ಉಚಿತ ಕಾನೂನಿನ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳುವಂತಾಗಬೇಕು. ನ್ಯಾಯಾಲಯದಲ್ಲಿರುವ ಹೆಚ್ಚು ಪ್ರಕರಣಗಳು ರಾಜಿ ಸಂಧಾನದ ಮೂಲಕ ಇತ್ಯರ್ಥಗೊಳ್ಳುವಂತಾಗಬೇಕು ಎಂದರು.

ವಕೀಲರ ಸಂಘದ ಅಧ್ಯಕ್ಷ ಕೆ.ಜಿ.ಅಪ್ಪಣ್ಣ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಕಾನೂನು ಸೇವೆಗಳ ದಿನಾಚರಣೆ ಅಂಗವಾಗಿ ವಿರಾಜಪೇಟೆ ವಕೀಲರ ಸಂಘದ ವತಿಯಿಂದ ಗ್ರಾಮೀಣ ಪ್ರದೇಶದ ಜನರಿಗೂ ಉಚಿತ ಕಾನೂನಿನ ಅರಿವು ಕಾರ್ಯಕ್ರಮವನ್ನು ಪ್ರತಿ ತಿಂಗಳ 2ನೇ ಶನಿವಾರ ಮತ್ತು 4ನೇ ಶನಿವಾರ ಹಮ್ಮಿಕೊಳ್ಳುವುದಾಗಿ ತಿಳಿಸಿದರು.

ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಸಂತೋಷ ಕೊಠಾರಿ, ಅಪರ ಸಿವಿಲ್ ನ್ಯಾಯಾಧೀಶರಾದ ಪ್ರದೀಪ ಪೋತದಾರ ಸಭೆಯನ್ನುದ್ದೇಶಿಸಿ ಮಾತನಾಡಿದರು

ಹಿರಿಯ ವಕೀಲರಾದ ಎನ್.ಜಿ.ಕಾಮತ್, ಎಂ.ಎಂ.ನಂಜಪ್ಪ, ಕೆ.ಪೂವಣ್ಣ ಅವರುಗಳು ಮಾತನಾಡಿ, ಪ್ರತಿಯೊಬ್ಬರು ಉಚಿತ ಕಾನೂನು ಸೌಲಭ್ಯ ಪಡೆದುಕೊಳ್ಳುವಂತೆ ಹೇಳಿದರು. ನ್ಯಾಯಾಲಯದ ಸಿಬ್ಬಂದಿ ಎಸ್.ಬಿ.ಮಂಜುನಾಥ್ ಸ್ವಾಗತಿಸಿದರು. ವಕೀಲರಾದ ಸಿಂಧೂರ ಎನ್.ಸ್ವಾಮಿ ನಿರೂಪಿಸಿದರೆ, ಹಜೀರಾ ಶರೀಫ್ ವಂದಿಸಿದರು.

ವಾಹನ ಡಿಕ್ಕಿ : ಕಬ್ಬೆಕ್ಕು ಸಾವು



ನಾಪೋಕ್ಲು: ಅಪರೂಪದ ಕಬ್ಬೆಕ್ಕು (ಬೆರು) ಎನ್ನಲಾದ ಪ್ರಾಣಿಗೆ ವಾಹನ ಡಿಕ್ಕಿ ಹೊಡೆದ ಪರಿಣಾಮ ಅದು ಸಾವನ್ನಪ್ಪಿರುವ ಘಟನೆ ಶುಕ್ರವಾರ ರಾತ್ರಿ ಇಲ್ಲಿಗೆ ಸಮೀಪದ ಹೋದವಾಡ ಗ್ರಾಮದಲ್ಲಿ ಜರುಗಿದೆ.

ನಾಪೋಕ್ಲು – ಮೂರ್ನಾಡು ಸಂಪರ್ಕ ರಸ್ತೆಯ ಹೊದವಾಡ ಗ್ರಾಮದ ಬೊಳಿಬಾಣೆ ಎಂಬಲ್ಲಿ ಶನಿವಾರ ಕಬ್ಬೆಕ್ಕು ಮೃತದೇಹ ರಸ್ತೆಯಲ್ಲಿ ಕಂಡುಬಂದಿದ್ದು ಬಳಿಕ ಕಾಗೆ, ನಾಯಿಗಳಿಗೆ ಆಹಾರವಾಗಿದೆ.

ಈ ಪ್ರಾಣಿ ಕಾಫಿ ಹಣ್ಣು ತಿಂದು ಬೀಜಗಳನ್ನು ವಿಸರ್ಜಿಸಲಿದ್ದು, ಈ ಬೀಜ ಔಷಧೀಯ ಗುಣಗಳನ್ನು ಹೊಂದಿರುವುದರಿಂದ ಈ ಬೀಜಗಳಿಗೆ ಬೇಡಿಕೆ ಇದೆ ಎನ್ನಲಾಗುತ್ತಿದ್ದು, ಕೆಲವರು ಈ ಕಾಫಿ ಬೀಜ ಸಂಗ್ರಹಿಸಿ ಭಾರಿ ಬೆಲೆಗೆ ಮಾರಾಟ ಮಾಡಲಾಗುತ್ತಿದೆ ಎಂಬ ಮಾತುಗಳು ಕೇಳಿಬರುತ್ತಿದೆ.

ನೂತನ ಶಾಲಾ ಕೊಠಡಿಗಳ ಉದ್ಘಾಟನೆ



ಚಾಮರಾಜನಗರ,ನ.11– ತಾಲೂಕಿನ ಕೋಡಿಉಗನೆ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ನೂತನವಾಗಿ ನಿರ್ಮಿಸಲಾದ ಎರಡು ಕೊಠಡಿಗಳನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕರು, ಕ್ಷೇತ್ರ ವ್ಯಾಪ್ತಿಯಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡಿ ಅಗತ್ಯವಿರುವ ಕಡೆ ಶಾಲಾ–ಕಾಲೇಜುಗಳಿಗೆ ಕುಡಿಯುವ ನೀರು, ಕೊಠಡಿಗಳು, ಆಟದ ಮೈದಾನ, ಪೀಠೋಪಕರಣಗಳು ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲು ಹೆಚ್ಚಿನ ಆಸಕ್ತಿ ವಹಿಸಲಾಗಿದೆ. ಈ ಹಿನ್ನೆಲೆಯಲ್ಲಿ ಗ್ರಾಮಾಂತರ ಪ್ರದೇಶಗಳ ಸರ್ಕಾರಿ ಶಾಲೆಗಳ ಬಲವರ್ಧನೆಗಾಗಿ ಕೊಠಡಿಗಳು ಅಗತ್ಯವಾಗಿದೆ ಎಂದರು.

ಕ್ಷೇತ್ರ ವ್ಯಾಪ್ತಿಯ ಕೆಲವು ಶಾಲೆಗಳ ಕೊಠಡಿಗಳು ಹಳೆಯದಾಗಿದ್ದು ಶಿಥಿಲಾವಸ್ಥೆ ತಲುಪಿದೆ. ಅಂತಹ ಶಾಲೆಗಳನ್ನು ಗುರುತಿಸಿ ನೂತನ ಕೊಠಡಿ ನಿರ್ಮಾಣ ಸೇರಿದಂತೆ ಕಟ್ಟಡಗಳ ದುರಸ್ತಿ ಕಾರ್ಯಗಳತ್ತ ಗಮನಹರಿಸಲಾಗುವುದು. ಕಿಲ್ಲೆಯ ವಿದ್ಯಾರ್ಥಿಗಳ ಉನ್ನತ ಶಿಕ್ಷಣದ ಅಧ್ಯಯನದ ದೃಷ್ಟಿಯಿಂದ ಈಗಾಗಲೇ ವಸತಿ ಶಾಲೆಗಳು, ಕಾನೂನು ಕಾಲೇಜು, ಕೃಷಿ ಕಾಲೇಜು, ಮೆಡಿಕಲ್ ಕಾಲೇಜು, ಇಂಜಿನಿಯರಿಂಗ್ ಕಾಲೇಜು ಸೇರಿದಂತೆ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಬೇಕಾದಂತಹ ಶಾಲಾ–ಕಾಲೇಜುಗಳು ನಿರ್ಮಾಣವಾಗುತ್ತಿದ್ದು ಶೈಕ್ಷಣಿಕವಾಗಿ ಜಿಲ್ಲೆಯು ಪ್ರಗತಿ ಸಾಧಿಸಿದ್ದು ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಬರುತ್ತಿರುವುದು ಇದಕ್ಕೆ ನಿದರ್ಶನವಾಗಿದೆ ಎಂದರು.

ಎಪಿಎಂಸಿ ಮಾಜಿ ಅಧ್ಯಕ್ಷ ಬಿ.ಕೆ.ರವಿಕುಮಾರ್ ಮಾತನಾಡಿ, ಪೋಷಕರು ತಮ್ಮ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಕಾಳಜಿ ವಹಿಸಿ ಶಾಲೆಗೆ ಸೇರಿದ ಮಕ್ಕಳು ಮಧ್ಯದಲ್ಲಿ ಬಿಡದಂತೆ ಎಚ್ಚರವಹಿಸಿ ಉನ್ನತ ವ್ಯಾಸಂಗದವರೆಗೂ ಸರ್ಕಾರ ಶಿಕ್ಷಣಕ್ಕೆ ಹೆಚ್ಚಿನ ಅವಕಾಶ ಕಲ್ಪಿಸಿ ಇದರ ಸದುಪಯೋಗಪಡಿಸಿಕೊಂಡು ಪ್ರತಿಯೊಬ್ಬರು ವಿದ್ಯಾವಂತ ಸುಶಿಕ್ಷಿತ ಸಮಾಜ ನಿರ್ಮಿಸುವತ್ತ ತಮ್ಮ ಗುರಿಯನ್ನು ಹೊಂದಬೇಕು ಈ ಮೂಲಕ ಮಕ್ಕಳನ್ನೇ ಆಸ್ತಿಯನ್ನಾಗಿಸಿ ಭವ್ಯ ಭಾರತದ ಏಳಿಗೆಗೆ ಶ್ರಮಿಸಬೇಕು ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಮಂಜುನಾಥ ಪ್ರಸನ್ನ, ಗ್ರಾಪಂ ಅಧ್ಯಕ್ಷೆ ರಮ್ಯನಾಗರಾಜು, ಸದಸ್ಯರಾದ ಅಕ್ಕಮಹದೇವಮ್ಮ,ಶೋಭಾ, ಶಾಲೆಯ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಮಹದೇವಯ್ಯ, ಉಪಾಧ್ಯಕ್ಷ ಶಿವಸ್ವಾಮಿ, ಎಪಿಎಂಸಿ ಮಾಜಿ ಉಪಾಧ್ಯಕ್ಷ ಪುರುಷೋತ್ತಮ್, ಗ್ರಾಮದ ಮುಖಂಡರಾದ ಬಿಸಿಲವಾಡಿರವಿ, ರಂಗಸ್ವಾಮಿ, ಶಿವಕುಮಾರ್, ಶಿವಮಲ್ಲಯ್ಯ, ರಾಘು, ಗುರುಪುತ್ತಪ್ಪ, ನಂಜಯ್ಯ, ಶಿವಸ್ವಾಮಿ, ವಾಸು, ಪ್ರಭಾರ ಮುಖ್ಯ ಶಿಕ್ಷಕ ಮಂಜುನಾಥ್, ಶ್ರೀಕಂಠಮೂರ್ತಿ, ಸಾವಿತ್ರಿಬಾಯಿಫುಲೆ ಸಂಘದ ಅಧ್ಯಕ್ಷೆ ಎಸ್.ನೇತ್ರಾವತಿ ಸೇರಿದಂತೆ ಗ್ರಾಮದ ಮುಖಂಡರು, ಗ್ರಾಮಸ್ಥರು ಹಾಜರಿದ್ದರು.

ಗ್ರಾಮಸ್ಥರ ಅಹವಾಲು ಆಲಿಸಿದ ಶಾಸಕ

ಇದೇ ಸಂದರ್ಭದಲ್ಲಿ ಗ್ರಾಮಸ್ಥರು ಶಾಸಕರಲ್ಲಿ ಆಗಬೇಕಾದ ಅಭಿವೃದ್ಧಿ ಕೆಲಸಗಳು ಹಾಗೂ ಕುಂದುಕೊರತೆಗಳ ಬಗ್ಗೆ ಅಹವಾಲು ಸಲ್ಲಿಸಿ ಬೇವಿನತಾಳಪುರ ಹೊಸ ಬಡಾವಣೆಗೆ ವಿದ್ಯುತ್ ಕಂಬ ಅಳವಡಿಸಬೇಕು ಹಾಗೂ ಗಣೇಶ ದೇವಸ್ಥಾನದ ಜೀರ್ಣೋದ್ಧಾರ ಪೂರ್ಣಗೊಳಿಸಬೇಕು ಹಾಗೂ ರಸ್ತೆ, ಚರಂಡಿ ನಿರ್ಮಿಸಿಕೊಡಬೇಕೆಂದು ಮನವಿ ಸಲ್ಲಿಸಿದರು. ಸರ್ಕಾರದ ಗೃಹಲಕ್ಷ್ಮಿ ಯೋಜನೆ ಹಣ ಪಾವತಿ ವಿಳಂಬವಾಗುತ್ತಿದ್ದು ಈ ಬಗ್ಗೆ ಗಮನಹರಿಸಬೇಕೆಂದು ಮನವಿ ಮಾಡಿದರು.

ಗ್ರಾಮಸ್ಥರ ಅಹವಾಲು ಸ್ವೀಕರಿಸಿ ಮಾತನಾಡಿ ಅಗತ್ಯ ಮೂಲಸೌಕರ್ಯ ಕಲ್ಪಿಸಲು ಕ್ರಮವಹಿಸಲಾಗುವುದು. ಸರ್ಕಾರದ ಗೃಹಲಕ್ಷ್ಮಿ ಯೋಜನೆ ಅರ್ಹ ಫಲಾನುಭವಿಗಳಿಗೆ ನೋಂದಣಿ ಹಾಗೂ ಹಣ ಪಾವತಿಗೆ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳನ್ನು ಕಳುಹಿಸಿ ಸಮಸ್ಯೆ ಪರಿಸಲಾಗುವುದು ಎಂದರು. ಇದೇ ಸಂದರ್ಭದಲ್ಲಿ ಸಮುದಾಯ ಭವನ ಕಾಮಗಾರಿಯನ್ನು ಪರಿಶೀಲಿಸಿ ಗ್ರಾಮಗಳ ಸರ್ವತೋಮುಖ ಅಭಿವೃದ್ಧಿಯೇ ನನ್ನ ಆದ್ಯತೆಯಾಗಿದೆ ಎಂದು ತಿಳಿಸಿ ಗ್ರಾಮಸ್ಥರ ಸಮಸ್ಯೆಗಳನ್ನು ಶೀಘ್ರದಲ್ಲೇ ಪರಿಹರಿಸಲಾಗುವುದೆಂದು ಭರವಸೆ ನೀಡಿದರು.

ವಿಜಯೇಂದ್ರ ಅಭಿಮಾನಿ ಬಳಗದಿಂದ ವಿಶೇಷ ಪೂಜೆ



ಚಾಮರಾಜನಗರ, ನ.11– ರಾಜ್ಯ ಬಿಜೆಪಿ ಅಧ್ಯಕ್ಷರಾಗಿ ಆಯ್ಕೆಯಾದ ಬಿ.ವೈ. ವಿಜಯೇಂದ್ರ ಅವರಿಗೆ ಶುಭ ಕೋರಿ ವಿಜಯೇಂದ್ರ ಅಭಿಮಾನಿ ಬಳಗದಿಂದ ಹರಳಿಕೋಟೆ ಆಂಜನೇಯಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿದರು.

ಹರಳು ಕೋಟೆ ಆಂಜನೇಯ ದೇವಸ್ಥಾನದಲ್ಲಿ ಸೇರಿದ ಅಭಿಮಾನಿಗಳು ಆಂಜನೇಯಸ್ವಾಮಿಗೆ ವಿಶೇಷ ಪೂಜೆ ಮಾಡಿಸಿ ವಿಜಯೇಂದ್ರ ಹೆಸರಿನಲ್ಲಿ ಅರ್ಚನೆ ಮಾಡಿಸಿ, ನಂತರ ವಿಜಯೇಂದ್ರ ಪರ ಘೋಷಣೆ ಕೂಗಿ ಅವರ ಮುಂದಿನ ರಾಜಕೀಯ ಕ್ಷೇತ್ರ ಉಜ್ವಲವಾಗಲಿ ಎಂದು ಪ್ರಾರ್ಥಿಸಿದರು.

ಈ ಸಂದರ್ಭದಲ್ಲಿ ಮಾಜಿ ತಾಪಂ ಉಪಾಧ್ಯಕ್ಷರು ದಯಾನಿಧಿ, ಮಾಜಿ ಗ್ರಾಮಾಂತರ ಮಂಡಲದ ಅಧ್ಯಕ್ಷ ಜಿ.ಪ್ರಶಾಂತ್, ವೀರಶೈವ ಮಹಾಸಭಾ ಜಿಲ್ಲಾ ಅಧ್ಯಕ್ಷ ಮೂಡ್ಲುಪುರ ನಂದೀಶ್, ಗ್ರಾಪಂ ಸದಸ್ಯ ಶಿವಾನಂದ್, ವೀರೇಂದ್ರ ಕರಿನಂಜನಪುರ, ನಲ್ಲೂರು ಪ್ರದೀಪ್, ಮಲ್ಲಿಕಾರ್ಜುನ, ಮಾಜಿ ಚುಡಾ ಸದಸ್ಯ ಕರಿನಂಜನಪುರ ಕೂಸಣ್ಣ, ಶಿವು ನಂಜೇದೇವನಪುರ, ಪ್ರದೀಪ್, ರಾಕೇಶ್ ಇತರರು ಇದ್ದರು.

ರಸ್ತೆ ಅಪಘಾತದಲ್ಲಿ ಯುವಕ ಸಾವು

ಚಾಮರಾಜನಗರ: ತಾಲೂಕಿನ ಕಿಲಗೆರೆ ಗ್ರಾಮದ ರಾಜಪ್ಪ ಅವರ ಪುತ್ರ ಚಂದ್ರಶೇಖರ್(26) ರಸ್ತೆ ಅಪಘಾತದಲ್ಲಿ ನಿಧನರಾಗಿದ್ದಾರೆ.



ಶ್ರೀರಂಗಪಟ್ಟಣದ ಬಳಿ ರಸ್ತೆ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಚಂದ್ರಶೇಖರ್ ಅವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ದಾಖಲು ಮಾಡಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೇ ಶನಿವಾರ ಮೃಪಟ್ಟಿದ್ದು, ಇಂದು(ಭಾನುವಾರ) ಸ್ವಗ್ರಾಮದಲ್ಲಿ ಮೃತರ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳಿಂದ ತಿಳಿದುಬಂದಿದೆ.

ತಂದೆ, ತಾಯಿ, ಅಕ್ಕ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದು, ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟುವಂತಿತ್ತು.

ಪ್ರಕಾಶ ಭವನದಲ್ಲಿಂದು ದೀಪಾವಳಿ ಸಂಭ್ರಮ

ಚಾಮರಾಜನಗರ, ನ.11– ಅಂತರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಪ್ರಕಾಶ ಭವನದಲ್ಲಿ ಭಾನುವಾರ (ನ.12) ಬೆಳಗ್ಗೆ 9 ಗಂಟೆಗೆ ದೀಪಾವಳಿ ಸಂಭ್ರಮದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಮುಖ್ಯ ಸಂಚಾಲಕಿ ರಾಜಯೋಗಿನಿ ಬ್ರಹ್ಮಾಕುಮಾರಿ ದಾನೇಶ್ವರೀಜೀ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಸತ್ಯ ದೀಪಾವಳಿಯ ಆಧ್ಯಾತ್ಮಿಕ ರಹಸ್ಯ ಕುರಿತು ಉಪನ್ಯಾಸವನ್ನು ಏರ್ಪಡಿಸಲಾಗಿದೆ.

ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕೋರಲಾಗಿದೆ.

ಏಕಾಗ್ರತೆ ಇದ್ದರೆ ಓದಲು ಸಹಕಾರಿ: ಮಹದೇವಪ್ಪ



ಚಾಮರಾಜನಗರ, ನ.11– ವಿದ್ಯಾರ್ಥಿಗಳು ಏಕಾಗ್ರತೆಯನ್ನು ರೂಢಿಸಿಕೊಂಡರೆ ಮಾತ್ರ ಓದಲು ಸಹಕಾರಿಯಾಗುತ್ತದೆ ಎಂದು ಬಸವರಾಜೇಂದ್ರ ಮೆಡಿಕಲ್ ಟ್ರಸ್ಟ್ ಅಧ್ಯಕ್ಷ ಮಹದೇವಪ್ಪ ಹೇಳಿದರು.

ನಗರದ ವಾಲ್ಮೀಕಿ ಭವನದಲ್ಲಿ ಬಸವರಾಜೇಂದ್ರ ನರ್ಸಿಂಗ್ ಶಾಲೆ ಮತ್ತು ಕಾಲೇಜು ಮರಿಯಾಲ ಇವರ ವತಿಯಿಂದ 2023–24ನೇ ಸಾಲಿನ ಪ್ರಥಮ ವರ್ಷದ ಜಿಎನ್‌ಎಮ್ ಮತ್ತು ಬಿಎಸ್ಸಿ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಸ್ವಾಗತ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿಗಳು ವಿದ್ಯಾಭ್ಯಾಸಕ್ಕೆ ಹೆಚ್ಚಿನ ಒತ್ತು ನೀಡಬೇಕು. ಆಯಾ ದಿನದ ಪಾಠ ಪ್ರವಚನಗಳನ್ನು ಅಂದೇ ಓದಬೇಕು. ಪ್ರಾಧ್ಯಾಪಕರು ಪಾಠ ಮಾಡುವಾಗ ಮನಸ್ಸಿಟ್ಟು ಅದನ್ನು ಕೇಳಿಸಿಕೊಳ್ಳಬೇಕು. ಏಕಾಗ್ರತೆಯನ್ನು ರೂಢಿಸಿಕೊಂಡಾಗ ಮಾತ್ರ ಉತ್ತಮ ವಿದ್ಯಾಭ್ಯಾಸವನ್ನು ಮಾಡಬಹುದು ಎಂದು ಸಲಹೆ ನೀಡಿದರು.

ಹಳೆ ವಿದ್ಯಾರ್ಥಿಗಳಿಂದ ನೂತನವಾಗಿ ಕಾಲೇಜಿಗೆ ಸೇರಿಕೊಂಡ ಮಕ್ಕಳಿಗೆ ಸ್ವಾಗತ ಸಮಾರಂಭ ಮಾಡುವುದರ ಹಿಂದೆ ಒಂದು ಸದುದ್ದೇಶವಿದೆ. ಹಳೆ ವಿದ್ಯಾರ್ಥಿಗಳು ನೂತನ ವಿದ್ಯಾರ್ಥಿಗಳಿಗೆ ರ‍್ಯಾಗಿಂಗ್‌ಗಳನ್ನು ಮಾಡದೇ, ಒಬ್ಬರನ್ನೊಬ್ಬರು ಅರಿತುಕೊಳ್ಳಬೇಕು ಎಂದು ಹಿತದೃಷ್ಟಿಯಿಂದ ಈ ಕಾರ್ಯಕ್ರಮವನ್ನು ರೂಪಿಸಲಾಗಿದೆ ಎಂದರು.

ವಿದ್ಯಾರ್ಥಿಗಳು ಉತ್ತಮ ವಿದ್ಯಾಭ್ಯಾಸ ಪಡೆದು, ಬೆಳಗ್ಗೆ 4 ಗಂಟೆಗೆ ಎದ್ದು ಓದಿಕೊಳ್ಳಿ, ಮನಸ್ಸನ್ನು ಚಂಚಲವಾಗಿಟ್ಟುಕೊಳ್ಳಬೇಡಿ. ಮೂಢನಂಬಿಕೆಗಳನ್ನು ತೊಡೆದು, ಆತ್ಮಸಾಕ್ಷಿಯಿಂದ ಕೆಲಸ ಮಾಡಿ ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಬಸವರಾಜೇಂದ್ರ ಮೆಡಿಕಲ್ ಟ್ರಸ್ಟ್‌ನ ವ್ಯವಸ್ಥಾಪಕರಾದ ಆನಂದ್, ತೇಜಸ್, ಬಸವರಾಜೇಂದ್ರ ನರ್ಸಿಂಗ್ ಶಾಲೆಯ ಪ್ರಾಂಶುಪಾಲ ಕೆ.ಎನ್.ರಾಜೇಶ್, ನದೀಂಯಾ ಜೊನಾಥನ್ ಸೇರಿದಂತೆ ಇತರರಿದ್ದರು.

ಮಹದೇಶ್ವರಬೆಟ್ಟದ ಪಾದಯಾತ್ರಿಗಳಿಗೆ ಪಾಸ್ ವಿತರಣೆ

4 ಸಾವಿರ ಅಧಿಕ ಮಂದಿಗೆ ದರ್ಶನ, ದಾಸೋಹ, ವಸತಿಗಾಗಿ ಪಾಸ್



ಹನೂರು: ಶ್ರೀ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟಕ್ಕೆ ಪಾದಯಾತ್ರೆ ಕೈಗೊಂಡಿರುವ ಪಾದಯಾತ್ರಿಗಳಿಗೆ ಪ್ರಾಧಿಕಾರದ ಕಾರ್ಯದರ್ಶಿ ಸರಸ್ವತಿ ಪಾಸ್ ವಿತರಿಸಿದರು.

ದೀಪಾವಳಿ ಜಾತ್ರಾ ಮಹೋತ್ಸವ ಪ್ರಯುಕ್ತ ಶ್ರೀ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟಕ್ಕೆ ಮೈಸೂರು, ಮಂಡ್ಯ, ರಾಮನಗರ, ಕನಕಪುರ, ಹುಲ್ಲಳ್ಳಿ, ನಂಜನಗೂಡು ಸೇರಿದಂತೆ ರಾಜ್ಯದ ವಿವಿಧ ಭಾಗಗಳಿಂದ ಸುಮಾರು 4 ಸಾವಿರಕ್ಕೂ ಹೆಚ್ಚು ಪಾದಯಾತ್ರಿಗಳು ಪಾದಯಾತ್ರೆ ಹೊರಟಿದ್ದಾರೆ.

ತಿರುಪತಿ ಮಾದರಿಯಲ್ಲಿ ಪಾದಯಾತ್ರಿಕರಿಗೆ ವಿಶೇಷ ಸೌಲಭ್ಯ ನೀಡುವ ಉದ್ದೇಶದಿಂದ ಪ್ರಾಧಿಕಾರದ ಕಾರ್ಯದರ್ಶಿ ಸರಸ್ವತಿ ಅವರು ದರ್ಶನ, ದಾಸೋಹ, ವಸತಿಗಾಗಿ ಉಚಿತ ಪಾಸ್ ವಿತರಿಸಿದರು. ಮಲೆಮಹದೇಶ್ವರ ಬೆಟ್ಟದ ಗೇಟ್ ನಂಬರ್ ಒಂದರಲ್ಲಿ ಪಾದಯಾತ್ರಿಕರಿಗೆ ಉಚಿತ ದರ್ಶನ, ದಾಸೋಹದಲ್ಲಿ ವ್ಯವಸ್ಥೆ ಹಾಗೂ ಸಂಕಮ್ಮ ನಿಲಯಗಳಲ್ಲಿ ರಾತ್ರಿ ವಾಸ್ತವ್ಯಕ್ಕೆ ವ್ಯವಸ್ಥೆ ಕಲ್ಪಿಸಲಾಗಿದೆ. ಪಾದಯಾತ್ರೆಗೆ ಈ ವ್ಯವಸ್ಥೆ ಮಾಡಿರುವುದರಿಂದ ಭಕ್ತರು ಸಂತಸ ವ್ಯಕ್ತಪಡಿಸಿದ್ದಾರೆ.

ಶ್ರೀ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟಕ್ಕೆ ಪಾದಯಾತ್ರೆ ಹೊರಟು ತಾಳು ಬೆಟ್ಟದಲ್ಲಿ ವಾಸ್ತವ್ಯ ಹೂಡಿದ್ದ ಭಕ್ತರುಗಳಿಗೆ ಉಚಿತ ರೂಮ್ ಕೊಡಲು ಕಾರ್ಯದರ್ಶಿಗಳು ಸೂಚನೆ ನೀಡಿದ್ದರು. ಆದರೆ ತಾಳುಬೆಟ್ಟದ ವಸತಿಗೃಹದ ಉಸ್ತುವಾರಿ ಸೋಮಶೇಖರ್ ಹಣ ಪಡೆದುಕೊಂಡಿದ್ದರು. ಆಕಸ್ಮಿಕವಾಗಿ ತಾಳು ಬೆಟ್ಟಕ್ಕೆ ಭೇಟಿ ನೀಡಿದ ಕಾರ್ಯದರ್ಶಿಯವರು ಭಕ್ತಾದಿಗಳನ್ನು ವಿಚಾರಿಸಿದಾಗ ರೂಮ್‌ಗಳಿಗೆ ಹಣ ಪಡೆದುಕೊಂಡಿರುವುದು ಗಮನಕ್ಕೆ ಬಂದಿದೆ ತಕ್ಷಣ ಕಾರ್ಯದರ್ಶಿ ಸರಸ್ವತಿ ಅವರು ಭಕ್ತರಿಂದ ವಸೂಲಿ ಮಾಡಿದ ಹಣವನ್ನು ವಾಪಸ್ ಕೊಡಿಸಿದ್ದಾರೆ.

ಕಳೆದ ಹತ್ತು ವರ್ಷಗಳಿಂದ ನಾವು ಮಲೆ ಮಹದೇಶ್ವರ ಬೆಟ್ಟಕ್ಕೆ ಪಾದಯಾತ್ರೆ ಹೋಗುತ್ತಿದ್ದೇವೆ. ಆದರೆ ಈ ಬಾರಿ ಪ್ರಾಧಿಕಾರದ ವತಿಯಿಂದ ದರ್ಶನ, ವಸತಿ, ವಾಸ್ತವಕ್ಕೆ ವ್ಯವಸ್ಥೆ ಕಲ್ಪಿಸಿರುವುದರಿಂದ ಸಂತಸವಾಗಿದೆ ಎಂದು ಮಾವಿನಹಳ್ಳಿ ಗ್ರಾಮದ ರಂಗರಾಜು, ಸುದೀಪ್, ಅರವಿಂದ್, ಪುಟ್ಟಮ್ಮ ಬಂಗಾರಿ, ಸಿದ್ದಪ್ಪ, ಮಲೆಯೂರು ಗ್ರಾಮದ ಗುರುಸ್ವಾಮಿ, ದ್ರಾಕ್ಷಾಯಿಣಿ ತಿಳಿಸಿದ್ದಾರೆ.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಭೂಮಿ ಪೂಜೆ



ಯಳಂದೂರು: ತಾಲೂಕಿನ ಶಿವಕ್ಕಳ್ಳಿ, ಎ.ದೇವರಹಳ್ಳಿ, ಟಿ.ಹೊಸೂರು ಗ್ರಾಮದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎ.ಆರ್.ಕೃಷ್ಣಮೂರ್ತಿ ಶನಿವಾರ ಭೂಮಿಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಈ ರಸ್ತೆ ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿತ್ತು. ಒಟ್ಟು 1.5 ಕೋಟಿ ರೂ. ವೆಚ್ಚದ ರಸ್ತೆಗೆ ಪ್ರಥಮ ಕಂತಿನಲ್ಲಿ 50–54ರ ಲೆಕ್ಕ ಶೀರ್ಷಿಕೆ ಯೋಜನೆಯಡಿಯಲ್ಲಿ 38 ಲಕ್ಷ ರೂ. ಹಣ ಬಿಡುಗಡೆಯಾಗಿದೆ. ಶಿವಕಳ್ಳಿ, ಎ.ದೇವರಹಳ್ಳಿ ಗ್ರಾಮಗಳಿಗೆ ತಲಾ 12 ಲಕ್ಷ ರೂ. ಟಿ.ಹೊಸೂರು ಗ್ರಾಮಕ್ಕೆ 14 ಲಕ್ಷ ರೂ. ಬಿಡುಗಡೆಯಾಗಿದೆ. ಇದರಲ್ಲಿ ಚರಂಡಿ, ರಸ್ತೆ, ಮೆಟ್ಲಿಂಗ್ ಕಾಮಗಾರಿಗಳು ನಡೆಯಲಿದೆ. ಮುಂದಿನ ದಿನಗಳಲ್ಲಿ ಇದರ ಪೂರ್ಣ ಪ್ರಮಾಣದ ಹಣವನ್ನು ಬಿಡುಗಡೆ ಮಾಡಲು ಕ್ರಮ ವಹಿಸಲಾಗುವುದು. ಈ ಗ್ರಾಮಗಳಿಗೆ ಯಳಂದೂರು ಹಾಗೂ ಕೊಳ್ಳೇಗಾಲಕ್ಕೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆಯೂ ತೀವ್ರ ಹದಗೆಟ್ಟಿದ್ದು ಈ ರಸ್ತೆ ದುರಸ್ತಿಗೂ ಕ್ರಮ ವಹಿಸಲಾಗುವುದು ಎಂದರು. ಶಿವಕಳ್ಳಿ ಗ್ರಾಮಸ್ಥರು ಸಮುದಾಯ ಭವನ, ಸ್ಮಶಾನ ನಿರ್ಮಾಣಕ್ಕೆ ಸ್ಥಳ ಹಾಗೂ ಅನುದಾನ ನೀಡುವಂತೆ ಮನವಿ ಸಲ್ಲಿಸಿದರು. ಇದಕ್ಕೆ ಸ್ಪಂದಿಸಿದ ಶಾಸಕರು ಕೂಡಲೇ ಈ ಬಗ್ಗೆ ಕ್ರಮ ವಹಿಸಲಾಗುವುದು ಎಂದು ಭರವಸೆ ನೀಡಿದರು.

ಕೆಆರ್‌ಐಡಿಎಲ್‌ನ ಎಇಇ ಚಿಕ್ಕಲಿಂಗಯ್ಯ, ಜಿಪಂ ಮಾಜಿ ಉಪಾಧ್ಯಕ್ಷ ಜೆ.ಯೋಗೇಶ್, ತಾಪಂ ಮಾಜಿ ಸದಸ್ಯ ವೆಂಕಟಾಚಲ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎಚ್.ವಿ.ಚಂದ್ರು, ತೋಟೇಶ್, ಸತೀಶ, ಹೊನ್ನೂರು ರಾಘವೇಂದ್ರ, ಕಿನಕಹಳ್ಳಿ ಪ್ರಭುಪ್ರಸಾದ್, ಗುತ್ತಿಗೆದಾರ ಪಿ.ನಾಗರಾಜಗೌಡ, ಜಗದೀಶ್ ಸೇರಿದಂತೆ ಹಲವರು ಇದ್ದರು.

ಒಂದನೇ ಪುಟದಿಂದ

ಬಿಜೆಪಿ ವರಿಷ್ಠರ ಮಾಸ್ಟರ್ ಪ್ಲಾನ್

ಮಾಡಿದ್ದಾರೆ. ವಿಧಾನಸಭೆ ಚುನಾವಣೆಯ ನಂತರ ಯಡಿಯೂರಪ್ಪ ಬಣದವರು ಕಾಂಗ್ರೆಸ್ ಕಡೆಗೆ ವಾಲುತ್ತಿದ್ದರು. ಅಷ್ಟೇ ಅಲ್ಲ, ಕೆಲವರು ವರಿಷ್ಠರು ಹಾಗೂ ಪಕ್ಷವನ್ನು ಟೀಕಿಸುವ ಹಂತಕ್ಕೂ ಹೋಗಿದ್ದರು. ಇದರ ಲಾಭ ಪಡೆದ ಕಾಂಗ್ರೆಸ್ ನಾಯಕರು ಆಪರೇ ಷನ್ ಹಸ್ತ ಮಾಡಿ, ದೊಡ್ಡ ಪ್ರಮಾಣದಲ್ಲಿ ಬಿಜೆಪಿ ಶಾಸಕರ ರಾಜೀನಾಮೆ ಕೊಡಿಸಿ ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡು ವಿಧಾನಸಭೆಯಲ್ಲಿ ತಮ್ಮ ಬಲವನ್ನು ಮತ್ತಷ್ಟು ಹೆಚ್ಚಿಸಿಕೊಳ್ಳಲು ಮುಂದಾಗಿದ್ದರು. ಯಡಿಯೂರಪ್ಪ ಅವರ ಕುಟುಂಬಕ್ಕೆ ಅಧ್ಯಕ್ಷ ಸ್ಥಾನ ನೀಡಿದರೆ, ಚುನಾವಣೆಯಲ್ಲಿ ಹೆಚ್ಚು ಸ್ಥಾನ ಗಳಿಸಬಹುದು ಹಾಗೂ ಯಡಿಯೂರಪ್ಪ ವರ್ಚಸ್ಸಿಗೇ ರಾಜ್ಯದಲ್ಲಿ ಶೇ.5ರಷ್ಟು ಮತ ಪ್ರಮಾಣ ವಿರುವುದು ವರಿಷ್ಠರಿಗೆ ಮನವರಿಕೆಯಾಗಿದ್ದು, ಈ ಮತಗಳನ್ನು ಪಕ್ಷದಲ್ಲಿಯೇ ಉಳಿಸಿಕೊಳ್ಳ ಬಹುದು ಎಂಬ ಕಾರಣಕ್ಕಾಗಿ ತಾವು ವಿರೋಧ ಮಾಡುತ್ತಿದ್ದವರಿಗೇ ಪಟ್ಟ ಕಟ್ಟಿದ್ದಾರೆ.

ದಕ್ಷಿಣ ಭಾರತದಲ್ಲಿ ಕರ್ನಾಟಕ, ತೆಲಂಗಾಣ ಹೊರತುಪಡಿಸಿದರೆ, ಬಿಜೆಪಿಗೆ ಎಲ್ಲಿಯೂ ಅವಕಾಶವಿಲ್ಲ. ಉತ್ತರ ಭಾರತದಲ್ಲಿ ಕಳೆದ ಬಾರಿ ಗಳಿಸಿದ್ದ ಸ್ಥಾನಗಳು ಮುಂದಿನ ಚುನಾವಣೆಯಲ್ಲಿ ಕಡಿಮೆಯಾಗಬಹುದು ಎಂಬ ಮಾಹಿತಿ ಇದೆ.

ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡೇ ಕರ್ನಾಟಕದಲ್ಲಿ ಕಳೆದ ಬಾರಿ ಗಳಿಸಿದ್ದ ಸ್ಥಾನಗಳನ್ನು ಮುಂದಿನ ಚುನಾವಣೆಯಲ್ಲಿ ಉಳಿಸಿಕೊಳ್ಳಲು ಒಕ್ಕಲಿಗ–ಲಿಂಗಾಯತ ಅಸ್ತ್ರ ಪ್ರಯೋಗ ಮಾಡಲಾಗುತ್ತಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಪುತ್ರ ವಿಜಯೇಂದ್ರ ಅವರು ರಾಜ್ಯಾಧ್ಯಕ್ಷರಾಗಿ ನೇಮಕವಾಗುತ್ತಿದ್ದಂತೆ ಯಡಿಯೂರಪ್ಪ ಅತ್ಯಂತ ಕ್ರಿಯಾಶೀಲರಾಗಿದ್ದಾರೆ. ತಮ್ಮ ವಿರೋಧಿ ಬಣದ ಪ್ರಮುಖರಾದ ಮಾಜಿ ಸಚಿವರಾದ ವಿ.ಸೋಮಣ್ಣ, ಬಸನಗೌಡ ಪಾಟೀಲ್ ಯತ್ನಾಳ್ ಅವರನ್ನು ಸಂಪರ್ಕಿಸಿ ವಿಜಯೇಂದ್ರ ಅವರಿಗೆ ಸಹಕಾರ ಕೊಡಿ. ಎಲ್ಲರೂ ಒಟ್ಟಾಗಿ ಹೋಗೋಣ ಎಂಬ ಮಾತುಗಳನ್ನಾಡಿದ್ದಾರೆ. ಒಟ್ಟಾರೆ, ಅನಿರೀಕ್ಷಿತವಾಗಿ ವಿಜಯೇಂದ್ರ ಅವರ ನೇಮಕಾತಿ ಆ ನೀಡುವ ಧೈರ್ಯ ತೋರುತ್ತಿಲ್ಲ. ಜತೆಗೆ ಅಭಿನಂದನೆಗಳ ಸುರಿಮಳೆಗೈದಿದ್ದಾರೆ.

ನಾನೇನು ದೆಹಲಿಯಲ್ಲಿ ಲಾಬಿ ಮಾಡಿಲ್ಲ!

ವಿಜಯೇಂದ್ರ ನೇಮಕಾತಿ ರಾಜ್ಯ ಬಿಜೆಪಿ ಕಾರ್ಯಕರ್ತರಲ್ಲಿ ಉತ್ಸಾಹ ತುಂಬಿದೆ. ಮೋದಿ ಅವರಂಥ ನಾಯಕರು, ಕಿರಿಯನಿಗೆ ಇಂತಹ ಜವಾಬ್ದಾರಿ ಸ್ಥಾನ ನೀಡುವ ಮೂಲಕ ಅಗ್ನಿಪರೀಕ್ಷೆ ನೀಡಿದ್ದಾರೆ. ಇಂತಹ ಪರೀಕ್ಷೆಯಲ್ಲಿಯೇ ಭರ್ಜರಿ ಜಯ ಗಳಿಸುವುದೇ ಮುಂದಿರುವ ಸವಾಲು. ಈ ಸವಾಲನ್ನು ಸ್ವೀಕರಿಸಿ ಆಗಿದೆ. ನಾನು ರಾಜ್ಯಾದ್ಯಂತ ಪ್ರವಾಸ ಕೈಗೊಂಡು ಕಳೆದ ಲೋಕಸಭಾ ಚುನಾವಣೆಯಲ್ಲಿ ಗೆದ್ದಿದ್ದ 25 ಸ್ಥಾನಗಳನ್ನು ಉಳಿಸಿಕೊಳ್ಳಲು ಹೋರಾಟ ನಡೆಸುತ್ತೇನೆ. ಪುತ್ರನಿಗಾಗಿ ನಾನೇನು ದಂಡಯಾತ್ರೆ ಮಾಡಿರಲಿಲ್ಲ. ಬೇಕಾದರೆ, ನೀವೇ ದೆಹಲಿಯವರನ್ನು ಕೇಳಿ ಎಂದು ಸುದ್ದಿಗಾರರಿಗೆ ಮರು ಪ್ರಶ್ನೆ ಹಾಕಿದ ಅವರು, ಕರ್ನಾಟಕದ ಜನತೆಯ ನಾಡಿ ಮಿಡಿತ ಅರಿತು ಈ ನೇಮಕ ಮಾಡಿದ್ದಾರೆ. ಮುಂದೆ ಕಠಿಣ ಹೆಜ್ಜೆ ಇದೆ. ಇದನ್ನು ಸುಲಭಗೊಳಿಸಲು ಎಲ್ಲರ ವಿಶ್ವಾಸ ಪಡೆಯಬೇಕು. ಬೂತ್ ಮಟ್ಟದಲ್ಲಿ ಕಾರ್ಯಕರ್ತ ರನ್ನು ಹುರಿದುಂಬಿಸಿ ಚುನಾವಣೆಗೆ ಸಜ್ಜುಗೊಳಿಸುವ ಅಗತ್ಯ ಇದೆ ಎಂದರು. ಪುತ್ರನಿಗೆ ಕಿರಿಯ ವಯಸ್ಸಿನಲ್ಲೇ ದೊಡ್ಡ ಜವಾಬ್ದಾರಿ ಸ್ಥಾನ ದೊರೆತಿದೆ. ಇದು ಆತನಿಗೆ ದೊಡ್ಡ ಸವಾಲು. ಈಗಿನ ಪರಿಸ್ಥಿತಿಯಲ್ಲಿ ಲೋಕಸಭಾ ಚುನಾವಣೆಯಲ್ಲಿ ಕಳೆದ ಬಾರಿಯಂತೆ ಈ ಬಾರಿಯೂ 25 ಸ್ಥಾನ ಗೆಲ್ಲುವುದು ಕಠಿಣ ಹಾದಿಯಾಗಿದೆ ಎಂದು ಅಭಿಪ್ರಾಯಪಟ್ಟರು.

ನ.15ರಂದು ಬಿ.ವೈ.ವಿಜಯೇಂದ್ರ ಅಧಿಕಾರ ಸ್ವೀಕಾರ

ವಾಸ್ತವ್ಯವಿದ್ದು, ನವೆಂಬರ್ 16ರಂದು ಶಾಸಕಾಂಗ ಪಕ್ಷದ ಸಭೆಯಲ್ಲಿ ವಿಪಕ್ಷ ನಾಯಕನ ಆಯ್ಕೆ ಕುರಿತು ತೀರ್ಮಾನ ಕೈಗೊಳ್ಳಲಿದ್ದಾರೆ ಎಂದು ಹೇಳಲಾಗಿದೆ. ಪಕ್ಷದ ರಾಜ್ಯಾಧ್ಯಕ್ಷರಾಗಿ ಘೋಷಣೆಯಾಗುತ್ತಿದ್ದಂತೆಯೇ ವಿಜಯೇಂದ್ರ ಸಂಘಟನೆ ವಿಚಾರದಲ್ಲಿ ಗಮನಹರಿಸಲು ತೊಡಗಿದ್ದಾರೆ. ಬೂತ್ ಮಟ್ಟದಲ್ಲಿ ಪಕ್ಷವನ್ನು ಸಂಘಟಿಸುವ ಸಂಕಲ್ಪ ಮಾಡಿರುವ ಅವರು, ಇಂದು ಪ್ರಥಮವಾಗಿ ಬೆಂಗಳೂರಿನ ಗಾಂಧಿನಗರದ ಬೂತ್ ನಂಬರ್ 40ರ ಅಧ್ಯಕ್ಷ ಶಶಿಧರ್ ಮನೆಗೆ ಭೇಟಿ ನೀಡಿ ದೀಪಾವಳಿ ಶುಭಾಶಯ ಕೋರಿದ ನಂತರ ರಾಜ್ಯದ ಆರ್‌ಎಸ್‌ಎಸ್‌ನ ಕೇಂದ್ರ ಕಚೇರಿ ಕೇಶವಕೃಪಾಗೆ ತೆರಳಿ ಸಂಘ ಪರಿವಾರದ ಹಿರಿಯರೊಂದಿಗೆ ಕೆಲ ಕಾಲ ಚರ್ಚೆ ನಡೆಸಿದರು. ಸಂಜೆ ಬೆಂಗಳೂರಿನ ಆದಿಚುಂಚನಗಿರಿ ಶಾಖಾ ಮಠಕ್ಕೆ ಭೇಟಿ ನೀಡಿ ಶ್ರೀಗಳ ಆಶೀರ್ವಾದ ಪಡೆದರು.

ಮೈತ್ರಿಗೆ ಮತ್ತಷ್ಟು ಬಲ ಬಂತು

ಸಮುದಾಯವನ್ನು ಒಟ್ಟಾಗಿ ತೆಗೆದುಕೊಂಡು ಹೋದರು. ಯಡಿಯೂರಪ್ಪ ಹಾಗೂ ಕುಮಾರಸ್ವಾಮಿ ಅಂದು ಒಟ್ಟಾಗಿ ಹೋಗಿದ್ದ ಕಾರಣ ಸಮ್ಮಿಶ್ರ ಸರ್ಕಾರ ಅಸ್ತಿತ್ವಕ್ಕೆ ಬಂದಿತ್ತು. ಈಗ ವಿಜೇಯಂದ್ರರಿಗೆ ಬಿಜೆಪಿ ರಾಜ್ಯಾಧ್ಯಕ್ಷ ಪಟ್ಟ ದೊರೆತಿರುವ ಕಾರಣ ಜೆಡಿಎಸ್ ಹಾಗೂ ಬಿಜೆಪಿ ಮೈತ್ರಿ ಬಲ ಮತ್ತಷ್ಟು ಹೆಚ್ಚಾಗಲಿದೆ ಎಂದರು. ವಿಜಯೇಂದ್ರ ಬಿಜೆಪಿ ರಾಜ್ಯಾಧ್ಯಕ್ಷ ಆಗಿರುವುದಕ್ಕೆ ಯಾರಿಗೂ ಅಸಮಾಧಾನವಿಲ್ಲ. ಎಲ್ಲರೂ ಹೈಕಮಾಂಡ್ ತೀರ್ಮಾನಕ್ಕೆ ಬದ್ಧರಾಗಿದ್ದಾರೆ. ಆದರೆ ಸೋಮಣ್ಣ ಅವರಿಗೆ ಅಸಮಾಧಾನವಿದ್ದು, ಮುಂದಿನ ದಿನದಲ್ಲಿ ಬಿಜೆಪಿ ವರಿಷ್ಠರು ಸಮಾಧಾನಪಡಿಸಲಿದ್ದಾರೆ ಎಂದು ಜಿ.ಟಿ.ದೇವೇಗೌಡರು ಹೇಳಿದರು. ಲೋಕಸಭಾ ಚುನಾವಣೆಯಲ್ಲಿ ಇಷ್ಟು ಸ್ಥಾನ ಬಿಟ್ಟು ಕೊಡಿ ಎಂದು ನಾವು ಬಿಜೆಪಿ ವರಿಷ್ಠರಲ್ಲಿ ಕೇಳಿಲ್ಲ. ಗೆಲುವು ಸಾಧಿಸುವುದು ನಮ್ಮ ಒಂದೇ ಗುರಿ. ಮೈಸೂರು ಸೇರಿದಂತೆ ಎಲ್ಲಾ ಕ್ಷೇತ್ರಗಳ ಅಭ್ಯರ್ಥಿ ಆಯ್ಕೆ ವಿಚಾರದಲ್ಲಿ ಎರಡು ಪಕ್ಷದಿಂದ ಸರ್ವೆ ಮಾಡಲಾಗುತ್ತದೆ ಎಂದು ಮಾಹಿತಿ ನೀಡಿದರು. ವಿರೋಧ ಪಕ್ಷದ ಸ್ಥಾನ ಬಿಟ್ಟುಕೊಡಿ ಎಂದು ನಾವು ಕೇಳಿಲ್ಲ. ಬಿಜೆಪಿ ನಾಯಕರನ್ನೆ ವಿಪಕ್ಷ ನಾಯಕರನ್ನಾಗಿ ಮಾಡಿ ಎಂದು ಕುಮಾರಸ್ವಾಮಿ ಅವರೇ ಬಿಜೆಪಿ ವರಿಷ್ಠರಿಗೆ ಹೇಳಿ ಬಂದಿದ್ದಾರೆ. ಇದರಿಂದ ಈ ವಿಚಾರದಲ್ಲಿ ಕೂಡ ಯಾವುದೇ ಗೊಂದಲವಿಲ್ಲ ಎಂದು ಸ್ಪಷ್ಟಪಡಿಸಿದರು.

ಲೋಕಸಭಾ ಚುನಾವಣೆ ನಂತರ ರಾಜ್ಯ ಕಾಂಗ್ರೆಸ್ ಸರ್ಕಾರ ಪತನವಾಗುತ್ತದೆ ಎಂದು ನಾನು ಹೇಳಿಲ್ಲ. ಜನರೇ ಹಾಗೆ ಸಾರ್ವಜನಿಕವಾಗಿ ಮಾತನಾಡಿಕೊಳ್ಳುತ್ತಿದ್ದಾರೆ. ಜನರ ಮನದಾಸೆಯೂ ಕೂಡ ಇದೇ ಆಗಿದೆ ಎಂದು ತಿಳಿಸಿದ ಜಿ.ಟಿ.ದೇವೇಗೌಡರು, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಕರ್ನಾಟಕದಲ್ಲಿ ಅಭಿವೃದ್ಧಿ ಶೂನ್ಯವಾಗಿದೆ. ಗ್ಯಾರಂಟಿ ಹಿಂದೆ ಹೋಗುತ್ತಿದ್ದಾರೆಯೇ ಹೊರತು, ಅಭಿವೃದ್ಧಿ ಮಾಡುತ್ತಿಲ್ಲ. ಪರಿಸ್ಥಿತಿ ಇನ್ನು ಆರು ತಿಂಗಳು ಹೀಗೆ ಮುಂದುವರೆದರೆ ಕಾಂಗ್ರೆಸ್ ಶಾಸಕರೇ ಅವರ ಕ್ಷೇತ್ರಕ್ಕೆ ಕಾಲಿಡಲು ಸಾಧ್ಯವಾಗದ ಸ್ಥಿತಿ ಎದುರಾಗುತ್ತದೆ. ಇದೆಲ್ಲವೂ ಮುಂಬರುವ ಲೋಕಸಭಾ ಚುನಾವಣೆ ಮೇಲೆ ಪರಿಣಾಮ ಬೀರಲಿದೆ. ಈ ಮೂಲಕ ಲೋಕಸಭಾ ಚುನಾವಣೆ ನಂತರ ಕಾಂಗ್ರೆಸ್ ಸರ್ಕಾರ ಪತನವಾಗಿ ಸಮ್ಮಿಶ್ರ ಸರ್ಕಾರ ರಚನೆಗೆ ಅವಕಾಶವಾಗಲಿದೆ ಎಂದು ತಿಳಿಸಿದರು.

ಪಕ್ಷ ಕಟ್ಟುವ ಪ್ರತಿಜ್ಞೆ: ಹಾಸನಾಂಬೆ ಸನ್ನಿಧಿಯಲ್ಲಿ ಪಕ್ಷ ಕಟ್ಟುವ ಬಗ್ಗೆ ಪ್ರತಿಜ್ಞೆ ಮಾಡಿದ್ದೇವೆಯೇ ಹೊರತು, ಯಾವುದೇ ವಿಚಾರದಲ್ಲಿ ಆಣೆ ಪ್ರಮಾಣ ಮಾಡಿಲ್ಲ. ಲಕ್ಷಾಂತರ ಭಕ್ತರು ಬರುವ ತಾಯಿ ಎದುರು ಆಣೆ–ಪ್ರಮಾಣ ಮಾಡಲು ಸಾಧ್ಯವೇ ಎಂದು ಪ್ರಶ್ನಿಸಿದ ಜಿ.ಡಿ.ದೇವೇಗೌಡರು, ಜೆಡಿಎಸ್ ಪಕ್ಷ ಬಲವರ್ಧನೆ ಮಾಡಿ ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡುವುದು ನಮ್ಮ ಗುರಿ. ಇದನ್ನು ಕಾರ್ಯಗತಗೊಳಿಸಲು ಎಲ್ಲರೂ ಸಂಘಟನಾತ್ಮಕವಾಗಿ ಕೆಲಸ ಮಾಡುತ್ತೇವೆ ಎಂದು ತಿಳಿಸಿದರು.

ಗ್ರಾಮ ಆಡಳಿತಾಧಿಕಾರಿಗಳಿಬ್ಬರ ಅಮಾನತು


ಕಾರ್ಯಕರ್ತ ಬಿ.ಎನ್.ನಾಗೇಂದ್ರ 2022ರ ಆಗಸ್ಟ್ 22ರಂದು ಮೈಸೂರು ಜಿಲ್ಲಾಧಿಕಾರಿಗಳಿಗೆ ದೂರು ನೀಡಿದ್ದರು. ಈ ಕುರಿತಂತೆ ಪರಿಶೀಲನೆ ನಡೆಸಿದ ಮೈಸೂರು ಉಪವಿಭಾಗಾಧಿಕಾರಿ ಕೆ.ಆರ್. ರಕ್ಷಿತ್, 2023ರ ಆಗಸ್ಟ್ 4ರಂದು ವಿಸ್ತೃತ ವರದಿ ಸಲ್ಲಿಸಿದ್ದರ ಮೇರೆಗೆ ಅಕ್ರಮವಾಗಿ ಜಮೀನಿನ ಖಾತೆ ಮಾಡಿ ಕರ್ತವ್ಯಲೋಪ ಎಸಗಿರುವುದು ಮೇಲ್ನೋಟಕ್ಕೆ ಸಾಬೀತಾದ ಹಿನ್ನೆಲೆಯಲ್ಲಿ ಕೆ. ದೇವಣ್ಣ, ಪ್ರದೀಪ್ ಸಿಂಗ್ ಹಾಗೂ ಹಂಸಲೇಖ ಅವರನ್ನು ಇಲಾಖಾ ವಿಚಾರಣೆ ಕಾಯ್ದಿರಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಕರ್ನಾಟಕ ಸರ್ಕಾರಿ ಸೇವಾ ನಿಯಮಾವಳಿಗಳು 1957ರ ನಿಯಮ 10(1)ರ ರೀತ್ಯಾ ನವೆಂಬರ್ 8ರಂದು ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ. ತಿ.ನರಸೀಪುರ ತಾಲೂಕು, ಕಸಬಾ ಹೋಬಳಿ, ತಿರುಮಕೂಡಲು ಗ್ರಾಮದ ಸರ್ವೆ ನಂ. 55/2ರಲ್ಲಿ 0–22 ಗುಂಟೆ ಮತ್ತು 55/6ರಲ್ಲಿ 0–08 ಗುಂಟೆ ಜಮೀನು ಮೂಲ ಖಾತೆದಾರರಾದ ಎಂ.ಆರ್. ರಘುನಾಥರಾವ್, ಎಂ.ಆರ್. ಗೋಪಾಲರಾವ್ ಹಾಗೂ ಎಂ.ಆರ್. ನಾಗರಾಜರಾವ್ ಹೆಸರಿನಲ್ಲಿ 2019–20ನೇ ಸಾಲಿನವರೆಗೂ ಜಂಟಿ ಖಾತೆ ಇತ್ತು. ಅವರಿಂದ ಯಾವುದೇ ದಾಖಲೆಗಳನ್ನು ಪಡೆಯದೇ ಅವರು ಕಾಲವಾಗಿದ್ದಾರೆಂಬುದಕ್ಕೆ ನಕಲಿ ಮರಣ ಪ್ರಮಾಣ ಪತ್ರ ಸೃಷ್ಟಿಸಿದ ಅಧಿಕಾರಿಗಳು, ಅವರ ವಾರಸುದಾರರೆಂದು ಬಿಂಬಿಸಲು ಅನ್ಯ ವ್ಯಕ್ತಿಗಳ ವಂಶವೃಕ್ಷವನ್ನೇ ತಯಾರಿಸಿಕೊಂಡು ಬೆಂಗಳೂರು ನಿವಾಸಿಗಳಾದ ವಾರಸುದಾರರಲ್ಲದ ಲಲಿತ ಜಯಗೋಪಾಲ್, ಸುಧೀರ್ ಜಯಗೋಪಾಲ್ ಮತ್ತು ಸುಮನ ಜಯಗೋಪಾಲ್ ಅವರ ಹೆಸರಿಗೆ ವಂಶವೃಕ್ಷ ಮತ್ತು ಅನುಭವದಾರರಿಗೆ ತಾಳೆ ಇಲ್ಲದಿದ್ದರೂ ನಮೂನೆ 12 ಮತ್ತು 21ನ್ನು ಸೃಜಿಸಿ ಅಕ್ರಮವಾಗಿ ಪೌತಿ ಖಾತೆ ಮಾಡಿದ್ದಾರೆಂದು ಉಪವಿಭಾಗಾಧಿಕಾರಿಗಳು ವರದಿಯಲ್ಲಿ ತಿಳಿಸಿದ್ದಾರೆ.

ಅಕ್ರಮ ಖಾತೆ ಮಾಡಿರುವ ತಿ.ನರಸೀಪುರ ತಾಲೂಕು ಕಚೇರಿ ಹಿಂದಿನ ಆರ್‌ಆರ್‌ಟಿ ಶಿರಸ್ತೇದಾರ್ ಹೆಚ್.ಪಿ. ರವಿಪ್ರಸಾದ್ (ಹಾಲಿ ಮುಡಾ ವಿಶೇಷ ತಹಸೀಲ್ದಾರ್), ಹಿಂದಿನ ಆರ್‌ಆರ್‌ಟಿ ಶಿರಸ್ತೇದಾರ್ (ಹಾಲಿ ಮೈಸೂರು ಮಹಾನಗರ ಪಾಲಿಕೆ ಚುನಾವಣಾ ಶಿರಸ್ತೇದಾರ್) ಕೆ.ಪ್ರಭುರಾಜ್, ಕೆ. ದೇವಣ್ಣ, ಪ್ರದೀಪ್ ಸಿಂಗ್ ಹಾಗೂ ಹಂಸಲೇಖ ಅವರುಗಳ ವಿರುದ್ಧ ದೋಷಾರೋಪಣಾ ಪಟ್ಟಿ ತಯಾರಿಸಿ, ಶಿಸ್ತುಕ್ರಮ ವಹಿಸಬೇಕೆಂದು ಉಪವಿಭಾಗಾಧಿಕಾರಿಗಳು ಶಿಫಾರಸು ಮಾಡಿದ್ದರು.

ತಮಗೆ ದತ್ತವಾದ ಅಧಿಕಾರ ಬಳಸಿ ಮೂವರನ್ನು ಅಮಾನತುಗೊಳಿಸಿರುವ ಜಿಲ್ಲಾಧಿಕಾರಿಗಳು, ಶಿರಸ್ತೇದಾರ್‌ಗಳಾಗಿದ್ದ ಹೆಚ್.ಪಿ. ರವಿಪ್ರಸಾದ್ ಮತ್ತು ಕೆ. ಪ್ರಭುರಾಜ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಮೈಸೂರು ಪ್ರಾದೇಶಿಕ ಆಯುಕ್ತರಿಗೆ ಪತ್ರ ಬರೆದಿದ್ದಾರೆ. ಈ ಹಿಂದೆ ಅಕ್ರಮವಾಗಿ ಜಮೀನಿನ ಪೌತಿ ಖಾತೆ ಮಾಡಿ ಭಾರೀ ಅವ್ಯವಹಾರ ಎಸಗಲಾಗಿದೆ ಎಂಬುದರ ಬಗ್ಗೆ 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ವಿಸ್ತೃತ ವರದಿ ಪ್ರಕಟವಾಗಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ದುಷ್ಟತನ ಹೆಚ್ಚಾಗಿ, ಒಳ್ಳೆತನ ಕಡಿಮೆಯಾಗುತ್ತಿದೆ

ಮೈಸೂರು ರಾಜವಂಶಸ್ಥ ಯದುವೀರ್ ಅತೀವ ಬೇಸರ



ಮೈಸೂರು, ನ.11(ಬಿಎಲ್‌ಯು)– ಇತ್ತೀಚೆಗೆ ಸಮಾಜದಲ್ಲಿ ದುಷ್ಟತನ ಹೆಚ್ಚಾಗುತ್ತಿದ್ದು, ಒಳ್ಳೆತನ ಕಡಿಮೆಯಾಗುತ್ತಿದೆ ಎಂದು ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅತೀವ ಬೇಸರ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಮಾನಸಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಅಂಬಳೆ ಮಹಾದೇವಸ್ವಾಮಿ ಅವರ 'ಬೋಧಿ ಬೆಳಕಿನ ಹಾದಿ' ಹಾಗೂ 'ಕಾರುಣ್ಯದ ಕಡಲು' ಸಂಕಲನ ಬಿಡುಗಡೆ ಮಾಡಿ ಮಾತನಾಡಿದ ಅವರು, ದುಷ್ಟತನ, ಅದರ ಪ್ರಭಾವ ಹೆಚ್ಚಾಗುತ್ತಿರುವುದು ಒಳ್ಳೆಯ ಬೆಳವಣಿಗೆಯಲ್ಲ. ಇದನ್ನು ಎಲ್ಲರೂ ಮನಗಂಡು ಒಳ್ಳೆತನದ ಹಾದಿಯಲ್ಲಿ ಸಾಗಬೇಕು ಎಂದು ಸಲಹೆ ನೀಡಿದರು.

ಪ್ರತಿಯೊಬ್ಬ ವ್ಯಕ್ತಿ ಹಾಗೂ ಸಮಾಜ ಒಳ್ಳೆತನ ಮೈಗೂಡಿಸಿಕೊಳ್ಳುವಂತೆ ಬೌದ್ಧ ಧರ್ಮ ಸಾರಿ ಸಾರಿ ಹೇಳುತ್ತದೆ. ಬೌದ್ಧ ಧರ್ಮದ ಸಂದೇಶ ಪಾಲಿಸಿದರೆ ಸ್ವಾಸ್ಥ್ಯ ಸಮಾಜ ನಿರ್ಮಾಣ ಮಾಡಬಹುದು ಎಂದು ಅಭಿಪ್ರಾಯಪಟ್ಟರು.

ಈ ಮೊದಲು ಮಾನಸಗಂಗೋತ್ರಿಯ ಭೂಮಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಹಿರಿಯ ಸಹೋದರಿ ಜಯಲಕ್ಷ್ಮಮ್ಮಣ್ಣಿ ಅವರ ಆಸ್ತಿಯಾಗಿತ್ತು. ದಿವಾನ್ ಕಾಂತರಾಜೇ ಅರಸ್ ಅವರ ಪತ್ನಿಯಾದ ಜಯಲಕ್ಷ್ಮಮ್ಮಣ್ಣಿ ಅವರ ನೆನಪಾಗಿ ಮಾನಸಗಂಗೋತ್ರಿಯಲ್ಲಿ ಜಯಲಕ್ಷ್ಮಿ ವಿಲಾಸ್ ಮ್ಯಾನ್ಷನ್ ನಿರ್ಮಾಣ ಮಾಡಲಾಯಿತು. ಸ್ವಾತಂತ್ರ್ಯ ನಂತರ ಮಾನಸ ಗಂಗೋತ್ರಿ ವಿಶ್ವವಿದ್ಯಾನಿಲಯದ ಆಸ್ತಿಯಾಯಿತು ಎಂದು ಯದುವೀರ್ ಮಾನಸಗಂಗೋತ್ರಿಯ ಇತಿಹಾಸವನ್ನು ಸಂಕ್ಷಿಪ್ತವಾಗಿ ವಿವರಿಸಿದರು.

ಕನ್ನಡದ ಬೆಳವಣಿಗೆಗೆ ರಚನೆಯಾದ ಕನ್ನಡ ಸಾಹಿತ್ಯ ಪರಿಷತ್ ಅರಮನೆಯಲ್ಲಿದೆ. ಅರಮನೆಯಿಂದಲೇ ಕನ್ನಡ ಏಕೀಕರಣದ ಹೋರಾಟ ಆರಂಭವಾಯಿತು. ಕರ್ನಾಟಕದ ಏಕೀಕರಣದ ಏಕತೆಗೆ ಬಹಳಷ್ಟು ಮಹನೀಯರು ಹೋರಾಟ ಹಾಗೂ ತ್ಯಾಗ ಮಾಡಿದ್ದಾರೆ ಎಂದರು.

ಕರ್ನಾಟಕ ಎಂಬುದು ಹೊಸ ಹೆಸರಲ್ಲ. ವಿಜಯನಗರ ಸಾಮ್ರಾಜ್ಯ ಹಾಗೂ ಗಂಗರ ಕಾಲದಲ್ಲಿ ಕರ್ನಾಟಕದ ಚಕ್ರವರ್ತಿಗಳು ಎಂಬ ಹೆಸರಿನಿಂದ ಆಳ್ವಿಕೆ ನಡೆಸಿದ್ದರು ಎಂದು ಕರ್ನಾಟಕದ ಇತಿಹಾಸವನ್ನು ಕೂಡ ಈ ವೇಳೆ ಯದುವೀರ್ ವಿವರಿಸಿದರು.

ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ವಿಮರ್ಶಕ ಪ್ರೊ.ಸಿ. ನಾಗಣ್ಣ, ಸಂಸ್ಕೃತಿ ಚಿಂತಕ ಪ್ರೊ.ಎ.ರಂಗಸ್ವಾಮಿ, ಪತ್ರಕರ್ತ ರಶ್ಮಿ ಕೋಟಿ, ಸೇಪಿಯೆಂಟ್ ಶಿಕ್ಷಣ ಸಂಸ್ಥೆ ಅಧ್ಯಕ್ಷ ದಲ್ಜೀತ್ ರಾಮ್ ಚೌಧರಿ, ಪ್ರಿನ್ಸಿಪಾಲ್ ಡಾ.ಕೆ.ಗಣೇಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಾಹಿತ್ಯದ ವಿಂಗಡಣೆ ಸಲ್ಲದು– ಸಿದ್ದಗಂಗಾ ಸ್ವಾಮೀಜಿ

ದಲಿತ ಸಾಹಿತ್ಯ, ಪ್ರಗತಿಪರ ಸಾಹಿತ್ಯ ಎಂಬ ಹೆಸರಿನಿಂದ ಸಾಹಿತ್ಯವನ್ನು ವಿಂಗಡಣೆ ಮಾಡಬಾರದು ಎಂದು ತುಮಕೂರಿನ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಸ್ವಾಮೀಜಿ ಅಭಿಪ್ರಾಯಪಟ್ಟರು. ಯಾವ ಸಾಹಿತ್ಯವನ್ನು ವಿಂಗಡಣೆ ಮಾಡದೆ, ಎಲ್ಲವನ್ನೂ ಒಂದೇ ರೀತಿಯಾಗಿ ನೋಡಬೇಕು ಎಂದು ಹೇಳಿದರು.

ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯನ್ನು ಮನುಷ್ಯನಾಗಿ ನೋಡುವ ಮನುಷ್ಯತ್ವದ ಮನೋಭಾವ ಬೆಳಸಿಕೊಳ್ಳಬೇಕು. ಬುದ್ಧ, ಬಸವ, ಅಂಬೇಡ್ಕರ್ ಅವರು ಇದೇ ಸಂದೇಶವನ್ನು ಸಾರಿದರು. ಆದರೆ ಮನುಷ್ಯತ್ವ ತತ್ವವನ್ನು ಇನ್ನು ಅಳವಡಿಸಿಕೊಳ್ಳದಿರುವುದು ಬೇಸರದ ಸಂಗತಿ ಎಂದು ಸ್ವಾಮೀಜಿ ನೋವಿನಿಂದ ನುಡಿದರು.

ವೃತ್ತಿ ಹಾಗೂ ಪ್ರವೃತ್ತಿ ಬೇರೆಯಾಗಿದೆ. ಆದರೆ ವೃತ್ತಿ ಯಾವುದೇ ಇರಲಿ ಒಳ್ಳೆಯ ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಅಂಬಳೆ ಮಹದೇವಸ್ವಾಮಿ ಅವರ ಎರಡು ಕೃತಿಗಳು ದಲಿತ ಹಾಗೂ ಶೋಷಿತ ವರ್ಗದ ಮೇಲೆ ಬೆಳಕು ಚೆಲ್ಲುತ್ತವೆ ಎಂದು ಸ್ವಾಮೀಜಿ ಅಭಿಪ್ರಾಯಪಟ್ಟರು.

ಶಾಲಾ ಶಿಕ್ಷಣ ಇಲಾಖೆಯನ್ನು ಜಿಪಂಗೆ ವಹಿಸದಿರಲು ಎಂಎಲ್‌ಸಿ ಮರಿತಿಬ್ಬೇಗೌಡ ಆಗ್ರಹ



ಮೈಸೂರು, ನ.11(ಜಿಎ)–ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ)ಯ ಜಿಲ್ಲಾ ಉಪ ನಿರ್ದೇಶಕರ ಕಚೇರಿಯ ದಿನನಿತ್ಯದ ವ್ಯವಹಾರವನ್ನು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯ ಉಸ್ತುವಾರಿಗೆ ವಹಿಸಿ ನೀಡಿರುವ ಆದೇಶವನ್ನು ಹಿಂಪಡೆಯಬೇಕೆಂದು ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ ಆಗ್ರಹಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪದವಿ ಪೂರ್ವ ಶಿಕ್ಷಣ ದೀರ್ಘಕಾಲದಿಂದ ಪ್ರತ್ಯೇಕ ವ್ಯವಸ್ಥೆಯಲ್ಲಿ ಸೇವೆ ನೀಡುತ್ತಾ ಬಂದಿದೆ. ಉಪನಿರ್ದೇಶಕರ ಕಾರ್ಯನಿರ್ವಹಣೆಯನ್ನು ಜಿಪಂಗೆ ವಹಿಸಿ ಜಿಪಂ ಸಿಇಒ ನಿರ್ವಹಣೆ ನೋಡಿಕೊಳ್ಳುವಂತೆ ಹೊಸ ಸುತ್ತೋಲೆ ಹೊರಡಿಸಿದ್ದಾರೆ. ಇದು ಅವೈಜ್ಞಾನಿಕವಾಗಿದೆ. ಪಂಚಾಯತ್ ರಾಜ್ ಇಲಾಖೆಯಲ್ಲಿ ಶೇ.42 ರಷ್ಟು ನೌಕರರ ಕೊರತೆಯಿದೆ. ಪಂಚಾಯತ್ ರಾಜ್ ಇಲಾಖೆಯ ಕಾರ್ಯಕ್ರಮಗಳೇ ನಿಗದಿತ ಅವಧಿಯಲ್ಲಿ ಮಾಡಲು ಆಗುತ್ತಿಲ್ಲ. ಹೀಗಿರುವಾಗಲೇ ಶಿಕ್ಷಣ ಇಲಾಖೆ ಆಡಳಿತ ವಿಭಾಗವನ್ನು ಹೆಚ್ಚುವರಿಯಾಗಿ ನೀಡುವುದರಿಂದ ವಿಳಂಬ ನೀತಿ ಹೆಚ್ಚಳ ಆಗಲಿದೆ. ಪದವಿಪೂರ್ವ ಶಿಕ್ಷಣ ಇಲಾಖೆಗೆ ಜಡತ್ವ ಉಂಟಾಗಲಿದೆ ಎಂದು ದೂರಿದ ಅವರು, ಸದರಿ ಸುತ್ತೋಲೆ ಬಗ್ಗೆ ವಿಧಾನಸಭೆ ಹಾಗೂ ಪರಿಷತ್‌ನಲ್ಲಿ ಚರ್ಚಿಸದೇ ಏಕಾಏಕಿ ನಿರ್ಧಾರ ಕೈಗೊಂಡಿದ್ದಾರೆ. ಇದರಿಂದ ವಿದ್ಯಾರ್ಥಿಗಳಿಗೆ ಯಾವುದೇ ಲಾಭ ಆಗುವುದಿಲ್ಲ. ಬದಲಿಗೆ ನಷ್ಟ ಹೆಚ್ಚಾಗಲಿದೆ ಎಂದರು.

ಪಿಯುಸಿ ಪರೀಕ್ಷೆಗಳನ್ನು ಎಸ್‌ಎಸ್‌ಎಲ್‌ಸಿ ಪರೀಕ್ಷಾಂಗ ವಿಭಾಗಕ್ಕೆ ವಹಿಸಿದ ಮೇಲೆ ಸರಿಯಾದ ರೀತಿಯಲ್ಲಿ ಪರೀಕ್ಷೆ ನಡೆಯುತ್ತಿಲ್ಲ. ಮೌಲ್ಯ ಮಾಪನ ಭತ್ಯೆ ಮೊದಲಾದ ವ್ಯವಸ್ಥೆಗಳು ಸರಿಯಾಗಿ ಆಗುತ್ತಿಲ್ಲ. ಹೀಗೆ ವಹಿಸುವುದರಿಂದ ಗುಣಾತ್ಮಕ ಶಿಕ್ಷಣಕ್ಕೆ ಹಾಗೂ ವಿದ್ಯಾರ್ಥಿಗಳಿಗೆ ತೊಂದರೆ ಆಗಲಿದೆ. ಈಗ ಯಾವುದೇ ಅಧಿಕಾರ ಕೊಟ್ಟಿಲ್ಲವೆಂದು ಹೇಳಿದರೂ ಶಾಸನ ಬದ್ಧ ಅಧಿಕಾರ ಕೊಡುವ ಹುನ್ನಾರ ಇದಾಗಿದೆ. ಇದನ್ನು ಯಾವುದೇ ಕಾರಣಕ್ಕೂ ಜಾರಿಗೊಳಿಸದೇ ಇಂತಹ ಸುತ್ತೋಲೆಗಳನ್ನು ವಾಪಾಸ್ ಪಡೆಯಬೇಕೆಂದು ಒತ್ತಾಯಿಸಿದರು.

ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ಬದಲಾವಣೆ ತರಲು ಹೊರಟಿದ್ದಾರೆ. ಪ್ರತಿ ತಾಲೂಕಿನಲ್ಲೂ ಹದಿನೈದು ಪರೀಕ್ಷಾ ಕೇಂದ್ರಗಳಿದ್ದವು. ಅವುಗಳನ್ನು 8ಕ್ಕೆ ಇಳಿಸುವ ಪ್ರಯತ್ನ ನಡೆಯುತ್ತಿದೆ. ಜತೆಗೆ 800 ಮಕ್ಕಳಿಗೆ ಒಂದು ಕೇಂದ್ರ ಮಾಡಲಾಗುತ್ತಿದೆ. ಪರೀಕ್ಷಾ ಕೇಂದ್ರಕ್ಕೆ ಪಂಚಾಯತ್ ರಾಜ್ ಇಲಾಖೆ ಸಿಬ್ಬಂದಿ ನೇಮಿಸಿ ಶಿಕ್ಷಕರನ್ನು ಪರೀಕ್ಷಾ ಕೇಂದ್ರದಿಂದಲೇ ಹೊರಗಿಡುವ ಪ್ರಯತ್ನ ಖಂಡನೀಯ ಎಂದರು.

ಮೈಸೂರು ಮಹಾರಾಣಿ ಕಾಲೇಜಿನಲ್ಲಿ ಕುಸಿದಿರುವ ವಿಜ್ಞಾನ ಕಾಲೇಜಿನ ಕಟ್ಟಡ ನಿರ್ಮಾಣಕ್ಕೆ ಹಾಗೂ ಪಾರಂಪರಿಕ ಕಟ್ಟಡ ನವೀಕರಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉನ್ನತ ಶಿಕ್ಷಣ ಸಚಿವ ಡಾ.ಸುಧಾಕರ್ ನೇತೃತ್ವದಲ್ಲಿ 51 ಕೋಟಿ ರೂ. ನೀಡಲು ಒಪ್ಪಿಗೆ ನೀಡಿದ್ದಾರೆ.

600 ಮಂದಿ ವಿದ್ಯಾರ್ಥಿನಿಯರಷ್ಟೇ ವ್ಯಾಸಂಗ ಮಾಡಲು ಯೋಗ್ಯವಾಗಿರುವ ಕಟ್ಟಡವನ್ನು ಪರಿಶೀಲಿಸಿ 99 ಕೋಟಿ ರೂ. ವೆಚ್ಚದಲ್ಲಿ 2ಸಾವಿರ ವಿದ್ಯಾರ್ಥಿನಿಯರ ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣಕ್ಕೆ ನೀಡುವುದಾಗಿ ಹೇಳಿದ್ದಾರೆ. ಹಿಂದಿನ ಅವಧಿಯಲ್ಲಿ ಪಡುವಾರಹಳ್ಳಿಯಲ್ಲಿಯೂ ಬಾಕಿ ಉಳಿದಿರುವ ಕಾಮಗಾರಿಗೆ 42 ಕೋಟಿ ರೂ. ವೆಚ್ಚದಲ್ಲಿ ಪೂರ್ಣಗೊಳಿಸಲು ಸೂಚನೆ ನೀಡಿದ್ದಾರೆ. 11 ಸಾವಿರ ವಿದ್ಯಾರ್ಥಿನಿಯರು ಮಹಾರಾಣಿ ವಾಣಿಜ್ಯ, ವಿಜ್ಞಾನ ಹಾಗೂ ಕಲಾ ಕಾಲೇಜಿನಲ್ಲಿ ಅಭ್ಯಾಸ ಮಾಡುತ್ತಿದ್ದಾರೆ. ಒಟ್ಟಾರೆ 209 ಕೋಟಿ ರೂ.ಗಳ ಅನುದಾನ ನೀಡುವ ಭರವಸೆ ನೀಡಿ ಈಡೇರಿಸುತ್ತಿರುವುದಕ್ಕೆ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆಂದರು. ಸುದ್ದಿಗೋಷ್ಠಿಯಲ್ಲಿ ನಿವೃತ್ತ ಪ್ರಾಂಶುಪಾಲ ಜಯರಾಂ ಉಪಸ್ಥಿತರಿದ್ದರು.

500 ರೂ.ಗೆ ಗ್ಯಾಸ್ ಸಿಲಿಂಡರ್, ಅತ್ತೆಗೆ 4 ಸಾವಿರ, ಸೊಸೆಗೆ ಎರಡೂವರೆ ಸಾವಿರ

ತೆಲಂಗಾಣದಲ್ಲೂ ಕಾಂಗ್ರೆಸ್ ಗ್ಯಾರಂಟಿ ಘೋಷಣೆ



ಹೈದರಾಬಾದ್, ನ.11– ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಐದು ಗ್ಯಾರಂಟಿಗಳ ಮೂಲಕ ಗೆಲವು ಸಾಧಿಸಿ ಬಿಜೆಪಿ ನೇತೃತ್ವದ ಸರ್ಕಾರಕ್ಕೆ ಮುಖಭಂಗ ಮಾಡಿದ ಕಾಂಗ್ರೆಸ್ ಈಗ ಅದೇ ತಂತ್ರವನ್ನು ತೆಲಂಗಾಣ ವಿಧಾನಸಭಾ ಚುನಾವಣೆಯಲ್ಲೂ ಪ್ರಯೋಗಿಸುತ್ತಿದೆ.

ತೆಲಂಗಾಣಕ್ಕೆ ಆರು ಗ್ಯಾರಂಟಿಗಳನ್ನು ಘೋಷಿಸಿರುವ ಕಾಂಗ್ರೆಸ್, ಕರ್ನಾಟಕದಲ್ಲಿ ನೀಡಿದ್ದ ಭರವಸೆಗಳನ್ನು ಯಶಸ್ವಿಯಾಗಿ ಜಾರಿಗೆ ತಂದಿರುವುದನ್ನು ಮತದಾರರ ಮುಂದಿಡಲು ಪ್ರಯತ್ನಿಸುತ್ತಿದೆ.

ಕರ್ನಾಟಕ ಮಾದರಿಯನ್ನು ಉತ್ತೇಜಿಸುವ ಭಾಗವಾಗಿ ಕಾಂಗ್ರೆಸ್, ಕರ್ನಾಟಕದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ನೆರೆಯ ರಾಜ್ಯದ ಕೆಲವು ನಾಯಕರೊಂದಿಗೆ ಹಲವಾರು ಸಭೆಗಳು, ರೋಡ್ ಶೋಗಳನ್ನು ಯೋಜಿಸಿದೆ.

ತೆಲಂಗಾಣ ಕಾಂಗ್ರೆಸ್ ಅಧ್ಯಕ್ಷ ರೇವಂತ್ ರೆಡ್ಡಿ ಆರು ಗ್ಯಾರಂಟಿಗಳನ್ನು ಘೋಷಿಸಿದ್ದಾರೆ. ಕಾಮಾರೆಡ್ಡಿ ಕ್ಷೇತ್ರದಲ್ಲಿ ರೇವಂತ್ ರೆಡ್ಡಿ ಪರ ಸಿಎಂ ಸಿದ್ದರಾಮಯ್ಯ ಪ್ರಚಾರ ನಡೆಸಿದರು. ಸಿಎಂ ಕೆಸಿಆರ್ ವಿರುದ್ಧ ರೇವಂತ್ ಗೆಲ್ಲುವುದು ಖಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಕಾಂಗ್ರೆಸ್ ಅಧಿಕಾರಕ್ಕೆ ಬಂದ ನೂರು ದಿನದಲ್ಲಿ ಗ್ಯಾರಂಟಿಗಳನ್ನು ಜಾರಿ ಮಾಡಲಾಗುತ್ತದೆ ಎಂಬ ಭರವಸೆಯನ್ನು ಸಿಎಂ ಸಿದ್ದರಾಮಯ್ಯ ನೀಡಿದರು. ಕೆಸಿಆರ್ ಕರ್ನಾಟಕಕ್ಕೆ ಬಂದು ಗ್ಯಾರಂಟಿಗಳ ಜಾರಿಯನ್ನು ನೋಡಲಿ ಎಂದು ಸವಾಲು ಹಾಕಿದರು.

ತೆಲಂಗಾಣದಲ್ಲಿ ಕಾಂಗ್ರೆಸ್‌ನಲ್ಲಿ ಆರು ಗ್ಯಾರಂಟಿಗಳಿವು: ಪ್ರತಿ ತಿಂಗಳು ಅತ್ತೆಗೆ 4,000 ರೂ., ಸೊಸೆಗೆ 2,500 ರೂ., ಪ್ರತಿ ಹೆಣ್ಣುಮಗುವಿನ ಖಾತೆಗೆ ಪ್ರತಿ ತಿಂಗಳು 2,500 ರೂ. (ಮಹಾಲಕ್ಷ್ಮಿ ಯೋಜನೆ), ಪಿಂಚಣಿ ಮೊತ್ತ 2,000 ರೂ.ನಿಂದ 4,000 ರೂ.ಗೆ ಹೆಚ್ಚಳ, 500 ರೂಪಾಯಿಗೆ ಒಂದು ಗ್ಯಾಸ್ ಸಿಲಿಂಡರ್, ಮನೆ ನಿರ್ಮಾಣಕ್ಕೆ 5 ಲಕ್ಷ ರೂ. ನೆರವು, ಬಡವರಿಗೆ 200 ಯೂನಿಟ್‌ವರೆಗೂ ಉಚಿತ ವಿದ್ಯುತ್.

ಎಸ್. ಶ್ರೀಕಾಂತ್‌ಗೆ ಪಿಎಚ್.ಡಿ ಪದವಿ



ಮೈಸೂರು, ನ.11– ಡಾ. ಆರ್.ಎಲ್. ಜಗದೀಶ್ ಅವರ ಮಾರ್ಗದರ್ಶನದಲ್ಲಿ ಎಸ್. ಶ್ರೀಕಾಂತ್ ಅವರು ಪಾಲಿಮರ್ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ದೀಪಾವಳಿಗೆ ಬೆಳಕಾಗಲು 'ದೂರ'ದ ದೀಪಗಳ ಆಗಮನ


● ಮೌಲ್ಡ್ ದೀಪಗಳ ಹಾವಳಿಯಿಂದ ತತ್ತರಿಸಿದ ಕುಂಬಾರಿಕೆ ● ಕುಲಕಸುಬು ಆಧಾರಿತ ಮಣ್ಣಿನ ದೀಪ ಬಳಸಲು ಮನವಿ

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು,ನ.11– ಹೊರ ರಾಜ್ಯಗಳಿಂದ ಆಮದಾಗಿರುವ ಮೌಲ್ಡ್ ದೀಪಗಳ ಹಾವಳಿ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಬೆಳಕಿನ ಹಬ್ಬ ದೀಪಾವಳಿಗೆ ಬೆಳಕಾಗಬೇಕಾಗಿದ್ದ ಕುಂಬಾರಿಕೆಯ ಕುಲಕಸುಬು ಆಧಾರಿತ ಮಣ್ಣಿನ ದೀಪಗಳು ಕ್ಷೀಣಿಸಲಾರಂಭಿಸಿದೆ.

ಬೆಳಕಿನ ಹಬ್ಬ ದೀಪಾವಳಿಗೆ ಕಳೆದ ಕೆಲ ದಶಕಗಳಿಂದಲೂ ಮೈಸೂರು ಸೇರಿದಂತೆ ಸುತ್ತಮುತ್ತಲಿನ ಜಿಲ್ಲೆಗಳಿಗೆ ಎರಡು ಲಕ್ಷಕ್ಕೂ ಅಧಿಕ ಮಣ್ಣಿನ ದೀಪಗಳನ್ನು ಸರಬರಾಜು ಮಾಡುತ್ತಿದ್ದ ಕುಂಬಾರಿಕೆ ಕುಲಕಸುಬುದಾರರು ಇದೀಗ ಸಂಕಷ್ಟಕ್ಕೀಡಾಗಿದ್ದಾರೆ. ಅಲಂಕಾರಿಕಾ ಮೌಲ್ಡ್ ದೀಪಗಳ ಹಾವಳಿ ವರ್ಷದಿಂದ ವರ್ಷಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಲಗ್ಗೆ ಇಡುತ್ತಿರುವುದರಿಂದ ಕುಂಬಾರರ ಮಣ್ಣಿನ ಹಣತೆಗಳಿಗೆ ಭಾರಿ ಹೊಡೆತ ಉಂಟಾಗುತ್ತಿದೆ. ಗುಡಿ ಕೈಗಾರಿಕೆಗೆ ಪ್ರೋತ್ಸಾಹ ನೀಡಲು ಕೇಂದ್ರ ಸರ್ಕಾರ 'ಮೇಕ್ ಇನ್ ಇಂಡಿಯಾ' ಕಾರ್ಯಕ್ರಮ ರೂಪಿಸಿರುವ ಬೆನ್ನಲ್ಲೇ ಮೈಸೂರಲ್ಲಿ ಕುಂಬಾರಿಕೆ ಕುಲಕಸುಬಿಗೆ ಭಾರಿ ಪ್ರಮಾಣದ ಹೊಡೆತ ಬೀಳಲಾರಂಭಿಸಿದೆ.

ಮಂಕಾಗುತ್ತಿದೆ ದೀಪಗಳ ತಯಾರಿ: ಪ್ರತಿ ವರ್ಷ ದೀಪಾವಳಿಗೆ ಮಣ್ಣಿನ ಹಣತೆಗಳನ್ನು ಲಕ್ಷ ಲಕ್ಷ ಸಂಖ್ಯೆಯಲ್ಲಿ ತಯಾರಿಸುತ್ತಿದ್ದ ಕುಂಬಾರರು ಇದೀಗ ಮಣ್ಣಿನ ಹಣತೆ ತಯಾರಿಸುವ ಕಾಯಕದಿಂದ ವಿಮುಖರಾಗುತ್ತಿದ್ದಾರೆ. ದೀಪವೊಂದಕ್ಕೆ 1.50 ರೂ ನಿಂದ 2 ರೂ.ಗೆ ಮಾರಾಟ ಮಾಡುತ್ತಿದ್ದರೂ ಖರೀದಿಸುವವರ ಸಂಖ್ಯೆ ಕ್ಷೀಣಿಸುತ್ತಿರುವುದರಿಂದ ಮಣ್ಣಿನ ದೀಪ ತಯಾರಿಕೆಯ ಕಸುಬು ಅನುಸರಿಸುತ್ತಿದ್ದ ಕುಂಬಾರರು ದೀಪಗಳ ತಯಾರಿ ಕೆಲಸದಿಂದ ದೂರ ಸರಿಯುತ್ತಿದ್ದಾರೆ. ಆಧುನಿಕತೆಗೆ ಮಾರುಹೋಗುತ್ತಿರುವ ಜನ ದೀಪಾವಳಿ ಆಚರಣೆಯಲ್ಲಿ ಪ್ರತಿಷ್ಠೆ ಹಾಗೂ ಆಡಂಬರದ ಲೇಪನಕ್ಕಾಗಿ ಅಲಂಕಾರಿಕಾ ಮೌಲ್ಡ್ ದೀಪಗಳನ್ನು ಹೆಚ್ಚಾಗಿ ಬಳಸಲು ಮುಂದಾಗುತ್ತಿರುವುದೇ ಮಣ್ಣಿನ ಹಣತೆಗಳ ತಯಾರಿಕೆಯ ಮೇಲೆ ದುಷ್ಪರಿಣಾಮ ಬೀರಲಾರಂಭಿಸಿದೆ.





20 ರಿಂದ 250 ರೂ. ನೀಡಿ ಮೌಲ್ಡ್ ದೀಪಗಳನ್ನು ಖರೀದಿಸುವ ಜನ 1.50 ರೂ.ನಿಂದ 2 ರೂ. ನೀಡಿ ಮಣ್ಣಿನ ದೀಪ ಖರೀದಿಸಲು ಮುಂದಾಗುತ್ತಿಲ್ಲ. ಇದರಿಂದ ಬೇಡಿಕೆ ಕುಸಿಯುತ್ತಿರುವುದರಿಂದ ಮಣ್ಣಿನ ದೀಪಗಳ ತಯಾರಿಕೆ ವರ್ಷದಿಂದ ವರ್ಷಕ್ಕೆ ಮಂಕಾಗುತ್ತಿದೆ.

ಸಾಂಪ್ರದಾಯಿಕ 'ದೂರ'ದ ದೀಪ: ಬೆಳಕಿನ ಹಬ್ಬ ದೀಪಾವಳಿಯನ್ನು ಹಿಂದೂಗಳ ಮನೆಯಲ್ಲಿ ಸಂಭ್ರಮದಿಂದ ಆಚರಿಸುವ ವಾಡಿಕೆಯಿದೆ. ದೀಪಾವಳಿ ದಿನ ಮನೆ ಮುಂದೆ ದೀಪ ಬೆಳಗಿಸುವ ಸಂಪ್ರದಾಯವಿದೆ. ಪ್ರತಿ ವರ್ಷವೂ ಹೊಸ ಹೊಸ ದೀಪವನ್ನೇ ಬೆಳಗುವ ವಾಡಿಕೆಯಿದೆ. ಈ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ನಗರಿ ಮೈಸೂರು ನಗರ ಸೇರಿದಂತೆ ಸುತ್ತಮುತ್ತಲಿನ ಜಿಲ್ಲೆಗಳಿಗೆ ಕಳೆದ 17 ವರ್ಷದಿಂದಲೂ ಮೈಸೂರು ತಾಲೂಕಿನ ದೂರ ಗ್ರಾಮದ ಕುಂಬಾರ ಸಮುದಾಯದ 14 ಕುಟುಂಬಗಳ 50ಕ್ಕೂ ಹೆಚ್ಚು ಮಂದಿ ವಿವಿಧ ಬಗೆಯ ಮಣ್ಣಿನ ಹಣತೆ ತಯಾರಿಸಿ, ಸರಬರಾಜು ಮಾಡಿ ಸೈ ಎನಿಸಿಕೊಂಡಿದ್ದಾರೆ. ಇದರಿಂದ ದೂರ ಗ್ರಾಮದ ದೀಪಗಳು ಸಾಂಪ್ರದಾಯಿಕ ದೀಪ ಎಂಬ ಹೆಗ್ಗಳಿಕೆಗೆ ಪಾತ್ರವಾಗಿವೆ.

ನೆರವಾದ ಸಂಘ: ಆಧುನಿಕತೆ ಪರಿಣಾಮ ಕುಂಬಾರರ ಕುಲ ಕಸುಬಿಗೆ ಹಿನ್ನಡೆಯಾದ ಕಾರಣ ಅನೇಕ ಮಂದಿ ಕುಲ ಕಸುಬು ತ್ಯಜಿಸಿದ್ದಾರೆ. ಈ ಸಂದರ್ಭದಲ್ಲಿ ಈ ಹಿಂದೆ ದೂರ ಗ್ರಾಮದಲ್ಲಿ ಕೆಲ ಕುಂಬಾರ ಸಮುದಾಯದವರು ಸೇರಿ ನಿರ್ಮಿಸಿಕೊಂಡ 'ಕುಂಬಾರ ಕುಶಲ ಕೈಗಾರಿಕಾ ಸಹಕಾರ ಸಂಘ'ದ ಮೂಲಕ ಕುಂಬಾರಿಕೆ ಕುಲಕಸುಬನ್ನು ಮುಂದುವರೆಸಿಕೊಂಡು ಹೋಗಲಾರಂಭಿಸಿದ್ದಾರೆ. ಖಾದಿ ಬೋರ್ಡ್‌ನಿಂದ ಸಾಲ ಪಡೆದು, ಸಮುದಾಯದ ಮುಖಂಡರು ದಾನ ನೀಡಿದ ಸ್ಥಳದಲ್ಲಿ ಶೆಡ್ ನಿರ್ಮಿಸಿಕೊಂಡು, 14 ಕುಟುಂಬಗಳ ಸದಸ್ಯರು ದೀಪ ಸೇರಿದಂತೆ ಇನ್ನಿತರ ಮಣ್ಣಿನಿಂದ ವಸ್ತುಗಳನ್ನು ತಯಾರಿಸುತ್ತಿದ್ದಾರೆ. ಈ ಕುಂಬಾರ ಕುಶಲ ಕೈಗಾರಿಕಾ ಸಹಕಾರ ಸಂಘ 14 ಕುಟುಂಬ ಹಲವರಿಗೆ ನೆರವಾಗಿದೆ.

ದೀಪಗಳ ಹೋಲ್‌ಸೇಲ್ ಮಾರಾಟ: ದೂರ ಗ್ರಾಮದಲ್ಲಿ ತಯಾರಿಸಿದ ಮಣ್ಣಿನ ಹಣತೆಯನ್ನು ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗೆ ಸರಬರಾಜು ಮಾಡಲಾಗುತ್ತದೆ. ಮೈಸೂರು ನಗರ, ನಂಜನಗೂಡಿನ ಹಲವು ವ್ಯಾಪಾರಿಗಳಿಗೆ ಮಣ್ಣಿನ ದೀಪ ಸರಬರಾಜು ಮಾಡಲಾಗುತ್ತದೆ. ಗುಂಡ್ಲುಪೇಟೆ, ಚಾಮರಾಜನಗರದಲ್ಲೂ ದೂರದ ದೀಪಗಳು ದೀಪಾವಳಿಯಂದು ಬೆಳಗಲಿವೆ. ಚಿಕ್ಕ ದೀಪವೊಂದಕ್ಕೆ 1.50ರೂ., 2.50 ರೂ.ಗೆ ಮಾರಾಟ ಮಾಡಲಾಗುತ್ತಿದೆ. ದೊಡ್ಡ ದೀಪಗಳಿಗೆ 6 ರೂ, 8 ರೂ., ಅಯ್ಯಪ್ಪ ಸ್ವಾಮಿ ದೀಪಕ್ಕೆ 10ರಿಂದ 15 ರೂ. ದರ ನಿಗದಿ ಮಾಡಲಾಗಿದೆ. ಈ ವರ್ಷ 14 ಕುಟುಂಬವು 50ರಿಂದ 60 ಸಾವಿರ ಮಣ್ಣಿನ ದೀಪ ತಯಾರಿಸಿ ಮಾರುಕಟ್ಟೆಗೆ ಸರಬರಾಜು ಮಾಡಿದ್ದಾರೆ. ಕಳೆದ ಕೆಲ ವರ್ಷಗಳ ಹಿಂದೆ 2–3 ಲಕ್ಷ ಮಣ್ಣಿನ ದೀಪ ತಯಾರಿಸಿ, ಸರಬರಾಜು ಮಾಡಿದ್ದರು. ಆದರೆ, ಬೇಡಿಕೆ ಕುಸಿತದಿಂದ ಈ ಬಾರಿ 60 ಸಾವಿರ ದೀಪವಷ್ಟೇ ತಯಾರಿಸಲಾಗಿದೆ.

ಮೌಲ್ಡ್ ದೀಪಗಳಿಂದ ಕಸುಬಿಗೆ ಧಕ್ಕೆ



ಇತ್ತೀಚಿನ ವರ್ಷಗಳಲ್ಲಿ ಹೊರ ರಾಜ್ಯ ಹಾಗೂ ವಿವಿಧೆಡೆಯ ಕಾರ್ಖಾನೆಗಳಲ್ಲಿ ತಯಾರಾದ ಮೌಲ್ಡ್ ದೀಪಗಳಿಗೆ ಜನ ಆಕರ್ಷಿತರಾಗುತ್ತಿದ್ದಾರೆ. ಇದರಿಂದ ಕುಂಬಾರ ಕುಲಕಸುಬು ಮುಂದುವರೆಸಲು ಕಷ್ಟವಾಗುತ್ತಿದೆ. ದೂರ ಗ್ರಾಮದಲ್ಲಿ ಈ ಹಿಂದೆ 50ಕ್ಕೂ ಹೆಚ್ಚು ಕುಟುಂಬಗಳು ಈ ವೃತ್ತಿ ಮಾಡುತ್ತಿದ್ದವು. ಹೊರಗಿನಿಂದ ಬರುವ ವಸ್ತುಗಳಿಗೆ ಬೇಡಿಕೆ ವ್ಯಕ್ತವಾಗುತ್ತಿರುವುದರಿಂದ ನಮ್ಮ ಉತ್ಪನ್ನಗಳಿಗೆ ಬೇಡಿಕೆ ಕಡಿಮೆಯಾಗಿದೆ. ಇದರಿಂದ ಹಲವು ಮಂದಿ ಕುಲಕಸುಬಿನಿಂದ ದೂರ ಸರಿದಿದ್ದಾರೆ. ನಾವು 14 ಕುಟುಂಬಗಳು ಸಹಕಾರ ಸಂಘ ರಚಿಸಿಕೊಂಡು, ಪರಸ್ಪರ ಸಹಕಾರದಿಂದ ವೃತ್ತಿ ಮುಂದುವರೆಸಿಕೊಂಡು ಬರುತ್ತಿದ್ದೇವೆ. ದೀಪಾವಳಿ ಸೀಜನ್‌ನಲ್ಲಿ ದೀಪ ತಯಾರಿಸುತ್ತೇವೆ. ಉಳಿದ ದಿನಗಳಲ್ಲಿ ಹೂವಿನ ಕುಂಡ, ತುಳಸಿ ಕಟ್ಟೆ, ಧೂಪದ ಆರತಿ, ಮಣ್ಣಿನ ಟೇಬಲ್ ವಾಸ್ ಸೇರಿದಂತೆ ಇನ್ನಿತರ ವಸ್ತುಗಳನ್ನು ತಯಾರಿಸಿ, ಜೀವನ ನಿರ್ವಹಿಸುತ್ತಿದ್ದೇವೆ. ಸರ್ಕಾರ, ಮೌಲ್ಡ್ ದೀಪಗಳ ಆಮದು ಹಾಗೂ ಮಾರಾಟ ನಿರ್ಬಂಧಿಸಬೇಕು. ಕುಂಬಾರರ ಕುಲಕಸುಬಿಗೆ ಪ್ರೋತ್ಸಾಹ ನೀಡಬೇಕು. ಮೌಲ್ಡ್‌ನಿಂದ ತಯಾರಾದ ದೀಪಗಳಿಗೂ, ಕೈಯ್ಯಲ್ಲಿ ತಯಾರಿಸಿದ ಮಣ್ಣಿನ ದೀಪಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಮಣ್ಣಿನ ದೀಪ ಪರಿಸರ ಸ್ನೇಹಿ ದೀಪವಾಗಿದೆ. ಯಾವುದೇ ಬಣ್ಣ ಬಳಸದೆ ತಯಾರಿಸುವ ಈ ದೀಪಗಳನ್ನು ಸೌದೆಯಿಂದ ಬೇಯಿಸಿ ತಯಾರಿಸಲಾಗುತ್ತದೆ. ಇಷ್ಟೆಲ್ಲಾ ಶ್ರಮ ವಹಿಸಿದರೂ, ಜನ ಮಾತ್ರ ಅಲಂಕಾರಿಕ ಮೌಲ್ಡ್ ದೀಪಗಳತ್ತ ಮಾರುಹೋಗುತ್ತಿರುವುದು ವಿಪರ್ಯಾಸ. ಇನ್ನಾದರೂ ದೀಪಾವಳಿ ಆಚರಣೆ ವೇಳೆ ಮಣ್ಣಿನ ದೀಪಗಳನ್ನೇ ಬಳಸುವ ಮೂಲಕ ಕುಲಕಸುಬು ಮುಂದುವರೆಸಲು ನೆರವಾಗಬೇಕು.

– **ಗೋವಿಂದರಾಜು,** ಕುಂಬಾರ ಕುಶಲ ಕೈಗಾರಿಕಾ ಸಹಕಾರ ಸಂಘದ ಸದಸ್ಯ

ಶ್ರೀ ಸಾಯಿನಾಥಾಯ ನಮಃ

ದೀಪಾವಳಿಯಿಂದ ದೀಪಾವಳಿಗೆ ವರ್ಷ ಭವಿಷ್ಯ 2023-2024



ವಿಜಯ್ ಕೆ.ಎ.
MBA, Advance Diploma in Astrology
ಜ್ಯೋತಿಷ ವಿದ್ವಾಂಸ ವಿ.ಕೇಶವಮೂರ್ತಿ
ಇವರ ಸುಪುತ್ರ
ಮೊಬೈಲ್: 9739548720



ಶ್ಲೋಕ:-ಯದುಪಚಿತಮನ್ಯ ಜನ್ಮನಿ ಶುಭಾಶುಭಂ
ತಸ್ಯ ಕರ್ಮಣಃ ಪ್ರಾಪ್ತಿಮ್।
ವ್ಯಿಜ್ಞಯತಿ ಶಾಸ್ತ್ರಮೇತತ್ತಮಸಿ
ದ್ರವ್ಯಾಣಿ ದೀಪ ಇವ॥

ಅರ್ಥ:- ಈ ಜ್ಯೋತಿಶಾಸ್ತ್ರವು ಕತ್ತಲೆಯಲ್ಲಿರುವ ವಸ್ತುಗಳನ್ನು ಬೆಳಗಿಸುವ ದೀಪದಂತೆ ಪ್ರಾಣಿಗಳ ಜನ್ಮ ಜನ್ಮಾಂತರದ ಶುಭಾಶುಭ ಕರ್ಮಗಳನ್ನೂ, ಅವುಗಳ ಫಲವನ್ನೂ ವ್ಯಕ್ತಪಡಿಸುತ್ತದೆ.

ಮೇಷ



ಚು, ಚೆ, ಚೊ, ಲ, ಲಿ, ಲು, ಲೆ, ಲೊ, ಅ.

ಬೃಹಸ್ಪತಿ ಎಂಬ ನಾಮಾಂಕಿತವುಳ್ಳ ಬೃಹತ್ ಗ್ರಹವೂ, ಶುಭಕರ್ತನೂ ಆದ ಶ್ರೀಗುರು ಮುಂದಿನ ಏಪ್ರಿಲ್‌ವರೆಗೆ ನಿಮ್ಮ ಜನ್ಮರಾಶಿಯಲ್ಲೇ ಸಂಚರಿಸುವ ಪರಿಣಾಮ ನೀವಿರುವ ಸ್ಥಾನಕ್ಕೆ ಚ್ಯುತಿ ಉಂಟಾಗುವುದು. ಹಾಕಿದ ಬಂಡವಾಳಕ್ಕೆ ನಷ್ಟ, ಅನಾವ್ರಯವಾಗುವುದು. ಸಜ್ಜನರ ಜೊತೆ ವ್ಯಾಜ್ಯಗಳಿಂದ ಬವಣೆ ಪಡುವಿರಿ. ಸ್ವದೇಶ ಅಥವಾ ಜನ್ಮ ಸ್ಥಳ ತ್ಯಾಗದಿಂದ ಕಷ್ಟಗಳು ಎದುರಾಗುವುದು. ನಂತರ ಮುಂದಿನ ದೀಪಾವಳಿಯವರೆಗೆ ದ್ವಿತೀಯದಲ್ಲಿ ಗೋಚರಿಸುವಾಗ ಶುಭಪ್ರದನಾಗಿ ನಾನಾ ವಿಧದಿಂದ ಧನಾರ್ಜನೆಯಾಗಿ ನಿವೇಶನ, ಮನೆ ಹೊಂದುವ ಆಶಯವಿದ್ದರೆ ಸಾಕಾರವಾಗುವುದು. ಕುಟುಂಬದಲ್ಲಿ ಸಂತಸದ ವಾತಾವರಣ ಮೂಡುವುದು. ಮಂಗಳ ಕಾರ್ಯಗಳು ಜರುಗುವುದು. ವಿದ್ಯಾರ್ಥಿಗಳು ಯಶಃ ಕೀರ್ತಿಗಳಿಗೆ ಭಾಜನರಾಗುವರು. ಮುಂದಿನ ದೀಪಾವಳಿಯವರೆಗೂ ಲಾಭ ಭಾವದಲ್ಲಿ ಸಂಚರಿಸುವ ಸೂರ್ಯಪುತ್ರನಾದ ಶನಿದೇವನು, ಧನ-ಧಾನ್ಯ-ಲಾಭ, ಅಭೀಷ್ಟ ಸಿದ್ಧಿ, ಸಕಲ ಕಾರ್ಯಗಳಲ್ಲಿ ಸಫಲತೆಯನ್ನು ದಯಪಾಲಿಸುವನು. ಕೃಷಿಯಿಂದಲೂ, ಪಶುಗಳಿಂದಲೂ ಅಧಿಕ ಲಾಭ, ಬಿಲ್ಡಿಂಗ್ ಗುತ್ತಿಗೆದಾರರಿಗೆ ಉತ್ತಮ ಯೋಜನೆಗಳನ್ನು ನೀಡುವುದರ ಜೊತೆಗೆ ನಿಮ್ಮ ಸ್ವಭಾವದಲ್ಲಿ ತೀಕ್ಷ್ಣತೆಯನ್ನು ನೀಡಲಿದ್ದಾನೆ. ಕಬ್ಬಿಣ, ಸಿಮೆಂಟು ವ್ಯಾಪಾರಗಳಲ್ಲಿ ಅಧಿಕ ಲಾಭ ದೊರೆಯುವುದು. ನ್ಯಾಯಾಲಯ ವಿಚಾರಗಳಲ್ಲಿ ಜಯವು ದೊರಕುವುದು.

ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿ.

ವೃಷಭ



ಇ, ಉ, ಎ, ಒ, ವ, ವಿ, ವು, ವೆ, ವೊ.

ಈ ಬೆಳಕಿನ ಹಬ್ಬದಿಂದ ಯುಗಾದಿಯವರೆಗೆ ವ್ಯಯಭಾವದಲ್ಲೂ ತದನಂತರ ದೀಪಾವಳಿಯವರೆಗೆ ಜನ್ಮ ರಾಶಿಯಲ್ಲೂ ಸಂಚರಿಸುವ ಕಾರಣ ನಿಮಗೆ ದೈವಾನುಕೂಲ ಕಡಿಮೆ ಎಂದೇ ಹೇಳಬೇಕಾಗುತ್ತದೆ. ಲಾಭದಲ್ಲಿ ನಡೆಯುತ್ತಿದ್ದ ವ್ಯಾಪಾರ, ವ್ಯವಹಾರಗಳು ನಷ್ಟವನ್ನು ಅನುಭವಿಸಬೇಕಾಗುವುದು. ಪ್ರಯತ್ನ ಪೂರ್ವಕವಾಗಿ ಮಾಡಿದ ಕೆಲಸಗಳಲ್ಲಿ ಅಸಫಲತೆ ಎದುರಾಗುವುದು. ಯಶೋ ನಾಶ ದುಃಖ ಪ್ರಸಂಗಗಳು ಎಷ್ಟೇ ಸಂಪಾದನೆ ಆದರೂ ದರಿದ್ರತ್ವ ಕಾಡುವುದು. ಕುಟುಂಬ ಸದಸ್ಯರ ಸಹವಾಸದಿಂದ ವಂಚಿತರಾಗುವಿರಿ. ಆಗಾಗ ಅನಾರೋಗ್ಯ ಕಾಡುವುದು. ಛಾಯಾ ನನ್ದನನಾದ ಶ್ರೀ ಶನಿದೇವ ದಶಮದಲ್ಲಿ 'ದಶಮೇರ್ಥಕ್ಷಯಶ್ಚ ವಿದ್ಯಾಕೀರ್ತಿಃ' ಎಂಬ ಋಷಿವಾಣಿಯಂತೆ ಅಲ್ಪ ಸ್ವಲ್ಪ ಧನ ನಷ್ಟವಾದರೂ, ವಿದ್ಯಾಪ್ರಸಂಗಗಳಲ್ಲಿ ವಿದ್ಯಾರ್ಥಿಗಳಿಗೆ ಉತ್ತಮ ಶ್ರೇಣಿ ಹಾಗೂ ಕೀರ್ತಿಗಳನ್ನು ದಯಪಾಲಿಸಲಿದ್ದಾನೆ. ದುಷ್ಟಕರ್ಮ ಪ್ರವೃತ್ತಿಯಿಂದ ನಿಮ್ಮ ಮಾನ, ಗೌರವಗಳಿಗೆ ಧಕ್ಕೆ ಉಂಟಾಗುವುದು. ಪಿತೃ ಸಮಾನ ವ್ಯಕ್ತಿಯ ವಿಯೋಗ ಉಂಟಾದೀತು.

ಅಂಜನೀಗರ್ಭ ಸಂಭೂತೋ । ವಾಯು ಪುತ್ರೋಸನಾತನಃ।
ಕುಮಾರೋ ಬ್ರಹ್ಮಚಾರೀಚ । ತಸ್ಮೈ ಶ್ರೀ ಹನುವತೇ ನಮಃ॥

ಈ ಮಂತ್ರ ನಿತ್ಯ ಜಪಿಸಿ.

ಮಿಥುನ



ಕ, ಕಿ, ಕು, ಘ, ಜ್ಞ, ಛ, ಕೆ, ಕೊ, ಹ, ಹಿ

ದೀಪಾವಳಿಯಿಂದ ಯುಗಾದಿಯವರೆಗೆ ಲಾಭ ಸ್ಥಾನದಲ್ಲೂ, ತದನಂತರ ದೀಪಾವಳಿಯವರೆಗೆ ವ್ಯಯಸ್ಥಾನದಲ್ಲಿ ಗೋಚರಿಸುವ ಸರ್ವ ವಿದ್ಯಾನಿಧಿಯಾದ ಶ್ರೀ ಗುರು ಜಯಾಪಜಯ, ಲಾಭ ಅಲಾಭಗಳನ್ನು ಸಮನಾಗಿ ನೀಡಲಿದ್ದಾನೆ. ಪ್ರಾರಂಭಕ್ಕೆ ಮನೆಯಲ್ಲಿ ವಿವಾಹಾದಿ ಮಂಗಳ ಕಾರ್ಯಗಳು ನಡೆಯುವುದು. ಪರೀಕ್ಷೆ, ಚುನಾವಣೆ, ನ್ಯಾಯಾಲಯಗಳಲ್ಲಿ ಶುಭ ಫಲವನ್ನು ಕಾಣುವಿರಿ. ವಾಹನ, ಭವನ ಹೊಂದುವ ಯೋಗವಿದೆ. ನಂತರ ವ್ಯಯಕ್ಕೆ ಬಂದಾಗ ವರಮಾನಕ್ಕಿಂತ ಖರ್ಚುಗಳು ಹೆಚ್ಚಾಗುವುದು. ಸಾಲ ಮಾಡಬೇಕಾದ ಪರಿಸ್ಥಿತಿ ಉಂಟಾಗುವುದು. ಸತ್ಪತ್ನಿಯ ಸಹವಾಸದಿಂದ ವಂಚಿತರಾಗುವಿರಿ. ಶತ್ರುಗಳು ಮೇಲುಗೈ ಸಾಧಿಸುವರು. ನೀತಿಮಾರ್ಗ ಕೋವಿದನಾದ ಶ್ರೀ ಶನಿದೇವನು ವರ್ಷ ಪೂರ್ತಿ ನವಮದಲ್ಲಿ ಭ್ರಮಿಸುವುದರ ಪರಿಣಾಮ ದುಃಖ, ಮನೋ ವ್ಯಾಧಿಗಳು, ಭಾರ್ಯಾ-ಪುತ್ರರಲ್ಲಿ ಕಲಹ ಪ್ರಸಂಗಗಳು. ಧಾರ್ಮಿಕ ಕಾರ್ಯಗಳಲ್ಲಿ ವಿಘ್ನಗಳು. ಸಮಾಜ ವಿರೋಧಿ ಕೃತ್ಯದಿಂದ ಆರಕ್ಷಕ ಠಾಣಾ ದರ್ಶನ. ಸಹೋದರರೊಡನೆ ಬೇದಾಭಿಪ್ರಾಯ. ತೀರ್ಥಯಾತ್ರೆಗಳು ಸಂಭವಿಸುತ್ತವೆ.

ಶ್ರೀ ವಿಷ್ಣು ಸಹಸ್ರನಾಮ ಪಠಿಸಿ.

ಕಟಕ



ಹಿ, ಹು, ಹೆ, ಹೊ, ಡ, ಡಿ, ಡು, ಡೆ, ಡೊ

ಬರುವ ಯುಗಾದಿಯವರೆಗೆ ಶ್ರೀ ಗುರು ದಶಮದಲ್ಲಿ ಗೋಚರಿಸುವಾಗ ದೀಪಾವಳಿಯ ಪ್ರಕಾಶ ಮಂಕಾಗಿಯೇ ತೋರಲಿದೆ. ಸ್ಥಾನ ಚ್ಯುತಿ, ಗೌರವ, ಪ್ರತಿಷ್ಠೆಗಳಿಗೆ ಧಕ್ಕೆ. ಸರ್ಕಾರಿ ಅಧಿಕಾರಿಗಳಿಗೆ ರಾಜಕಾರಣಿಗಳಿಗೆ ನ್ಯಾಯಾಂಗದ ಭಯ ಕಾಡುತ್ತದೆ. ಮಾಡುವ ಕಾರ್ಯಗಳಲ್ಲಿ ಅಡಚಣೆಗಳು ಉಂಟಾಗುವುದು. ಪದೇ ಪದೆ ಅನಾರೋಗ್ಯ ನಿಮಿತ್ತ ವೈದ್ಯರ ಸಂದರ್ಶನ. ಯುಗಾದಿಯ ನಂತರ ಏಕಾದಶ ಸಂಚಾರಿ ಗುರುವಿನಿಂದ ಧನ-ಧಾನ್ಯ-ಲಾಭ, ಗೃಹದಲ್ಲಿ ಶುಭ ಕಾರ್ಯಾನುಕೂಲಗಳು, ಐಶ್ವರ್ಯ ಆಸ್ತಿ ಪ್ರಾಪ್ತಿಯೂ ಉಂಟಾಗುವುದು. ಶ್ರೀ ಶನಿರಾಜನು ಅಷ್ಟಮದಲ್ಲಿ ಪರಿಭ್ರಮಿಸುವ ಪರಿಣಾಮ ಸಾಮಾಜಿಕ ಜೀವನದಲ್ಲಿ ದೀನತೆ, ದುಷ್ಟ ಜನರ ಸಹವಾಸದಿಂದ ತೊಂದರೆಗೆ ಗುರಿಯಾಗುವಿರಿ. ವಯಸ್ಸಿಗೆ ಬಂದ ಪುತ್ರರು ನಿಮ್ಮನ್ನು ವಿರೋಧಿಸುವರು, ನೀಚಕರ್ಮಾಸಕ್ತಿ, ಹೀನ ಸ್ತ್ರೀಯರಿಂದ ನಿಮ್ಮ ಪ್ರತಿಷ್ಠೆಗೆ ಕುಂದು ಉಂಟಾಗಬಹುದು. ವಾಹನ ಡ್ರೈವ್ ಮಾಡುವಾಗ ಮನೆಯಲ್ಲಿ ನಿಮ್ಮ ಪ್ರೀತಿ ಪಾತ್ರರಿದ್ದಾರೆ ಎಂಬ ನೆನಪಿರಲಿ.

ಶ್ರೀ ಶನಿ ಮಹಾತ್ಮೆ ಕಥೆ ಓದಿ

ಸಿಂಹ



ಮ, ಮಿ, ಮು, ಮೆ, ಮೊ, ಟ, ಟಿ, ಟು, ಟೆ

ಮುಂದಿನ ಯುಗಾದಿಯವರೆಗೆ ನಿಮ್ಮ ಇಷ್ಟಾರ್ಥಗಳು ಸಿದ್ಧಿಸಲು ಲಕ್ಷ್ಮೀಸ್ಥಾನದಲ್ಲಿ ಪರಿಭ್ರಮಿಸುತ್ತಿರುವ ಬೃಹಸ್ಪತಿಯೇ ಕಾರಣ. ಕೈಗೊಂಡ ಕಾರ್ಯಗಳಲ್ಲಿ ಜಯ, ಸಫಲತೆಯನ್ನು ಹೊಂದುವಿರಿ. ದವಸ-ಧಾನ್ಯ, ವ್ಯಾಪಾರ, ಬಂಗಾರ ವ್ಯವಹಾರಗಳಿಂದ ಹೆಚ್ಚಿನ ಲಾಭ. ನಿವೇಶನ, ಗೃಹ ಖರೀದಿಗೆ ಸುಸಮಯವೆಂದು ಹೇಳಬಹುದು. ವಿವಾಹಾರ್ಥಿಗಳಿಗೆ ಬಾಳ ಸಂಗಾತಿ ದೊರೆಯುವರು. ನಂತರ ದಶಮಕ್ಕೆ ಬಂದಾಗ ಕಾರ್ಯಗೇಡು. ಸರ್ಕಾರಿ ಅಧಿಕಾರಿಗಳಿಗೆ, ರಾಜಕಾರಣಿಗಳಿಗೆ ಪದಚ್ಯುತಿ ಉಂಟಾದೀತು. ಹೆಚ್ಚಿನ ಸಂಚಾರಗಳಿಂದ ದೇಹಕ್ಕೆ ದಣಿವು. ನ್ಯಾಯದೇವತೆ ಶನಿದೇವ ಮುಂದಿನ ದೀಪಾವಳಿಯವರೆಗೂ ಸಪ್ತಮ ವಾಸಿಯಾಗಿದ್ದು, ಪಾಲುದಾರಿಕೆ ವ್ಯವಹಾರಗಳಲ್ಲಿ ನಷ್ಟ ಉಂಟಾಗುವುದು. ಆಗಾಗ ಶ್ರೀಮತಿಯೊಂದಿಗೆ ವಿರಸಗಳು, ಅನ್ಯ ಸ್ತ್ರೀಯರಿಂದ ತೊಂದರೆ. ಸಮಾಜ ವಿರೋಧಿ ಕಾರ್ಯಗಳನ್ನು ಮಾಡದಿರಿ. ಅನ್ಯಥಾ ತೊಂದರೆಗೆ ಗುರಿಯಾಗುವಿರಿ. ಅಪವಾದದ ಭೀತಿ ಹಾಗೂ ಮಾನಸಿಕವಾಗಿ ಕರುಣಾಜನಕ ಸ್ಥಿತಿ. 'ಓಂ ಕ್ಲೀಂ ಬ್ರಹ್ಮಣೇ ಜಗದಾಧಾರಾಯ ನಮಃ' ಮಂತ್ರ ಜಪಿಸಿ.

ಕನ್ಯಾ



ಟೊ, ಪ, ಪಿ, ಪು, ಷ, ಣ, ಠ, ಪೆ, ಪೊ

'ತಮಸೋಮ ಜ್ಯೋತಿರ್ಗಮಯ' ಅಂದರೆ ಮುಂದಿನ ಯುಗಾದಿಯ ತಾಮಸ ಫಲದಾಯಿಯಾಗಿರುವ ಶ್ರೀಗುರು ನಂತರ ಮಾತ್ರ ಬೆಳಕಿನ ಕಡೆಗೆ ಕೊಂಡೊಯ್ಯಲಿರುವನು. ಅಲ್ಲಿಯವರೆಗೆ ಋಣಾತ್ಮಕ ಫಲಗಳನ್ನು ಅನುಭವಿಸಬೇಕಾಗುವುದು. 'ಅಷ್ಟಮ' ಗುರು ಎಂದರೆ 'ಕಷ್ಟಮ' ಗುರುವೆಂದೇ ಅರ್ಥ. ಸಾಂಸಾರಿಕ ಶೋಕ, ಶಾರೀರಿಕ ವ್ಯಾಧಿ, ಬಂಧನಗಳಂತಹ ಕಷ್ಟಗಳನ್ನೇ ನೀಡಲಿರುವನು. ಬುದ್ಧಿ ಅಡ್ಡದಾರಿಗೆ ಹೋದೀತು. ನಡೆ ನುಡಿಗಳಲ್ಲಿ ತುಂಬಾ ಎಚ್ಚರಿಕೆಯಿಂದ ಇರಬೇಕು. ಕೋಪ-ತಾಪಗಳಿಂದ ನಷ್ಟವೇ ಹೆಚ್ಚು. ವಾಹನ ಚಾಲನೆಯಲ್ಲಿ ಹಾನಿಕಾರಕ ಘಟನೆ ಸಂಭವಿಸಬಹುದು. ಆದ್ದರಿಂದ ವೇಗ ತ್ಯಜಿಸಿ. ಯುಗಾದಿಯ ನಂತರ ಲಕ್ಷ್ಮೀ ಸ್ಥಾನಕ್ಕೆ ಬೃಹಸ್ಪತಿಯು ಕಾರ್ಯ ಜಯ, ಧನ-ಧಾನ್ಯ ಲಾಭ, ಆಸ್ತಿ ಪಾಸ್ತಿ ಖರೀದಿಗೆ ಬಲವನ್ನೂ ನೀಡಲಿದ್ದಾನೆ. ವಿವಾಹಾರ್ಥಿಗಳಿಗೆ ಬಾಳ ಸಂಗಾತಿ ದೊರೆಯುವರು. ಶನಿ ಮಹಾರಾಜನು ಈ ವರ್ಷ ಪೂರ್ತಿ ಷಷ್ಠದಲ್ಲಿದ್ದು ನಿಮ್ಮನ್ನು ಸರ್ವ ವಿಧದಿಂದಲೂ ಸಂರಕ್ಷಿಸುವನು. ಅಂದರೆ ನೀವು ಶತ್ರುಗಳನ್ನು ನಿಗ್ರಹಿಸುವಿರಿ. ಹಳೆಯ ಕಾಯಿಲೆ ಹಾಗೂ ಸಾಲಗಳಿಂದ ಮುಕ್ತರಾಗುವಿರಿ.

ದೀನರಿಗೆ ಸಹಾಯ ಮಾಡಿ.

ತುಲಾ



ರ, ರಿ, ರು, ರೆ, ರೊ, ತ, ತಿ, ತು ತೆ

ಏಪ್ರಿಲ್ 2024ರವರೆಗೆ ಶ್ರೀ ಗುರುವಿನ ಪರಿಪೂರ್ಣ ಕೃಪೆ ನಿಮ್ಮ ಮೇಲೆ ಉಂಟಾಗಿರುವುದರಿಂದ ದುಃಖದ ಕಾರ್ಮೋಡವೆಲ್ಲ ಕರಗಿ ಹೊಸ ಪ್ರಯತ್ನಗಳಲ್ಲಿ ಜಯಶೀಲರಾಗುವಿರಿ. ಅಧಿಕಾರಿಗಳ ಅನುಗ್ರಹದಿಂದ ಕಾರ್ಯಸಿದ್ಧಿ. ಆರೋಗ್ಯ ಭಾಗ್ಯ, ವಿವಾಹಯೋಗ್ಯರಿಗೆ ಕಂಕಣಬಲ ಒದಗಿ ಬರುವುದು. ಬುದ್ಧಿವಂತಿಕೆಯಿಂದಲೂ, ವಾಕ್ಪಟುತ್ವದಿಂದಲೂ ಆಸ್ತಿ ಗಳಿಸುವಿರಿ. ವಿದ್ವಜ್ಜನರಿಗೆ ಸನ್ಮಾನ. ಪುಣ್ಯಕ್ಷೇತ್ರಕ್ಕೆ ಯಾತ್ರೆ, ಸತ್ಕರ್ಮಾಚರಣೆ. ಮನೆಯಲ್ಲಿ ಮಂಗಳವಾದ್ಯ ಮೊಳಗೀತು. ನಂತರ ಅಷ್ಟಮಕ್ಕೆ ಬರುವ ಗುರುವಿನಿಂದ ಹಾನಿಕಾರಕ ಘಟನೆಗಳು, ಧನ ನಷ್ಟ, ಅನಾರೋಗ್ಯ ಹಾಗೂ ನಾನಾ ವಿಧವಾದ ಸಂಕಷ್ಟಗಳಿಂದ ಪೀಡಿಸಲ್ಪಡುತ್ತೀರಿ. ವಾಹನ ಚಲಿಸುವಾಗ ಸಂಯಮ ಮುಖ್ಯ, ವೇಗ ಕೂಡದು.

ವಾಯಸ ವಾಹನವಾದ ಶನಿದೇವನು ವರ್ಷ ಪೂರ್ತಿ ಪಂಚಮದಲ್ಲಿ ಗೋಚರಿಸುವಾಗ 'ಸುತಧನಹೀನಃ ಪಂಚಮಸ್ಥೆ' ಎಂಬ ಶಾಸ್ತ್ರವಾಕ್ಯದಂತೆ ಸುತರಲ್ಲಿ ವೈಮನಸ್ಯ, ಧನ ಹೀನತೆ, ಆಪ್ತ ಬಂಧುಗಳ ವಿಯೋಗ, ತಮ್ಮ ಜನರಿಂದ ದೂರವಿರಬೇಕಾದ ಪರಿಸ್ಥಿತಿಗಳು ಒದಗಿ ಬರುವುದು. ಧನ ಸಂಪತ್ತಿನ ಅವನತಿಯಾದೀತು. ಶ್ರೀಮತಿಯ ಆರೋಗ್ಯದಲ್ಲಿ ವ್ಯತ್ಯಯವಾದೀತು.

'ಓಂ ಹ್ರೀಂ ಕ್ಲೀಂ ಶ್ರೀಮ್' ಮಂತ್ರ ಜಪಿಸಿ.

ವೃಶ್ಚಿಕ



ತೊ, ನ. ನಿ, ನು, ನೆ, ನೊ, ಯ, ಯಿ, ಯು

ಮುಂದಿನ ಯುಗಾದಿಯವರೆಗೆ ಶ್ರೀ ಗುರುವು ಷಷ್ಠದಲ್ಲಿ ಸಂಚರಿಸುವುದರಿಂದ ಮನೆಯ ಮುಂದೆ ಜಿಂಕೆಯ ಮರಿ ಕುಣಿದರೂ, ಮನಸ್ಸಿಗೆ ಮುದವಿರದು. ಕೋಗಿಲೆಯ ಮಧುರ ಧ್ವನಿಯಾಗಲಿ, ನವಿಲಿನ ನರ್ತನವಾಗಲಿ ಬೇಕೆನಿಸದು. ಆಗಾಗ ಆರೋಗ್ಯ ಕೆಡಬಹುದು. ವೈದ್ಯೋಪಚಾರಕ್ಕೆ ಅಧಿಕ ಹಣ ವ್ಯಯವಾಗುವುದು. ಕೂಡಿಟ್ಟ ಹಣ ಕರಗಿ ಸಾಲ ಮಾಡಬೇಕಾದ ಪರಿಸ್ಥಿತಿ ಉಂಟಾಗುವುದು. ಅಧೀರರಾಗುವ ಅವಶ್ಯಕತೆ ಇಲ್ಲ. ನಂತರ ಸಪ್ತಮ ಗುರುವಿನಿಂದ ವ್ಯಾಪಾರ, ವ್ಯವಹಾರಗಳಲ್ಲಿ ಧನಲಾಭ, ಬಂಧು ಮಿತ್ರರು ಸಮಯಕ್ಕೊದಗುತ್ತಾರೆ. ಗೃಹದಲ್ಲಿ ಶುಭ ಕಾರ್ಯಕ್ಕೆ ನಾಂದಿಯಾಗುವುದು. ಉತ್ತಮ ಕೆಲಸಗಳಿಂದ ಯಶಃ ಕೀರ್ತಿಗಳಿಗೆ ಭಾಜನರಾಗುವಿರಿ. ಚತುರ್ಥ ಶನಿದೇವನು ಅಶುಭದಾಯಕನಾಗಿದ್ದು ಕೋರ್ಟು ಕಚೇರಿ ವಿಚಾರಗಳು ನಿಮ್ಮ ವಿರುದ್ಧವಾಗಬಹುದು. ದುಷ್ಟ ಜನರ ಸಹವಾಸದಿಂದ ವೃಥಾ ತೊಂದರೆ ವಿವಾದಗಳಲ್ಲಿ ಸಿಲುಕುವಿರಿ. ರಿಯಲ್ ಎಸ್ಟೇಟ್ ವ್ಯವಹಾರಿಗಳು ಹಿನ್ನಡೆ ಹಾಗೂ ಆರ್ಥಿಕ ಸಮಸ್ಯೆಗಳನ್ನು ಎದುರಿಸಬೇಕಾದೀತು. ಉದ್ದಿಮೆದಾರರಿಗೆ ಸೇವಕ ವರ್ಗದವರ ಅಸಹಕಾರದಿಂದ ನಷ್ಟ ಉಂಟಾಗುವುದು.

ಕಾಗೆಗಳಿಗೆ ಆಹಾರ ತಿನ್ನಿಸಿ.

ಧನಸ್ಸು



ಯೆ, ಯೊ, ಬ, ಬಿ, ಬು, ಧ, ಭ, ಢ, ಬೆ

ಈ ದೀಪಾವಳಿಯ ಬೆಳಕಿನ ಪ್ರಕಾಶ ಬರುವ ಯುಗಾದಿಯವರೆಗೆ ಶ್ರೀ ಗುರುವಿನ ಅನುಗ್ರಹದಿಂದ ಉತ್ತಮವಾಗಿಯೇ ಪ್ರಜ್ವಲಿಸಲಿದೆ. 'ಶುಭ ಸುತ, ಕರಿ, ತುರಗ, ವೃಷಾನ್' ಎಂಬ ಶ್ಲೋಕಾರ್ಥದಂತೆ ಪುತ್ರರು, ಗಜ, ಅಶ್ವ, ಎತ್ತುಗಳನ್ನು ಹೊಂದುತ್ತಾರೆಂದು ಅರ್ಥ. ಒಳ್ಳೆಯ ನಡವಳಿಕೆ, ಜ್ಞಾನ ಸಂಪಾದನೆ, ಸಜ್ಜನರ ಸಮಾಗಮಗಳು ಲಭಿಸುತ್ತದೆ. ನೂತನ ಗೃಹ ನಿರ್ಮಾಣಕ್ಕೆ ಕಾಲ ಕೂಡಿ ಬಂದಿದೆ.

ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಸಫಲತೆಯನ್ನು ಹೊಂದುವಿರಿ. ವಧು-ವರ ಅನ್ವೇಷಣೆಯಲ್ಲಿ ಶುಭಫಲವನ್ನು ನಿರೀಕ್ಷಿಸಬಹುದು. ಯುಗಾದಿಯ ನಂತರ ಗೃಹದಲ್ಲಿ ಅಹಿತಕರವಾದ ವಾತಾವರಣ, ಮನಸ್ಸಿಗೆ ಚಿಂತೆ, ವ್ಯಾಕುಲತೆಗಳು, ವೃಥಾತಿರುಗಾಟಗಳು, ದೇಹಕ್ಕೆ ಆಯಾಸ. ಆದಾಯಕ್ಕಿಂತ ಖರ್ಚು ಜಾಸ್ತಿ. ಸಣ್ಣಪುಟ್ಟ ಆರೋಗ್ಯ ಸಮಸ್ಯೆ ಕಾಡುತ್ತದೆ.

ವರ್ಷಪೂರ್ತಿ ತೃತೀಯದಲ್ಲಿ ಸಂಚರಿಸುವ ರವಿಪುತ್ರ 'ಸೌಖ್ಯಮಮಿತಂ' ಎಂದರೆ ಹೆಚ್ಚಿನ ಸೌಖ್ಯ, ಸ್ಥಾನ ಲಭ, ವೃತ್ತಿ ಲಾಭ, ಧನ ಸಂಚಯ, ಶತ್ರು ದಮನದಂತಹ ಶುಭ ಫಲಗಳನ್ನು ಅನುಭವಿಸುವಿರಿ. ಪಶು ಸಂಪತ್ತು, ಕೃಷಿಯಿಂದ ಲಾಭ. ಸೇವಕರು ಆಜ್ಞಾನುವರ್ತಿಗಳಾಗಿರುತ್ತಾರೆ.

ಕಾಯಿಲೆಗಳಿಂದ ಮುಕ್ತಿ ದೊರೆಯುತ್ತದೆ.

ಮಕರ



ಬೊ, ಜ, ಜೆ, ಶಿ, ಶು, ಶೆ, ಶೊ, ಗ, ಗಿ

ಈ ದೀಪಾವಳಿಯಿಂದ ಪ್ರಥಮಾರ್ಧ ವರ್ಷದಲ್ಲಿ ಮಿಂಚಿನ ಸಂಚಲನವಾಗಲಾರದು. ಚತುರ್ಥ ಸಂಚಾರಿ ಶ್ರೀಗುರುವು ಚಿತ್ತ ಚಾಂಚಲ್ಯಕ್ಕೂ, ಮನೋವಿಕಾರಗಳಿಗೂ, ಅನಾರೋಗ್ಯ ಹಾಗೂ ಶತ್ರುಗಳಿಂದ ಕಾರಣೀಭೂತನಾಗುತ್ತಾನೆ. ಪಾಪಕಾರ್ಯಗಳಲ್ಲಿ ಆಸಕ್ತಿ ಉಂಟಾಗುತ್ತದೆ. ಒಂದರ ಮೇಲೊಂದರಂತೆ ಸಮಸ್ಯೆಗಳು ಎದುರಾಗುವುದು. ಈ ಸಮಯದಲ್ಲಿ ತಾಳ್ಮೆಯೇ ನಿಮ್ಮ ಮೂಲಮಂತ್ರವಾಗಿರಲಿ, ದ್ವಿತೀಯಾರ್ಧದಲ್ಲಿ ದೀರ್ಘ ಕಾಲದಿಂದ ನಿಂತಿದ್ದ ಕೆಲಸ ಕಾರ್ಯಗಳು ಪೂರ್ಣಗೊಳ್ಳುವುವು. ಅವಿವಾಹಿತರಿಗೆ ಕಂಕಣಬಲ, ಉದ್ಯೋಗ, ವ್ಯಾಪಾರ, ವ್ಯವಹಾರಗಳಲ್ಲಿ ಹೆಚ್ಚಿನ ಯಶಸ್ಸು, ಕುಟುಂಬದಲ್ಲಿ ಸಂತಸದ ವಾತಾವರಣ ಇರುತ್ತದೆ. ಮಹತ್ವದ ಯೋಜನೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸುವಿರಿ. ಸಾಡೇಸಾತಿ ಶನಿಯ ಕಡೆಯ ಚರಣದಲ್ಲಿರುವ ನಿಮಗೆ 'ರೂಪ ಸುಖಾಪವರ್ಜಿತ' ಎಂಬ ಜ್ಯೋತಿಷ ವಾಣಿಯಂತೆ ಮೊಗದಲ್ಲಿ ರೂಪಹೀನತೆ, ಜೀರ್ಣವಾದ ಶರೀರ, ತೇಜೋಹೀನವಾದ ವದನ, ಜೊತೆಗೆ ವಿಧ ವಿಧವಾದ ಕಷ್ಟಗಳು. ಯತ್ನ ಕಾರ್ಯಗಳಲ್ಲಿ ಅಸಫಲತೆಗಳು ಉಂಟಾಗುವುದು. ಐಶ್ವರ್ಯವಿದ್ದಾಗ್ಯೂ ಅನುಭವಿಸುವ ಯೋಗವಿರದು. ಪರಸ್ಥಳಕ್ಕೆ ತೆರಳಿ ಪಾಪ ಕರ್ಮಗಳನ್ನು ಎಸಗುವಿರಿ.

ಶ್ರೀ ಮಹಾಸುದರ್ಶನ ಮಂತ್ರ ಜಪಿಸಿ.

ಕುಂಭ



ಗು, ಗೆ, ಗೊ, ಸ, ಸಿ, ಸು, ಸೆ, ಸೊ, ದ

ಈ ದೀಪಾವಳಿಯಿಂದ ಮುಂದಿನ ದೀಪಾವಳಿಯವರೆಗೂ ಬೃಹಸ್ಪತಿ ಎಂಬ ನಾಮಾಂಕಿತ ಉಳ್ಳ ಬೃಹತ್ ಗ್ರಹ ಶ್ರೀ ಗುರು ತೃತೀಯ, ಚತುರ್ಥ ಸ್ಥಾನಗಳಲ್ಲಿ ಸಂಚರಿಸುವ ಪರಿಣಾಮ ಸ್ಥಾನ ಭ್ರಷ್ಟತೆಯ ಜೊತೆಗೆ ಬಹು ಕಲಹಗಳು ಉಂಟಾಗುವುದು. ಬಂಧು ಬಾಂಧವರ ವಿರೋಧವನ್ನು ಎದುರಿಸಬೇಕಾಗುವುದು. ಸರ್ಕಾರಿ ನೌಕರರಿಗೆ ಸರ್ವೀಸ್‌ನಲ್ಲಿ ತೊಂದರೆಯಾದೀತು. ಸ್ಥಳ ಬದಲಾವಣೆಯಿಂದ ಪರಸ್ಥಳದಲ್ಲಿ ಪರದಾಟಗಳು. ಕಲಿಯುಗ ದಂಡಾಧಿಕಾರಿಯಾದ ಶ್ರೀ ಶನಿ ಮಹಾತ್ಮನು ನಿಮ್ಮ ಜನ್ಮ ರಾಶಿಯಲ್ಲೇ ಭ್ರಮಿಸಲಿರುವ ಪರಿಣಾಮ ನಿಮಗೆ ಸರ್ವ ವಿಧದಲ್ಲೂ ಪರೀಕ್ಷಾ ಕಾಲ. ಸ್ವಜನ ವಿರೋಧ, ಭೀತಿಯ ಪ್ರಸಂಗಗಳು, ಕಾರ್ಪಣ್ಯ ಜೀವನ, ಧನ-ಧಾನ್ಯ ನಷ್ಟ, ವಿಷಾಹಾರದಿಂದಲೂ ಅಗ್ನಿಯಿಂದಲೂ ಗಂಡಾಂತರವಿರುತ್ತದೆ. ಆರೋಗ್ಯದಲ್ಲಿ ಏರು-ಪೇರುಗಳು ಉಂಟಾಗುವುದು.

ನವಗ್ರಹ ಸ್ತೋತ್ರ ಪಠಿಸಿ.

ಮೀನ



ದಿ, ದು, ಖ, ಝ, ಥ, ದೆ, ದೊ, ಚ, ಚಿ

ಬರುವ ನವ ವರ್ಷ ಯುಗಾದಿವರೆಗೆ ಗುರುಬಲವಿದೆ. ಶ್ರೀ ಗುರುಪ್ರದವಾಗಿರುವಾಗ ಐಶ್ವರ್ಯ ಪ್ರಾಪ್ತಿ. ವಾಕ್ಚಾತುರ್ಯದಿಂದ ಕಾರ್ಯ ಸಾಧನೆ. ಯಶಃ ಕೀರ್ತಿಗಳಿಗೆ ಭಾಜನರಾಗುವಿರಿ. ಮನೆಯಲ್ಲಿ ಮಂಗಳ ಕಾರ್ಯವೂ ಜರುಗೀತು. ವ್ಯಾಪಾರ ವ್ಯವಹಾರಗಳಲ್ಲಿ ಉತ್ತಮ ಲಾಭವನ್ನು ಗಳಿಸುವಿರಿ. ವಿದ್ಯಾರ್ಥಿಗಳಿಗೆ ಉತ್ತಮ ಶ್ರೇಣಿ ದೊರಕುವುದು. ನಂತರ ಮತ್ತೆ ದೀಪಾವಳಿಯವರೆಗೆ ಜೀವನದಲ್ಲಿ ಏಳುಬೀಳುಗಳು. ಹೆಚ್ಚಾದ ಕಷ್ಟಗಳು ಕೈಗೊಂಡ ಕಾರ್ಯಗಳಲ್ಲಿ ವಿಘ್ನತೆ, ಇಷ್ಟ ಜನರ ವಿಯೋಗ, ರೋಗದಿಂದ ಪೀಡೆ. ವರ್ಷಪೂರ್ತಿ ವ್ಯಯಭಾವದಲ್ಲಿ ಸಂಚರಿಸುವ ಶನಿದೇವನೂ ನಿಮ್ಮ ಸಹಾಯಕ್ಕಿಲ್ಲ. ವರಮಾನಕ್ಕಿಂತ ಹೆಚ್ಚು ಖರ್ಚು ಹಣಕಾಸಿನ ಅಡಚಣೆಗಳು. ನಿಮ್ಮ ಗೌರವಕ್ಕೆ ಕುಂದು. ಅನವಶ್ಯಕ ಸಂಚಾರಗಳು. ವಾಹನಾಪಘಾತಗಳನ್ನು ತಳ್ಳಿ ಹಾಕುವಂತಿಲ್ಲ. ಕಳ್ಳಕಾಕರಿಂದ ಹಾನಿ ಸಂಭವಿಸುತ್ತದೆ. ಶ್ರೀ ಶನಿಮಹಾತ್ಮೆ ಕಥೆ ಓದಿ.

ಸೋಮವಾರದಿಂದ ಭಕ್ತಿ, ಭಾವೈಕ್ಯತೆಯ ಕುಂಬಾರಕೊಪ್ಪಲು ಶ್ರೀ ಮಹದೇಶ್ವರಸ್ವಾಮಿ ಜಾತ್ರೆ

● ನ.14ರಂದು ರಾತ್ರಿ ಹಾಲರವಿ, ಬಾಯಿಬೀಗ ಉತ್ಸವ ● ನ.15ರ ಬೆಳಗಿನ ಜಾವ ಹುಲಿವಾಹನೋತ್ಸವ

ಎಂ.ಬಿ.ಪವನ್‌ಮೂರ್ತಿ

ಪರಂಪರೆಯ ಪ್ರತೀಕವೂ, ಭಕ್ತಿಯ ಪರಾಕಾಷ್ಠೆಯೂ ಭಾವೈಕ್ಯತೆಯ ಸಂಭ್ರಮದ ಹಬ್ಬವೂ ಆದ ಮೈಸೂರಿನ ಕುಂಬಾರಕೊಪ್ಪಲು ಶ್ರೀ ಮಹದೇಶ್ವರಸ್ವಾಮಿ ಜಾತ್ರಾ ಮಹೋತ್ಸವವು ನ.13ರಿಂದ 15ರ ವರೆಗೆ ಪ್ರತಿವರ್ಷದಂತೆ ವಿಜೃಂಭಣೆಯಿಂದ ನಡೆಯಲಿದೆ. ಕುಂಬಾರಕೊಪ್ಪಲಿನಲ್ಲಿ ಗ್ರಾಮಸ್ಥರು ಪ್ರತಿವರ್ಷ ದೀಪಾವಳಿ ಹಬ್ಬದ ಪ್ರಯುಕ್ತ ಭಕ್ತಿಭಾವದಿಂದ ಈ ಜಾತ್ರಾ ಮಹೋತ್ಸವ ಆಚರಿಸುವುದು ಪರಂಪರಾಗತವಾಗಿ ನಡೆದು ಬಂದಿದೆ. ಗ್ರಾಮಸ್ಥರು ಮಾತ್ರವಲ್ಲದೆ, ಜಿಲ್ಲೆಯೂ ಸೇರಿದಂತೆ ಹೊರಗಡೆಯಿಂದಲೂ ಸಾವಿರ ಸಾವಿರ ಸಂಖ್ಯೆಯಲ್ಲಿ ಬರುವ ಭಕ್ತ ಸಮೂಹದ ನಡುವೆ ಜಾತ್ರೆಯ ವೈಭವ ಕಳೆಗಟ್ಟಲಿದೆ.

ಕುಂಬಾರಕೊಪ್ಪಲು ಗ್ರಾಮದ ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನವು ಈ ಜಾತ್ರಾ ಮಹೋತ್ಸವದ ಕೇಂದ್ರ ಬಿಂದು. ನ.13ರಂದು ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನ ಸೇರಿದಂತೆ ಗ್ರಾಮದ ಎಲ್ಲಾ ದೇವಾಲಯಗಳಲ್ಲಿ ವಿಶೇಷ ಪೂಜೆ ಜರುಗುವ ಮೂಲಕ ಮೂರು ದಿನಗಳ ಜಾತ್ರಾ ಮಹೋತ್ಸವಕ್ಕೆ ಚಾಲನೆ ದೊರೆಯಲಿದೆ. ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನ, ಇದೇ ದೇವಾಲಯದ ಆವರಣದಲ್ಲಿರುವ ಶ್ರೀ ಸಿದ್ದಪ್ಪಾಜಿ ದೇವಸ್ಥಾನ, ಶ್ರೀ ವರಸಿದ್ಧಿ ವಿನಾಯಕ ದೇವಸ್ಥಾನ ಸೇರಿದಂತೆ ಗ್ರಾಮದ ಮಾರಮ್ಮನಗುಡಿ, ಬನ್ನಿ ಮಾರಮ್ಮ ದೇವಾಲಯ ಹಾಗೂ ಶ್ರೀ ಬಸವೇಶ್ವರ ದೇವಸ್ಥಾನಗಳಲ್ಲಿ ನ.13 ರಂದು ವಿಶೇಷ ಪೂಜಾ ಕೈಂಕರ್ಯಗಳು ನಡೆಯಲಿವೆ. ಗ್ರಾಮಸ್ಥರು ಈ ಎಲ್ಲಾ ದೇವಾಲಯಗಳ ಪೂಜಾ ಕೈಂಕರ್ಯದಲ್ಲಿ ಪಾಲ್ಗೊಂಡು ಭಕ್ತಿಯ ಪರಾಕಾಷ್ಠೆ ಮೆರೆಯಲಿದ್ದಾರೆ. ಜಾತ್ರೆಯ ಕೊಂಡೋತ್ಸವ ಮುಗಿದ ಬಳಿಕ ಆರಂಭಗೊಳ್ಳುವ ಕುಸ್ತಿ ನೋಡಲು ಐದಾರೂ ಸಾವಿರ ಪ್ರೇಕ್ಷಕರು ಸೇರುತ್ತಾರೆ. ಮಹದೇಶ್ವರ ಸ್ವಾಮಿ ದೇವಸ್ಥಾನ ಮುಂಭಾಗದಲ್ಲಿ ಹೊಸದಾಗಿ ಪ್ರಾಂಗಣ ನಿರ್ಮಿಸಿರುವುದು ಈ ಬಾರಿಯ ವಿಶೇಷ. ಮಹದೇಶ್ವರ ಸ್ವಾಮಿಯವರು ಹುಲಿ ಮೇಲೆ ಆಸೀನರಾಗಿವ ಭಂಗಿಯ ವಿಗ್ರಹವು ಈ ನೂತನ ಪ್ರಾಂಗಣದ ಕೇಂದ್ರ ಬಿಂದು.

ಹಾಲರವಿ, ಬಾಯಿಬೀಗ ಉತ್ಸವ: ನ.14 ರಂದು ರಾತ್ರಿ 8ಕ್ಕೆ ತಿಪ್ಪಾಜಿ ಕೊಳದಿಂದ ಪ್ರಾರಂಭಗೊಳ್ಳುವ ಹಾಲರವಿ ಮತ್ತು ಬಾಯಿಬೀಗ ಉತ್ಸವವು ಕುಂಬಾರಕೊಪ್ಪಲಿನ ಪ್ರಮುಖ ಬೀದಿಗಳಲ್ಲಿ ಸಾಗಲಿದೆ. ಜಾನಪದ ಕಲಾತಂಡಗಳೊಂದಿಗೆ ಉತ್ಸವವು ಅಂತಿಮವಾಗಿ ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನ ತಲುಪಿ ಸಮಾಪ್ತಿಗೊಳ್ಳಲಿದೆ. ಬಳಿಕ ನ.15ರಂದು ಬೆಳಗಿನ ಜಾವ 2ಕ್ಕೆ ಶ್ರೀ ಮಹದೇಶ್ವರಸ್ವಾಮಿಯ ಹುಲಿವಾಹನೋತ್ಸವ ಜರುಗಲಿದೆ. ಶ್ರೀಮಹದೇಶ್ವರ



ಸ್ವಾಮಿ ದೇವಸ್ಥಾನದಿಂದ ಹೊರಡುವ ಹುಲಿವಾಹನೋತ್ಸವ, ಊರಿನ ಪ್ರಮುಖ ಬೀದಿಗಳಲ್ಲಿ ಸಾಗಲಿದೆ. ನಂತರ ಇದೇ 15ರಂದು ಮಧ್ಯಾಹ್ನ 12ಕ್ಕೆ ಶ್ರೀ ಮಹದೇಶ್ವರ ಸಮುದಾಯ ಭವನದಲ್ಲಿ ಅನ್ನ ಸಂತರ್ಪಣೆ ನಡೆಯಲಿದೆ. ಸುಮಾರು 10 ಸಾವಿರ ಮಂದಿಗೆ ಬಾತು, ಮೊಸರನ್ನ, ಜಿಲೇಬಿ ಸಿಹಿ ಉಣಬಡಿಸಲು ವ್ಯವಸ್ಥೆ ಮಾಡಲಾಗಿದೆ.

ಕುಸ್ತಿ: ಪ್ರತಿವರ್ಷದಂತೆ ಜಾತ್ರೆಯ ಪ್ರಯುಕ್ತ ನಾಡಕುಸ್ತಿ ಹಮ್ಮಿಕೊಂಡಿದ್ದು, ಬಯಲು ಕುಸ್ತಿ ನಿಯಮಾವಳಿಯಡಿ ನಡೆಯುವ ಈ ಕುಸ್ತಿ ಪಂದ್ಯಾವಳಿಯಲ್ಲಿ 30 ಜೊತೆಗೂ ಹೆಚ್ಚು ಪಂದ್ಯಗಳು ನಡೆಯಲಿವೆ. ನ.15ರಂದು ಕೊಂಡೋತ್ಸವ ಬಳಿಕ ದೇವಸ್ಥಾನದ ಸಮೀಪದಲ್ಲೇ ಇರುವ ಶ್ರೀ ಕೆಂಪೇಗೌಡ ಕ್ರೀಡಾಂಗಣದಲ್ಲಿ ಕುಸ್ತಿ ನಡೆಯಲಿದ್ದು, ಇದಕ್ಕಾಗಿ ಅಖಾಡ ಸಜ್ಜುಗೊಳಿಸಲಾಗಿದೆ. ಗೆಲುವು ಸಾಧಿಸುವ ಪೈಲ್ವಾನರಿಗೆ ಗೌರವಧನ ನೀಡಲಾಗುತ್ತದೆ. ಶ್ರೀ ಮಹದೇಶ್ವರ ಜಾತ್ರಾ ಕುಸ್ತಿ ಸಂಘದ ವತಿಯಿಂದ ಕುಸ್ತಿ ನಡೆಯಲಿದೆ.

ಕಬಡ್ಡಿ: ಕುಂಬಾರಕೊಪ್ಪಲಿನ ಮಾರುತಿ ಕಬಡ್ಡಿ ಕ್ರೀಡಾ ಸಂಸ್ಥೆ ವತಿಯಿಂದ 'ಸ್ಟೇಟ್ ಚಾಂಪಿಯನ್‌ಶಿಪ್' ಶೀರ್ಷಿಕೆಯಡಿ ಮಡ್ ಕಬಡ್ಡಿ ಪಂದ್ಯಾವಳಿಯನ್ನು ನ.13 ರಿಂದ 15ರವರೆಗೆ ಜಾತ್ರೆ ಪ್ರಯುಕ್ತ ಇಲ್ಲಿನ ಶ್ರೀ ಕೆಂಪೇಗೌಡ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ. ರಾಜ್ಯದ 29 ಜಿಲ್ಲೆಗಳಿಂದ ತಲಾ ಒಂದರಂತೆ 29 ತಂಡಗಳು ಪಾಲ್ಗೊಳ್ಳಲಿದ್ದು, ಚಾಂಪಿಯನ್ ಆಗಿ ಹೊರಹೊಮ್ಮುವ ತಂಡಕ್ಕೆ ಒಂದು ಲಕ್ಷ ರೂ. ಬಹುಮಾನ ದೊರೆಯಲಿದೆ. ದ್ವಿತೀಯ ಸ್ಥಾನಕ್ಕೆ 75 ಸಾವಿರ ರೂ., ತೃತೀಯ ಮತ್ತು ನಾಲ್ಕನೇ ಸ್ಥಾನಕ್ಕೆ ತಲಾ 25 ಸಾವಿರ ರೂ. ನಗದು ಬಹುಮಾನ ದೊರೆಯಲಿದೆ. ಕುಂಬಾರಕೊಪ್ಪಲು ಅಭ್ಯುದಯ ಸಂಘದ ನೇತೃತ್ವದಲ್ಲಿ ಈ ಜಾತ್ರಾ ಮಹೋತ್ಸವ ನಡೆಯಲಿದೆ. 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಸಂಘದ ಅಧ್ಯಕ್ಷ ಕೆ.ಟಿ.ಚೆಲುವೇಗೌಡ, ಹಾಲರವಿ ಮತ್ತು ಬಾಯಿಬೀಗ ಉತ್ಸವದಲ್ಲಿ ಬೆಳ್ಳಿಯ ಮಹದೇಶ್ವರರ ಮುಖವಾಡ ಮತ್ತು ವೀರಭದ್ರಸ್ವಾಮಿ ಹಲಗೆಗೆ ಸ್ನಾನ ಮಾಡಿಸಿ, ಬಾಯಿಬೀಗ ಹರಕೆಗೆ ಚಾಲನೆ ನೀಡಲಾಗುವುದು. ಹರಕೆ ಹೊತ್ತವರು ಬಾಯಿಬೀಗ ಹಾಕಿಕೊಳ್ಳುತ್ತಿದ್ದರು. ಆದರೆ ಕೋವಿಡ್ ನಂತರ ಬಾಯಿಯೊಳಗೆ ಕೈ ಹಾಕಬಾರದೆಂದು ಹರಕೆ ಹೊತ್ತವರ ಬಟ್ಟೆಗೆ ಬೀಗ ಚುಚ್ಚಿಕೊಳ್ಳುವುದು ರೂಢಿಗೆ ಬಂದಿದೆ. ಈಗ ಕೋವಿಡ್ ಇಲ್ಲವಾದ ಕಾರಣ ಆಸಕ್ತರಿದ್ದರೆ ಬಾಯಿಗೇ ಹಾಕಿಕೊಡುವ ಉದ್ದೇಶ ಹೊಂದಲಾಗಿದೆ ಎಂದರು.

ಮಹದೇಶ್ವರಸ್ವಾಮಿಯವರ ಚರಿತ್ರೆ ಅನಾವರಣ: ವಿಧಾನ ಪರಿಷತ್ ಮಾಜಿ ಸದಸ್ಯರೂ ಆದ ಗ್ರಾಮದ ಹಿರಿಯ ಮುಖಂಡ ಡಿ.ಮಾದೇಗೌಡ ಅವರ ಪರಿಕಲ್ಪನೆಯಡಿ ದೇವಸ್ಥಾನದ ಆವರಣದಲ್ಲಿ ಮಹದೇಶ್ವರಸ್ವಾಮಿ ಚರಿತ್ರೆ ಅನಾವರಣಗೊಳಿಸುವ ಕಲಾಕೃತಿಗಳ ನಿರ್ಮಾಣಕ್ಕೆ ಈ ಹಿಂದೆಯೇ ಚಾಲನೆ ನೀಡಲಾಗಿದೆ. ಇದು ಬಹುತೇಕ ಪೂರ್ಣಗೊಂಡಿದ್ದು, ಆದಷ್ಟು ಬೇಗ ಪೂರ್ಣಗೊಳಿಸಲಾಗುವುದು ಎನ್ನುತ್ತಾರೆ ಅವರು.

ಮಲೆ ಮಹದೇಶ್ವರರು ವಿಶ್ರಾಂತಿ ಪಡೆದಿದ್ದ ಪುಣ್ಯಭೂಮಿ



ಮಲೆ ಮಹದೇಶ್ವರರು ಉತ್ತರ ರಾಜ್ಯದಿಂದ ಕತ್ತಲ ರಾಜ್ಯದತ್ತ (ಮೈಸೂರು ಸೀಮೆ) ಬಂದು ವಿಶ್ರಾಂತಿ ಪಡೆದ ಸ್ಥಳಗಳಲ್ಲಿ ಭಕ್ತರು ದೇವಸ್ಥಾನ ನಿರ್ಮಿಸಿದ್ದು, ಈ ಪೈಕಿ ಕುಂಬಾರಕೊಪ್ಪಲು ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನವೂ ಒಂದು. ಹಾಗಾಗಿ ಈ ದೇವಸ್ಥಾನಕ್ಕೆ ಐತಿಹಾಸಿಕ ಹಿನ್ನೆಲೆ ಇದ್ದು, ಈ ಜಾತ್ರಾ ಮಹೋತ್ಸವಕ್ಕೂ ದೊಡ್ಡ ಪರಂಪರೆ ಇದೆ ಎಂದು ವಿಧಾನ ಪರಿಷತ್ ಮಾಜಿ ಸದಸ್ಯರೂ ಆದ ಗ್ರಾಮದ ಹಿರಿಯ ಮುಖಂಡ ಡಿ.ಮಾದೇಗೌಡ ತಿಳಿಸಿದರು.

ಇಲ್ಲಿನ ದೇವಸ್ಥಾನ ಮಹದೇಶ್ವರರು ತಂಗಿದ್ದ ಪುಣ್ಯಭೂಮಿ. ಇದಕ್ಕೆ ಪುರಾತನ ಹಿನ್ನೆಲೆ ಇದೆ. ಚಿಕ್ಕದಾಗಿದ್ದ ಈ ದೇವಸ್ಥಾನವನ್ನು ಗ್ರಾಮಸ್ಥರಿಂದ ಜೀರ್ಣೋದ್ಧಾರಗೊಳಿಸಿ ವಿಶಾಲವಾದ ಆವರಣ ನಿರ್ಮಿಸಲಾಗಿದೆ. ಮಹದೇಶ್ವರರು ಉತ್ತರ ರಾಜ್ಯದಿಂದ ಕತ್ತಲ ರಾಜ್ಯಕ್ಕೆ (ದಕ್ಷಿಣ) ಬರುತ್ತಾರೆ. ಹಾಗೆ ಬಂದಾಗ ಅವರು ಪವಾಡ ಮೆರೆದ, ವಿಶ್ರಾಂತಿ ಪಡೆದ ಸ್ಥಳಗಳಲ್ಲಿ ಭಕ್ತರು ದೇವಾಲಯಗಳನ್ನು ನಿರ್ಮಿಸಿ ಅವರ ಆರಾಧನೆಯ ಪರಂಪರೆ ಕಟ್ಟಿದ್ದಾರೆ. ಅದೇ ರೀತಿ ಕುಂಬಾರಕೊಪ್ಪಲಿನ ಈಗಿರುವ ಶ್ರೀ ಮಹದೇಶ್ವರ ಸ್ವಾಮಿ ದೇವಸ್ಥಾನದ ಸ್ಥಳದಲ್ಲಿ ಮಹದೇಶ್ವರರು ವಿಶ್ರಾಂತಿ ಪಡೆದಿದ್ದರು.

ಪ್ರತಿವರ್ಷ ದೀಪಾವಳಿ ಹಬ್ಬದ ಸಂದರ್ಭದಲ್ಲಿ ಮೂರು ದಿನಗಳ ಕಾಲ ವಿಜೃಂಭಣೆಯಿಂದ ಇಲ್ಲಿ ಜಾತ್ರೆ ನಡೆಯುತ್ತದೆ. ಅಮಾವಸ್ಯೆ ದಿನ ಮುಖ್ಯ ಪೂಜಾ ವಿಧಿವಿಧಾನ ಪ್ರಾರಂಭಗೊಳ್ಳುವುದು ವಿಶೇಷ. ಅಮಾವಾಸ್ಯೆ ದಿನದಂದು ಗ್ರಾಮದ ಪ್ರತಿಯೊಂದು ಮನೆಯವರು ಮಹದೇಶ್ವರರ ದೇವಸ್ಥಾನಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸುವುದು ಮತ್ತೊಂದು ವಿಶೇಷ. ಹಣ್ಣು-ಕಾಯಿ ದೇವರಿಗೆ ಅರ್ಪಿಸಿ, ಪ್ರಾರ್ಥಿಸುತ್ತಾರೆ.

ಜಾತ್ರೆಯ ಪ್ರಯುಕ್ತ ನಡೆಯುವ ಹಾಲರವಿ ಉತ್ಸವವು ಕೆಆರ್‌ಎಸ್ ರಸ್ತೆಯಲ್ಲಿರುವ ತಿಪ್ಪಾಜಿ ಕೊಳದಿಂದ ಪ್ರಾರಂಭಗೊಳ್ಳುತ್ತದೆ. ಇದೇ ಸಂದರ್ಭದಲ್ಲಿ ಬಾಯಿಬೀಗ ಹರಕೆ ಹೊತ್ತವರು ಪಂಜು ಹಿಡಿದು ಸಾಗುತ್ತಾರೆ. ಹಾಲಿ ವಾಹನೋತ್ಸವ ಗ್ರಾಮದೊಳಗೆ ನಡೆಯುವುದು ವಿಶೇಷ. ಜಾನಪದ ಕಲಾತಂಡಗಳೊಂದಿಗೆ ಊರೆಲ್ಲಾ ಸುತ್ತಿ ಬಂದ ಮೇಲೆ ಕೊಂಡೋತ್ಸವ ನಡೆಯುತ್ತದೆ. ಹುಲಿವಾಹನೋತ್ಸವ ಪ್ರಾರಂಭಗೊಳ್ಳುವ ಸಂದರ್ಭದಲ್ಲೇ ಕೊಂಡಕ್ಕೆ ಬೆಂಕಿ ಹಚ್ಚಲಾಗುತ್ತದೆ. ಶ್ರೀ ಮಹದೇಶ್ವರ ಸ್ವಾಮಿ ದೇವಸ್ಥಾನ ಆವರಣದಲ್ಲಿ ಮಹದೇಶ್ವರರ ಜೀವನ ಚರಿತ್ರೆ ಬಿಂಬಿಸುವ ಕಲಾಕೃತಿಗಳನ್ನು ನಿರ್ಮಿಸಲಾಗಿದೆ.

ಮೈಸೂರು ಮಿತ್ರ

ಇಂದಿನ ಯುವ ಪೀಳಿಗೆಗೆ ಕುವೆಂಪು, ಕಾರಂತ, ಬೇಂದ್ರೆಯವರು ಹೀರೋಗಳಲ್ಲ, ಸಿನಿಮಾ ನಟರೇ ಅವರಿಗೆ ನಾಯಕರುಗಳು

ಕನ್ನಡ ರಾಜ್ಯೋತ್ಸವದಲ್ಲಿ ಸಹಾಯಕ ಪ್ರಾಧ್ಯಾಪಕ ಡಾ. ಬೆಟ್ಟಸ್ವಾಮಿ ವಿಷಾದ



ಹೆಚ್.ಡಿ.ಕೋಟೆ, ನ11– ಕುವೆಂಪು, ಕಾರಂತ, ಬೇಂದ್ರೆಯಂತಹ ಸಾಹಿತಿಗಳು ಇಂದಿನ ಪೀಳಿಗೆಯ ವಿದ್ಯಾರ್ಥಿಗಳಿಗೆ ಹೀರೋಗಳಾಗಿ ಕಾಣುತ್ತಿಲ್ಲ, ಸಿನಿಮಾ ನಟರಷ್ಟೇ ಅವರಿಗೆ ನಾಯಕರಾಗಿ ಕಾಣುತ್ತಿರುವುದು ಬೇಸರದ ಸಂಗತಿ ಎಂದು ಮೈಸೂರಿನ ಬಿಜಿಎಸ್ ಬಿಇಡಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ.ಎಚ್. ಬಿ. ಬೆಟ್ಟಸ್ವಾಮಿ ಬೇಸರ ವ್ಯಕ್ತಪಡಿಸಿದರು.

ಪಟ್ಟಣದ ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಮಾಧ್ಯಮ ವಿಭಾಗದ ವತಿಯಿಂದ 68ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮ ನಡುವಿನ ಕನ್ನಡ ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಇಂದು ಬೇರೆ ಭಾಷಿಕರ ಹಾವಳಿ ಹೆಚ್ಚಾಗಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ವಿದ್ಯಾರ್ಥಿಗಳು ಇಂದು ಕೇವಲ ಅಂಕಾರ್ಥಿಗಳಾಗಿ ಮಾತ್ರ ಬದಲಾಗುತ್ತಿದ್ದಾರೆ. ಯಾವೊಬ್ಬ ವಿದ್ಯಾರ್ಥಿಯು ಸಹ ರಾಮಾಯಣ ದರ್ಶನಂ ಬಗ್ಗೆ ತಿಳಿದಿಲ್ಲ, ಜನಪದ ಪದಗಳನ್ನು ಹಾಡುವವರಿಲ್ಲ, ಅಕ್ಕನ ನಾಲ್ಕು ವಚನಗಳೇ ಗೊತ್ತಿಲ್ಲ, ಇದರಿಂದಲೇ ಅರ್ಥವಾಗುತ್ತದೆ ಕನ್ನಡ ಶಾಲೆಗಳಲ್ಲಿ ಯಾವ ರೀತಿ ಶಿಕ್ಷಣ ದೊರೆಯುತ್ತಿದೆ ಎಂಬುದು ಎಂದು ಬೇಸರ ವ್ಯಕ್ತಪಡಿಸಿದರು.

12ನೇ ಶತಮಾನದಲ್ಲಿ ಅನಾಗರಿಕತೆ ತಾಂಡವವಾಡುತ್ತಿದ್ದ ವೇಳೆ ವಚನಗಳ ಮೂಲಕ ಶಿಕ್ಷಣವನ್ನು ನೀಡಿದ ಭಾಷೆ ನಮ್ಮ ಕನ್ನಡ, ವಚನ ಸಾಹಿತ್ಯದ ನಂತರ ಅತ್ಯುತ್ತಮ ಶ್ರೀಮಂತ ಸಾಹಿತ್ಯ ನಮ್ಮ ಕುವೆಂಪುರವರ ಸಾಹಿತ್ಯ ಎಂದು ತಿಳಿಸಿದರು.

ಹೆಣ್ಣು ಮಕ್ಕಳಿಗೆ ಮೀಸಲಾತಿ, ಸಬಲೀಕರಣಕ್ಕೆ ವಚನಕಾರ್ತಿ ಅಕ್ಕಮಹಾದೇವಿಯೇ ಕಾರಣವಾಗಿ ನಿಲ್ಲುತ್ತಾಳೆ ಎಂದರು.

ಪ್ರಾಂಶುಪಾಲರಾದ ಡಾ.ಜೆ.ಎನ್. ವೆಂಕಟೇಶ್ ಮಾತನಾಡಿ, 25ಕ್ಕೂ ಹೆಚ್ಚು ವಿದ್ಯಾರ್ಥಿಗಳು ನಗದು ಬಹುಮಾನ, 30ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪದಕಗಳನ್ನು ಮತ್ತು 9ಕ್ಕೂ ಹೆಚ್ಚು ವಿದ್ಯಾರ್ಥಿಗಳು ರ್‍ಯಾಂಕ್ ಪಡೆದಿದ್ದಾರೆ ಎಂದರು. ಇದೇ ಸಂದರ್ಭದಲ್ಲಿ ಕನ್ನಡ ಐಚ್ಛಿಕ ವಿಷಯದಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ಆಡಳಿತಾಧಿಕಾರಿ ಪ್ರೊ. ಕೆ.ಪಿ. ಬಸವೇಗೌಡ, ಕಾಲೇಜಿನ ಪ್ರಾಂಶುಪಾಲ ಡಾ.ಜೆಎನ್. ವೆಂಕಟೇಶ್, ಮಹಾರಾಜ ಕಾಲೇಜಿ ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಚಂದ್ರೇಗೌಡ, ಕನ್ನಡ ವಿಭಾಗದ ಮುಖ್ಯಸ್ಥ ಚನ್ನಕೇಶವ ನಾಯಕ, ದೈಹಿಕ ಶಿಕ್ಷಣ ನಿರ್ದೇಶಕ ಕಲ್ಲೇಶ್‌ಗೌಡ, ಪ್ರಾಂಶುಪಾಲ ಭೈರೇಗೌಡ, ಡಿ. ಚಂದನ ಎಚ್.ಸಿ. ರವಿಗೌಡ, ಎ.ಸಿ.ಭೈರಪ್ಪ ಉಪನ್ಯಾಸಕರುಗಳಾದ ರಾಮಚಂದ್ರ, ರವಿಶ, ಪ್ರೀತಿ, ಸಿದ್ದೆಗೌಡ, ರಾಜೇಶ್, ಗ್ರಂಥಪಾಲಕರಾದ ಸಿದ್ದರಾಜು, ಬಿ.ಎಸ್. ರಾಜೇಶ್, ಇನ್ನು ಮುಂತಾದವರು ಹಾಜರಿದ್ದರು.

ಸರಗೂರು ಬಳಿ ಮಳೆಗೆ ಮನೆ ಕುಸಿತ

ಸರಗೂರು, ನ.11– ಕಳೆದ ಕೆಲವು ದಿನಗಳಿಂದ ಸುರಿಯುತ್ತಿರುವ ಧಾರಾಕಾರ ಮಳೆಯಿಂದ ಸಮೀಪದ ಮಸಹಳ್ಳಿ ಗ್ರಾಮದ ಎಸ್.ರಾಚಯ್ಯ, ಮಹದೇವಮ್ಮ ಎಂಬುವರ ಮನೆ ಮಳೆಗೆ ಕುಸಿದಿದ್ದು, ಕುಟುಂಬ ಬೀದಿಪಾಲಾಗಿದೆ.

ಮನೆಯು ಸಂಪೂರ್ಣವಾಗಿ ಕುಸಿದು ಬಿದ್ದಿರುವುದರಿಂದ ಮನೆಯಲ್ಲಿನ ದವಸ ಧಾನ್ಯಗಳು ಮಳೆ ಪಾಲಾಗಿದೆ. ಇದರಿಂದ ಅಪಾರವಾದ ನಷ್ಟವಾಗಿದೆ.

ಈ ಕುಟುಂಬ ಪಕ್ಕದ ಮನೆಯಲ್ಲಿ ವಾಸಿಸುತ್ತಿದ್ದು, ಕಂದಾಯ ಇಲಾಖೆ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಬಡವರಾದ ಇವರಿಗೆ ಮನೆ ಮಂಜೂರು ಮಾಡಿಸಿಕೊಡಲು ಸರಕಾರಕ್ಕೆ ವರದಿ ಸಲ್ಲಿಸಬೇಕು ಎಂದು ಅವರು ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ.



ಮಳೆಯಿಂದ ಮಸಹಳ್ಳಿಯಲ್ಲಿ ಕುಸಿತಗೊಂಡಿರುವ ಮನೆ



ಭಾರತೀಯ ಜನತಾ ಪಾರ್ಟಿಯ ರಾಜ್ಯ ಅಧ್ಯಕ್ಷರಾಗಿ ಆಯ್ಕೆಗೊಂಡ ಯೂಥ್ ಐಕಾನ್ ಬಿ.ವೈ. ವಿಜಯೇಂದ್ರ ಅವರನ್ನು ತಿ.ನರಸೀಪುರ ಪುರಸಭಾ ಸದಸ್ಯ ಎಸ್.ಕೆ.ಕಿರಣ್, ಕಿರಗಸೂರು ಗ್ರಾಪಂ ಸದಸ್ಯ ಮಹದೇವಸ್ವಾಮಿ, ಶಿವರಾಜ್ ಭಗವಾನ್ ಹಾಗೂ ಪಿ.ಜೆ.ಹುಂಡಿ ರಘು, ತಲಕಾಡು ನಂದನ್, ಶ್ರೀನಾಥ್ ಅವರುಗಳು ಅಭಿನಂದಿಸಿದರು.

ಶಿಸ್ತು, ನೈತಿಕತೆಯಿಂದ ಉತ್ತಮ ನಾಗರಿಕರಾಗಿ



ತಿ.ನರಸೀಪುರ, ನ11– ವಿದ್ಯಾರ್ಥಿಗಳಾಗಿದ್ದಾಗಲೇ ಶಿಸ್ತು, ನೈತಿಕತೆ, ವಿನಯ ಹಾಗೂ ಜವಾಬ್ದಾರಿಗಳನ್ನು ರೂಢಿಸಿಕೊಂಡು, ಉತ್ತಮ ನಾಗರಿಕರಾಗಿ ಹೊರಹೊಮ್ಮಬೇಕು ಎಂದು ಕರ್ನಾಟಕ ರಾಜ್ಯ ವಾಲ್ಮೀಕಿ ಒಕ್ಕೂಟದ ಮೈಸೂರು ಜಿಲ್ಲಾಧ್ಯಕ್ಷ ತಾಯೂರು ಪ್ರಕಾಶ್ ಹೇಳಿದರು.

ಕನ್ನಡ ರಾಜ್ಯೋತ್ಸವದ ಅಂಗವಾಗಿ ಚಾಮುಂಡಿಬೆಟ್ಟದಲ್ಲಿರುವ ಟಿ.ಎಸ್. ಸುಬ್ಬಣ್ಣ ವಿದ್ಯಾಸಂಸ್ಥೆಯ ಸುಮಾರು 130 ವಿದ್ಯಾರ್ಥಿನಿಯರಿಗೆ ಉದ್ಯಮಿ ಕೋರಿ ವೀರೇಶ್ ನೀಡಲಾದ ಟೀ ಶರ್ಟ್‌ಗಳನ್ನು ವಿತರಿಸಿ ಅವರು ಮಾತನಾಡಿದರು.

ರಾಜ್ಯ ಹಾಗೂ ಕೇಂದ್ರ ಸರಕಾರ ವಿದ್ಯಾರ್ಥಿಗಳ ಕಲ್ಯಾಣಕ್ಕಾಗಿ ನಾನಾ ಶೈಕ್ಷಣಿಕ ಉಚಿತ ಯೋಜನೆಗಳನ್ನು ರೂಪಿಸಿದ್ದು, ವಿದ್ಯಾರ್ಥಿಗಳು ಅವುಗಳ ಸದುಪಯೋಗ ಪಡೆದುಕೊಂಡು ಮುಂದೆ ಬರಬೇಕು ಎಂದರು.

ಕೆಲವರು ವಿನಾಕಾರಣ ಸಾವಿರಾರು ರೂಪಾಯಿಗಳನ್ನು ವ್ಯರ್ಥವಾಗಿ ಖರ್ಚು ಮಾಡುತ್ತಾರೆ ಅದರ ಬದಲು ಅದೇ ಹಣವನ್ನು ಸಾರ್ವಜನಿಕ ಕೆಲಸಗಳಿಗೆ ಬಳಸುವುದು ಉತ್ತಮ. ಜೀವನದಲ್ಲಿ ನಾವು ವರ್ಷ ಪೂರ್ತಿ ದುಡಿಯುತ್ತಿರುತ್ತೇವೆ. ಆದರೆ ನಾವು ದುಡಿದು ಬಂದಿದ್ದರಲ್ಲೇ ಸ್ವಲ್ಪ ಹಣದಲ್ಲಿ ಬಟ್ಟೆ, ಪುಸ್ತಕ, ಬ್ಯಾಗ್ ಸೇರಿದಂತೆ ಇನ್ನಿತರ ವಸ್ತುಗಳನ್ನು ಶಾಲಾ ಮಕ್ಕಳಿಗೆ ನೀಡುವುದರಿಂದ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವುದರ ಜೊತೆಗೆ ಮಕ್ಕಳು ಸಹ ತಮ್ಮ ಮುಂದಿನ ದಿನದಲ್ಲಿ ಇಂತಹ ಕಾರ್ಯಗಳನ್ನು ಮಾಡುವಂತೆ ಪ್ರೇರೇಪಿಸಬಹುದಾಗಿದೆ ಎಂದರು.

ಉದ್ಯಮಿ ಕೋರಿ ವೀರೇಶ್ ಅವರು, ವಿವಿಧ ಸಮಾಜಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಮೂಲಕ ಬದುಕಿನ ಸಾರ್ಥಕತೆಯೆಡೆಗೆ ಹೆಜ್ಜೆ ಇಟ್ಟಿರುವುದು ಉತ್ತಮ ಬೆಳವಣಿಗೆ ಎಂದರು.

ಈ ವೇಳೆ ಟಿ.ಎಸ್.ಸುಬ್ಬಣ್ಣ ವಿದ್ಯಾಸಂಸ್ಥೆಯ ಟ್ರಸ್ಟಿಗಳಾದ ಡಾ.ಚಂದ್ರಶೇಖರ್, ಡಾ.ಪಿ.ಹರೀಶ್, ರಾಷ್ಟ್ರೀಯ ಶಿಕ್ಷಣ ಒಕ್ಕೂಟದ ರಾಜ್ಯಾಧ್ಯಕ್ಷ ತಗಡೂರು ಗುರು, ಮುಖ್ಯಶಿಕ್ಷಕ ಕೃಷ್ಣಮೂರ್ತಿ, ಪ್ರಭುಲಿಂಗಸ್ವಾಮಿ, ಉದ್ಯಮಿಕೋರಿ ವೀರೇಶ್ ಸೇರಿದಂತೆ ವಸತಿ ಶಾಲೆಯ ಸಿಬ್ಬಂದಿಗಳು ಇದ್ದರು.

ಪಿರಿಯಾಪಟ್ಟಣ ಸರ್ಕಾರಿ ನೌಕರರ ಬಡಾವಣೆಯಲ್ಲಿ ಅವೈಜ್ಞಾನಿಕ ಕಾಮಗಾರಿ

ಗಬ್ಬು ನಾರುತ್ತಿರುವ ಚರಂಡಿ, ನರಕಯಾತನೆ ಅನುಭವಿಸುತ್ತಿರುವ ನಿವಾಸಿಗಳು



ಪಿರಿಯಾಪಟ್ಟಣ, ನ.11– ಪಟ್ಟಣದ ಪ್ರತಿಷ್ಠೆಯ ಬಡಾವಣೆಗಳಲ್ಲಿ ಸರ್ಕಾರಿ ನೌಕರರ ಬಡಾವಣೆಯಲ್ಲಿ ಅವೈಜ್ಞಾನಿಕ ಚರಂಡಿ ಕಾಮಗಾರಿಯ ಹಿನ್ನೆಲೆಯಲ್ಲಿ ನೀರು ಸರಾಗವಾಗಿ ಹರಿಯದೆ ಮನೆಗಳ ಮುಂದೆ ನಿಂತು ಗಬ್ಬೆದ್ದು ನಾರುತ್ತಿದೆ.

ಸುಮಾರು 15 ವರ್ಷಗಳ ಹಿಂದೆ ನಿರ್ಮಾಣವಾದ ಈ ಸರ್ಕಾರಿ ನೌಕರರ ಬಡಾವಣೆ ಆಗಿನಿಂದಲೂ ಸರಿಯಾದ ಚರಂಡಿ ಹಾಗೂ ರಸ್ತೆ ನಿರ್ಮಾಣವಾಗದೆ ಇಲ್ಲಿನ ನಿವಾಸಿಗಳು ನರಕ ಯಾತನೇ ಅನುಭವಿಸುತ್ತಿದ್ದು ಸಂಬಂಧಪಟ್ಟ ಪುರಸಭೆಯ ಅಧಿಕಾರಿಗಳಿಗೆ ಹಾಗೂ ಸಂಬಂಧಿಸಿದ ಪುರಸಭಾ ಸದಸ್ಯರಿಗೆ ಅನೇಕ ಬಾರಿ ದೂರು ನೀಡಿದ್ದರೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಅಲ್ಲಿನ ನಿವಾಸಿ ನಿರಂಜನ ಮೂರ್ತಿ ಸೇರಿದಂತೆ ಅನೇಕ ಸಾರ್ವಜನಿಕರು ಆರೋಪಿಸಿದ್ದಾರೆ.

ಗಬ್ಬೆದ್ದು ನಾರುತ್ತಿರುವ ಚರಂಡಿಯಿಂದ ಸೊಳ್ಳೆಗಳ ಉಗಮ ಸ್ಥಾನವಾಗಿದ್ದು ಡೆಂಗ್ಯೂ ಮಲೇರಿಯದಂತಹ ಜ್ವರ ಕಾಡುವ ಭೀತಿ ಜೊತೆಗೆ ಚರಂಡಿಗಳಲ್ಲಿ ಹಾವುಗಳು ಸೇರಿದಂತೆ ವಿಷಕಾರಿ ಕ್ರಿಮಿ ಕೀಟಗಳು ಸೇರಿ ಅಕ್ಕಪಕ್ಕದ ಮನೆಗಳಿಗೆ ನುಗ್ಗಿ ನಿವಾಸಿಗಳು ದಿನ ನಿತ್ಯ ಆತಂಕದಿಂದ ಬದುಕಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ತಕ್ಷಣ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಇದರ ಬಗ್ಗೆ ಗಮನ ಹರಿಸಿ ಸಂಬಂಧಿಸಿದ ಚರಂಡಿ ಕಾಮಗಾರಿಯನ್ನು ಸರಿಪಡಿಸಿ ನಿವಾಸಿಗಳ ಆತಂಕವನ್ನು ನಿವಾರಿಸುವಂತೆ ಆಗ್ರಹಿಸಿದ್ದಾರೆ.

ಇಲ್ಲದಿದ್ದಲ್ಲಿ ಮುಂದಿನ ದಿನಗಳಲ್ಲಿ ತೀವ್ರ ಪ್ರತಿಭಟನೆ ಹಮ್ಮಿಕೊಳ್ಳಲಾಗುತ್ತದೆ ಎಂದು ಇಲ್ಲಿನ ನಿವಾಸಿಗಳು ಜಿಲ್ಲಾಧಿಕಾರಿಗಳು ಸೇರಿದಂತೆ ನಗರಾಭಿವೃದ್ಧಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಶಾಸಕರಿಗೆ ಮನವಿ ಸಲ್ಲಿಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಮಾನವೀಯ ಗುಣಗಳಿಂದ ಸಾರ್ಥಕತೆ ಸಾಧ್ಯ



ಹುಣಸೂರು, ನ.11– ಸಂಘಟನೆ ಯಾವುದೇ ಇರಲಿ, ಅಲ್ಲಿ ಶಿಸ್ತು, ಬದ್ಧತೆ ಜತೆಗೆ ಭಾವನಾತ್ಮಕ ಸಂಬಂಧ ಬೆಳಸಿಕೊಂಡರೆ ಮಾತ್ರ ಜಟಿಲ ಸಮಸ್ಯೆ ಇದ್ದರೂ ಯಶಸ್ವಿಯಾಗಿ ಮುನ್ನಡೆಸಲು ಸಾಧ್ಯವಿದೆ ಎಂದು ನಗರಸಭೆ ಸದಸ್ಯ ಹೆಜ್ಜೂರು ರಮೇಶ್ ತಿಳಿಸಿದರು.

ಹುಣಸೂರು ತಾಲೂಕು ಪತ್ರಕರ್ತರ ಸಂಘದ ವಾರ್ಷಿಕ ಸಭೆಯಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಮೂರು ದಿನದ ಬದುಕಿನಲ್ಲಿ ಸ್ವಾರ್ಥ ಮನೋಭಾವನೆಗೆ ಒತ್ತು ನೀಡದೆ ಮಾನವೀಯ ಗುಣಗಳನ್ನು ಬೆಳಸಿಕೊಂಡಾಗ ಮಾತ್ರ ಸಾರ್ವಜನಿಕವಾಗಿ ಸಾರ್ಥಕತೆ ಪಡೆದುಕೊಳ್ಳಲಿದೆ ಎಂದರು.

ಪತ್ರಕರ್ತರು ಕೂಡ ವಾಸ್ತವವಾಗಿ ಒತ್ತಡದ ಪರಿಸ್ಥಿತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಪತ್ರಕರ್ತರು ಸರಕಾರದ ಸೌಲಭ್ಯಗಳಿಂದ ವಂಚಿತರಾಗಿದ್ದು ನಾಲ್ಕನೇ ಅಂಗವಾದ ನಿಮಗೂ ಸಹಾಯದ ಅವಶ್ಯಕತೆ ಇದೆ ಎಂದರು.

ಇದೇ ಸಂದರ್ಭದಲ್ಲಿ ನಗರದ ಹುಣಸೂರು ಟಿಫಿನ್ ಮಾಲಿಕ ಶಶಿಧರ್ ಅವರನ್ನೂ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ, ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಹೆಚ್.ಆರ್.ಕೃಷ್ಣಕುಮಾರ್, ದಾರಾ. ಮಹೇಶ್, ಉಪಾಧ್ಯಕ್ಷ ಚಲುವರಾಜ್, ಪ್ರಧಾನ ಕಾರ್ಯದರ್ಶಿ ನೇರಳಕುಪ್ಪೆ ಮಹದೇವ್, ಕಾರ್ಯದರ್ಶಿ ಶಂಕರ್, ಖಜಾಂಚಿ ಯೋಗಿಶ್, ಹಾಗೂ ಸಂಘದ ಹಿರಿಯ ಸದಸ್ಯರಾದ ಹೆಚ್.ಕೆ ಕೃಷ್ಣ, ಹನ ಗೋಡ್ ನಟರಾಜ್, ಕೆ.ಕೃಷ್ಣ, ವೆಂಕಟಪ್ಪ, ಚುಕ್ಕಿ ಮಹದೇವ್, ಕೆ.ಪ್ರತಾಪ್,ಸಂಪತ್ ಕುಮಾರ್, ದಯಾಜರ್, ರಫೀಕ್ ಸ್ವಾಮಿಗೌಡ, ಗಜೇಂದ್ರ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಸರ್ವ ಸದಸರು ಇದ್ದರು.

ಪ್ರೋತ್ಸಾಹ ಧನಕ್ಕೆ ಅರ್ಜಿ ಆಹ್ವಾನ

ಮೈಸೂರು, ನ. 11– ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2023–24ನೇ ಶೈಕ್ಷಣಿಕ ಸಾಲಿನಲ್ಲಿ ಮೆಟ್ರಿಕ್ ನಂತರದ ದ್ವಿತೀಯ ಪಿ.ಯು.ಸಿ, 3 ವರ್ಷದ ಪಾಲಿಟೆಕ್ನಿಕ್ ಡಿಪ್ಲೋಮಾ, ಪದವಿ, ಸ್ನಾತಕೋತ್ತರ ಪದವಿ ಹಾಗೂ ವೃತ್ತಿಪರ ಕೋರ್ಸ್‌ಗಳನ್ನು ಪೂರ್ಣಗೊಳಿಸಿ ಪ್ರಥಮ ಪ್ರಯತ್ನದಲ್ಲಿ, ಪ್ರಥಮ ಶ್ರೇಣಿಯಲ್ಲಿ (60%ಕ್ಕಿಂತ ಹೆಚ್ಚು ಅಂಕ ಪಡೆದು) ಉತ್ತೀರ್ಣರಾದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 0821–2520910 ಅನ್ನು ಸಂಪರ್ಕಿಸಬಹುದು.

ಬಿಜೆಪಿ ನೂತನ ರಾಜ್ಯಾಧ್ಯಕ್ಷ ವಿಜಯೇಂದ್ರರಿಗೆ ಅಭಿನಂದನೆ

ಬೂತ್ ಮಟ್ಟದಿಂದ ಪಕ್ಷ ಸಂಘಟಿಸಿ ಲೋಕಸಭೆಗೆ ಸಿದ್ಧರಾಗಲು ಕರೆ



ತಿ.ನರಸೀಪುರ, ನ.11– ಬಿಜೆಪಿ ಕಾರ್ಯಕರ್ತರು ಬೂತ್ ಮಟ್ಟದಿಂದ ಸಂಘಟಿಸಿ ಲೋಕಸಭಾ ಚುನಾವಣೆಗೆ ಸಜ್ಜಾಗಬೇಕೆಂದು ಬಿಜೆಪಿ ನೂತನ ರಾಜ್ಯಾಧ್ಯಕ್ಷ ಹಾಗೂ ಶಿಕಾರಿಪುರದ ಕ್ಷೇತ್ರದ ಶಾಸಕ ಬಿ.ವೈ.ವಿಜಯೇಂದ್ರ ಯಡಿಯೂರಪ್ಪ ಹೇಳಿದರು.

ವರುಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಯುವ ಮುಖಂಡ ಬಾಗಳೀ ಯೋಗೇಶ್ ನೇತೃತ್ವದಲ್ಲಿ ಕಾರ್ಯಕರ್ತರು ಅಭಿಮಾನಿಗಳು ಬೆಂಗಳೂರಿನ ತಮ್ಮ ನಿವಾಸದಲ್ಲಿ ಸನ್ಮಾನಿಸಿದ ನಂತರ ಮಾತನಾಡಿದ ಅವರು, ಬೂತ್ ಮಟ್ಟದಲ್ಲಿ ಗೆದ್ದರೆ ರಾಷ್ಟ್ರ ಗೆದ್ದಂತೆ ಎಂಬುದು ಜೆಪಿ ನಡ್ಡಾ ಅವರ ಕಲ್ಪನೆ. ಹೀಗಾಗಿ ಬೂತ್ ಮಟ್ಟದಲ್ಲಿ ಪಕ್ಷ ಸಂಘಟನೆ ಮಾಡುವಂತೆ ಕಾರ್ಯಕರ್ತರಿಗೆ ಕರೆ ನೀಡಿದರು.

ಬೂತ್ ಮಟ್ಟದಲ್ಲಿ ಕೆಲಸ ಮಾಡಿ ಹಲವು ನಾಯಕರು ಬೆಳೆದಿದ್ದಾರೆ. ಹೀಗಾಗಿ ಎಲ್ಲರನ್ನೂ ಒಗ್ಗೂಡಿಸಿ ಬೂತ್ ಮಟ್ಟದಲ್ಲಿ ಪಕ್ಷವನ್ನು ಸಂಘಟನೆ ಮಾಡುತ್ತೇವೆ ಎಂದ ಅವರು, ವರುಣ ಕ್ಷೇತ್ರದಲ್ಲಿ ಈ ಬಾರಿ ಲೋಕಸಭಾ ಚುನಾವಣೆಯಾಗಲಿ ಅದು ಜಿಪಂ, ತಾಪಂ ಚುನಾವಣೆಯಾಗಲಿ ಯಾರೇ ಅಭ್ಯರ್ಥಿಯಾದರೂ ನಾನೇ ಅಭ್ಯರ್ಥಿ ಎಂದು ಕೆಲಸ ಮಾಡಿ ಅಧಿಕಾರ ಹಿಡಿಯುವಲ್ಲಿ ಯಶಸ್ವಿಯಾಗಬೇಕು ಎಂದರು.

ಬಾಗಳಿ ಯೋಗೇಶ್, ವಿಜಯೇಂದ್ರ ಅಭಿಮಾನಿ ಬಳಗದ ಅಧ್ಯಕ್ಷ ಮಹೇಶ್, ತಿರುಮ ಕೂಡಲು ದೀಪು, ಹೆಳವರ ಹುಂಡಿ ವಿ.ಜಿ.ನಂದೀಶ, ನಂದ, ಕಿಚ್ಚ ಕುಮಾರ್, ಬೈರಾಪುರ ದಿಲೀಪ್ ಮತ್ತಿತರರಿದ್ದರು

ಹಾಸನಾಂಬೆ ದರ್ಶನ ಪಡೆದ ಹೆಚ್.ಪಿ.ಮಂಜುನಾಥ್, ಕುಟುಂಬ



ಹುಣಸೂರು, ನ.11– ಹಾಸನದ ವಿಶ್ವ ವಿಖ್ಯಾತ ಹಾಸನಾಂಬ ದೇವಾಲಯಕ್ಕೆ ಶನಿವಾರ ಹುಣಸೂರಿನ ಮಾಜಿ ಶಾಸಕ ಎಚ್.ಪಿ.ಮಂಜುನಾಥ್ ಅವರು ತಮ್ಮ ಕುಟುಂಬ ಸಮೇತರಾಗಿ ಭೇಟಿ ನೀಡಿ ಹಾಸನಾಂಬ ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಹಾಸನಾಂಬ ಜಾತ್ರಾ ಮಹೋತ್ಸವ ಸಮಿತಿ ಹಾಗೂ ಜಿಲ್ಲಾಡಳಿತ ವತಿಯಿಂದ ಎಚ್.ಪಿ. ಮಂಜುನಾಥ್ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಜಿಗರ್ ಥಂಡ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಘೋಸ್ಟ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಯಾರಿಯನ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಗರಡಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲಿಯೋ (ಕ)	2 ಪ್ರದರ್ಶನಗಳು
ರಾಜಕಮಲ್	
ರೈಡ್ (ತ)	4 ಪ್ರದರ್ಶನಗಳು
ಸಂಗಂ	
ಟಗರುಪಲ್ಯ(ಕ)	4 ಪ್ರದರ್ಶನಗಳು
ಲಿಡೋ	
ಗರಡಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಟೈಗರ್ ನಾಗೇಶ್ವರರಾವ್ (ತ)	4 ಪ್ರದರ್ಶನಗಳು
ಪ್ರಭಾ	

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	**ಗರಡಿ (ಕ)**: ಬೆ.10.10ಕ್ಕೆ, ಮ.1.10ಕ್ಕೆ, ರಾ.7ಕ್ಕೆ, ರಾ.9.55ಕ್ಕೆ, **ಟಗರುಪಲ್ಯ (ಕ)**: ಸಂ.4.15ಕ್ಕೆ.
ಸ್ಕ್ರೀನ್ 2	**ಘೋಸ್ಟ್ (ಕ)**: ಬೆ.10.10ಕ್ಕೆ, **ಜಿಗರ್‌ಥಂಡ ಡಬಲ್ x (ತ)**: ಮ.1ಕ್ಕೆ, ಸಂ.6.50ಕ್ಕೆ, **ರೈಡ್ (ತ)**: ಸಂ.4.25ಕ್ಕೆ, **ಟಗರುಪಲ್ಯ (ಕ)**: ರಾ.10.05ಕ್ಕೆ.
ಸ್ಕ್ರೀನ್ 3	**ಜಪಾನ್ (ತ)**: ಬೆ.10.15ಕ್ಕೆ, ಸಂ.4ಕ್ಕೆ, ರಾ.7ಕ್ಕೆ, **ಟಗರುಪಲ್ಯ (ಕ)**: ಮ.1.20ಕ್ಕೆ, **ಬಂದ್ರ (ಮ)**: ರಾ.10ಕ್ಕೆ.
ಸ್ಕ್ರೀನ್ 4	**ದಿ ಮಾರ್ವೆಲ್ಸ್ (3ಡಿ)(ಇಂ)**: ಬೆ.8.30ಕ್ಕೆ, ಬೆ.10.45ಕ್ಕೆ, ಮ.1.05ಕ್ಕೆ, ಮ.3.25ಕ್ಕೆ, ಸಂ.5.40ಕ್ಕೆ, ರಾ.7.55ಕ್ಕೆ, ರಾ.10.15ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	**ದಿ ಮಾರ್ವೆಲ್ಸ್ (3ಡಿ)(ಇಂ)**: ಬೆ.9.30ಕ್ಕೆ, ಮ.12ಕ್ಕೆ, ಮ.2.30ಕ್ಕೆ, ಸಂ.5ಕ್ಕೆ, ರಾ.7.30ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	**ಗರಡಿ (ಕ)**: ರಾ.10.15ಕ್ಕೆ, ಮ.1.20ಕ್ಕೆ, ರಾ.7.15ಕ್ಕೆ, **ಟಗರುಪಲ್ಯ (ಕ)**: ಮ.12.55ಕ್ಕೆ, **ಜಿಗರ್‌ಥಂಡ ಡಬಲ್ x (ತ)**: ರಾ.10.20ಕ್ಕೆ.
ಸ್ಕ್ರೀನ್ 3	**ಜಿಗರ್‌ಥಂಡ ಡಬಲ್ x (ತ)**: ಬೆ.10.35ಕ್ಕೆ, ಮ.2.10ಕ್ಕೆ, ಸಂ.5.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 4	**ಜಪಾನ್ (ತ)**: ಬೆ.9.30ಕ್ಕೆ, ಮ.12.45ಕ್ಕೆ, ಸಂ.4ಕ್ಕೆ, ರಾ.7.15ಕ್ಕೆ, ರಾ.10.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	**ಸೈಕಲ್ ಸವಾರಿ (ಕ)**: ಬೆ.10.30ಕ್ಕೆ, **ಕ್ರೇಜಿ ಕೀರ್ತಿ (ಕ)**: ಮ.1.30ಕ್ಕೆ, **ಗರುಡ ಪುರಾಣ (ಕ)**: ಸಂ.4ಕ್ಕೆ, **ಬಸ್ರಿಕಟ್ಟೆ (ಕ)**: ಸಂ.6.45ಕ್ಕೆ, **ಲಿಯೋ (ತ)**: ರಾ.9.15ಕ್ಕೆ.
ಸ್ಕ್ರೀನ್ 2	**ಟಗರುಪಲ್ಯ (ಕ)**: ಬೆ.10.45ಕ್ಕೆ, ಮ.1.40ಕ್ಕೆ, ಸಂ.4.30ಕ್ಕೆ, ರಾ.7.15ಕ್ಕೆ
ಸ್ಕ್ರೀನ್ 3	**ಲಿಯೋ (ತ)**: ಮ.1.30ಕ್ಕೆ, ರಾ.7ಕ್ಕೆ
ಸ್ಕ್ರೀನ್ 4	**ಘೋಸ್ಟ್ (ಕ)**: ಬೆ.10.30ಕ್ಕೆ, ಸಂ.4.10ಕ್ಕೆ, ಸಂ.6.45ಕ್ಕೆ, **ಲಿಯೋ (ಕ)**: ಮ.1.05ಕ್ಕೆ, **ಟಗರುಪಲ್ಯ (ಕ)**: ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಘೋಸ್ಟ್ (ಕ): ಬೆ.9ಕ್ಕೆ, ಬೆ.10.20ಕ್ಕೆ, ಮ.1.15ಕ್ಕೆ, ಮ.3.20ಕ್ಕೆ, ರಾ.7.35ಕ್ಕೆ, ರಾ.9.45ಕ್ಕೆ, ರಾ.10.30ಕ್ಕೆ, **12th ಫೇಲ್ (ಹಿಂ)**: ಮ.3.50ಕ್ಕೆ, **ಭಗವಂತ್ ಕೇಸರಿ (ತೆ)**: ರಾ.7.05ಕ್ಕೆ, **ಗಣಪತ್: ಎ ಹೀರೋ (ಹಿಂ)**: ಸಂ.4.10ಕ್ಕೆ, **ಕಿಲ್ಲರ್ಸ್ ಆಫ್ ಫ್ಲವರ್ ಮೂನ್ (ಇಂ)**: ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ, **ಲಿಯೋ (ಕ)**: ಮ.12.45ಕ್ಕೆ, **ಲಿಯೋ (ತ)**: ಬೆ.11.55ಕ್ಕೆ, ಸಂ.4.10ಕ್ಕೆ, ಸಂ.6.15ಕ್ಕೆ, ರಾ.9.40ಕ್ಕೆ, ರಾ.10.30ಕ್ಕೆ, **ಮುಜಿಬ್ ದಿ ಮೇಕಿಂಗ್ ಆಫ್ ಎ ನೇಷನ್ (ಹಿಂ)**: ರಾ.10ಕ್ಕೆ, **ಟಗರುಪಲ್ಯ (ಕ)**: ಮ.1ಕ್ಕೆ, ರಾ.7ಕ್ಕೆ, **ತೇಜಸ್ (ಹಿಂ)**: ಬೆ.11.05ಕ್ಕೆ, ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಹುಲಿ ದಾಳಿ: ಕುಟುಂಬ ಭೇಟಿ ಮಾಡಿದ ಅರಣ್ಯ ಅಧಿಕಾರಿ

ಹನಗೋಡು, ನ.11– ನಾಗರಹೊಳೆ ಕಾಡಂಚಿನ ಗ್ರಾಮಗಳಲ್ಲಿ ಮಾನವ ವನ್ಯಜೀವಿ ಸಂಘರ್ಷ ಹೆಚ್ಚಾಗುತ್ತಿದ್ದು, ಗ್ರಾಮಸ್ಥರು ಅರಣ್ಯ ಇಲಾಖೆಯೊಂದಿಗೆ ಜಟಾಪಟಿ ನಡೆಸುವುದನ್ನು ಬಿಟ್ಟು ಇನ್ನು ಮುಂದೆ ಒಬ್ಬರಿಗೊಬ್ಬರು ಸಹಕಾರ ನೀಡುವಂತಾಗಬೇಕು ಎಂದು ಹುಲಿ ಯೋಜನೆ ನಿರ್ದೇಶಕ ಹರ್ಷ ಕುಮಾರ್ ಗ್ರಾಮಸ್ಥರಲ್ಲಿ ಮನವಿ ಮಾಡಿದರು.

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ಮುದ್ದನಹಳ್ಳಿಕೊಪ್ಪಲು ಗ್ರಾಮದಲ್ಲಿ ಕಳೆದೊಂದು ತಿಂಗಳ ಹಿಂದೆ ಹುಲಿ ದಾಳಿಗೆ ಒಳಗಾಗಿದ್ದ ರಮೇಶ್ ಅವರ ಮನೆಗೆ ಭೇಟಿ ನೀಡಿ, ಆರೋಗ್ಯ ವಿಚಾರಿಸಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಕಾಡಂಚಿನ ಗ್ರಾಮಗಳಲ್ಲಿ ಮಾನವ ವನ್ಯಜೀವಿ ಸಂಘರ್ಷ ಹೆಚ್ಚಾಗುತ್ತಿದೆ ಎಂದರು.

ಕಾಡಂಚಿನಲ್ಲಿ ವಾಸವಿರುವ ರೈತರು ಜಾಗರೂಕತೆಯಿಂದ ಜೀವನ ನಡೆಸಬೇಕೆಂದು ಮನವಿ ಮಾಡಿ ಗಾಯಾಳು ರಮೇಶ್ ಅವರಿಗೆ ಅರಣ್ಯ ಇಲಾಖೆಯಿಂದ ಈಗಾಗಲೇ ಚಿಕಿತ್ಸೆಗೆ ಸಹಕಾರ ನೀಡಿದ್ದು ಮುಂದೆಯೂ ಸರ್ಕಾರದಿಂದ ಸೂಕ್ತ ಪರಿಹಾರ ದೊರಕುವಂತೆ ಕ್ರಮ ಕೈಗೊಳ್ಳಲಾಗುವುದು ಎಂದು ಕುಟುಂಬದವರಿಗೆ ಭರವಸೆ ನೀಡಿದರು.

ಈ ವೇಳೆ ಆರ್‌ಎಫ್‌ಒ ಸುಬ್ರಮಣಿ, ಡಿಆರ್‌ಎಫ್‌ಒ ಮನೋಹರ್ ಇದ್ದರು.



ಹುಲಿ ದಾಳಿಗೊಳಗಾದ ಕುಟುಂಬದವರೊಂದಿಗೆ ಚರ್ಚಿಸುತ್ತಿರುವ ಅಧಿಕಾರಿ

ರುಡ್‌ಸೆಟ್‌ನಿಂದ ಟೈಲರಿಂಗ್ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು, ನ. 11– ಮೈಸೂರಿನ ರುಡ್‌ಸೆಟ್ ಸಂಸ್ಥೆಯಲ್ಲಿ ಗ್ರಾಮೀಣ ಪ್ರದೇಶದ ನಿರುದ್ಯೋಗಿ ಯುವತಿಯರಿಗಾಗಿ ಸ್ವಉದ್ಯೋಗ ಮಾಡಲು ಮಹಿಳೆಯರ ಟೈಲರಿಂಗ್ ತರಬೇತಿಯನ್ನು ನ. 16 ರಿಂದ ಡಿ.14 ರವರೆಗೆ (30 ದಿನಗಳು) ಹಮ್ಮಿಕೊಳ್ಳಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂ. 0821–2519663, 9844013948, 9880196581, 6361019245, 9740430061, 8746803006 ಸಂಪರ್ಕಿಸಬಹುದು.

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀಮಾನ್ ಪ್ರಕಾಶ್. ಸಿ ರವರು

(ಲೇಟ್ ಲಕ್ಕಣ್ಣ ಕುಳ್ಳೇಗೌಡರ ಚಲುವೇಗೌಡರ ಮಗ)

ಮನೆ ನಂ.46/1, ಕೊನೆ ಬಸ್ ನಿಲ್ದಾಣದ ಹತ್ತಿರ, ಕುಂಬಾರಕೊಪ್ಪಲು, ಮೈಸೂರು–16

ಇವರು ದಿ:02–11–2023 ಗುರುವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ಮೃತರ **ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿ: 12–11–2023 ಭಾನುವಾರ** ಬೆ.11.00 ಗಂಟೆಗೆ **ಕುಂಬಾರಕೊಪ್ಪಲು ರುಧ್ರಭೂಮಿ** ಇಲ್ಲಿ ಏರ್ಪಡಿಸಲಾಗಿದೆ. **ಭೋಜನ ಮಹದೇಶ್ವರ ಸಮುದಾಯ ಭವನ ಕುಂಬಾರಕೊಪ್ಪಲು, ಮೈಸೂರು** ಇಲ್ಲಿ ಏರ್ಪಡಿಸಲಾಗಿದೆ. ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು: ಮೃತರ ಪತ್ನಿ ಶ್ರೀಮತಿ ಚಂದ್ರಿಕಾ, ಮಕ್ಕಳಾದ: ಚಿತ್ರಶ್ರೀ ಪಿ., ಮಾನಸ ಪಿ., ಗೆಲುವಂತ್ ಎಂ ಗೌಡ ಸಹೋದರರು, ಸಹೋದರಿಯರು, ಭಾವಂದಿರು, **ಭಾವ: ಹರೀಶ್‌ಗೌಡರು** ಹಾಗೂ ಕುಟುಂಬವರ್ಗದವರು

ಹರೀಶ್‌ಗೌಡರು, ಶಾಸಕರು ಹಾಗೂ ಪೈ॥ ಶ್ರೀನಿವಾಸ್, ಮಹಾನಗರ ಪಾಲಿಕೆ ಸದಸ್ಯರು, ಮೈಸೂರು, ಲೇ॥ ಬೈರೇಗೌಡರು





44 ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತು ದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು